ಸೋಮವಾರ, ಜೂನ್ 2, 2025 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರವಾಹ

ಅಸ್ಸಾಂನ ನಗಾಂವ್ ಜಿಲ್ಲೆಯ ಪ್ರವಾಹ ಪೀಡಿತ ಕಂಪುರ ಗ್ರಾಮದಲ್ಲಿ ವ್ಯಕ್ತಿಯೊಬ್ಬರು ತಮ್ಮ ಕುರಿಯನ್ನು ಎತ್ತಿಕೊಂಡು ಸುರಕ್ಷಿತ ಪ್ರದೇಶದತ್ತ ತೆರಳಿದರು

ಎಎಫ್‌ಪಿ ಚಿತ್ರ



ಕೇಂದ್ರ, ರಾಜ್ಯಗಳ ತಿಕ್ಕಾಟದ ನಡುವೆ ಬಡವಾದ ಬಿಎಸ್‌ಆರ್‌ಪಿ • ಭೂ ಹಸ್ತಾಂತರ ವಿಳಂಬದಿಂದ ಕಂಪನಿಗೆ ನಷ್ಟ

ಉಪನಗರ ರೈಲು: ಸ್ಥಗಿತಗೊಂಡ ಕಾಮಗಾರಿ

• ಬಾಲಕೃಷ್ಣ ಪಿ.ಎಚ್.

ಕಾರಿಡಾರ್‌ಗಳು

1 41.4 ಕಿ.ಮೀ. ಸಂಪಿಗೆ ಮಾರ್ಗ	2 25.57 ಕಿ.ಮೀ. ಮಲ್ಲಿಗೆ ಮಾರ್ಗ	3 35.52 ಕಿ.ಮೀ. ಪಾರಿಜಾತ ಮಾರ್ಗ	4 46.88 ಕಿ.ಮೀ. ಕನಕ ಮಾರ್ಗ

₹15,767 ಯೋಜನೆಯ ಒಟ್ಟು ವೆಚ್ಚ

20% ಕೇಂದ್ರ ಸರ್ಕಾರದ ಪಾಲು

20% ರಾಜ್ಯ ಸರ್ಕಾರದ ಪಾಲು

60% ಬಾಹ್ಯ ಹಣಕಾಸು ಸಂಸ್ಥೆಗಳ ನಿಧಿ



ಬೆಂಗಳೂರು ಉಪನಗರ ರೈಲು ಯೋಜನೆಯ ಸ್ಮಾರ್ಟ್ ನಿಲ್ದಾಣದ ಮಾದರಿ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಸರಿಯಾದ ಬೆಂಬಲ ಸಿಗದೇ ಆಮೆಗತಿಯಲ್ಲಿ ಸಾಗುತ್ತಿದ್ದ ಬೆಂಗಳೂರು ಉಪನಗರ ಯೋಜನೆಯ (ಬಿಎಸ್‌ಆರ್‌ಪಿ) ಕಾಮಗಾರಿ ಈಗ ಸ್ಥಗಿತಗೊಂಡಿದೆ. ಕಾಮಗಾರಿ ಆರಂಭಿಸಲು ಗುತ್ತಿಗೆ ಕಂಪನಿ ಮತ್ತು ಕೆ-ರೈಡ್ ನಡುವೆ ಮಾತುಕತೆ ನಡೆಯುತ್ತಿದೆ.

ಜಮೀನು ಹಸ್ತಾಂತರ ಪ್ರಕ್ರಿಯೆಯನ್ನೇ ಸಂಪೂರ್ಣ ಮಾಡಿಲ್ಲ. ಒಪ್ಪಂದ ಮಾಡಿಕೊಂಡರು, ಖಾಸಗಿ ಜಮೀನಿನ ಮಾಲೀಕರು ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ಹಸ್ತಾಂತರವಾಗಿರುವ ಜಮೀನಿನಲ್ಲಷ್ಟೇ ಕೆಲಸ ಮಾಡಿ, ಮಧ್ಯೆ ಮಧ್ಯೆ ಹಾಗೇ ಬಿಡಬೇಕಿದ್ದರೆ ಕಾಮಗಾರಿ ಪೂರ್ಣಗೊಳಿಸುವುದು ಹೇಗೆ? ಕೆಲಸ ಸ್ಥಗಿತಗೊಳಿಸುವುದು ಬಿಟ್ಟು ಬೇರೆ ದಾರಿ ಇಲ್ಲ ಎಂದು ಗುತ್ತಿಗೆದಾರ ಕಂಪನಿ 'ಎಲ್ ಆ್ಯಂಡ್ ಟಿ'ಯ ಎಂಜಿನಿಯರ್ ತಿಳಿಸಿದ್ದಾರೆ.

ಭೂ ಹಸ್ತಾಂತರ ವಿಳಂಬ ಸಹಿತ ವಿವಿಧ ಕಾರಣಗಳಿಂದ ಕಂಪನಿಗೆ ನಷ್ಟ ಉಂಟಾಗಿದ್ದು, ₹500 ಕೋಟಿ ಪರಿಹಾರ ನೀಡಬೇಕು ಎಂದು ಎಲ್ ಆ್ಯಂಡ್ ಟಿ ಕಂಪನಿಯು ಕೆ-ರೈಡ್‌ಗೆ ಪತ್ರ ಬರೆದಿದೆ. ಅಲ್ಲದೇ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಮತ್ತು ಯಂತ್ರೋಪಕರಣವನ್ನು ಅಲ್ಲಿಂದ ಸ್ಥಳಾಂತರ ಮಾಡಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ತಿಕ್ಕಾಟವು ಯೋಜನೆಯ ಪ್ರಗತಿಯ ಮೇಲೆ ಅಡ್ಡ ಪರಿಣಾಮ ಉಂಟುಮಾಡಿದೆ. ಸಮರ್ಪಕ ಸರಿಯಾಗಿ ಜಮೀನು ಹಸ್ತಾಂತರ ಆಗದೇ ಇರುವುದಲ್ಲದೇ ಬೇರೆ ಬೇರೆ ಕಾರಣಗಳಿಂದಾಗಿ ಕಾಮಗಾರಿ ವಿಳಂಬವಾಗಿತ್ತು. ತಾಂತ್ರಿಕ ತಜ್ಞರು ವ್ಯವಸ್ಥಾಪಕ ನಿರ್ದೇಶಕರಾಗಬೇಕು ಎಂದು ರೈಲ್ವೆ ಬಯಸಿದರೆ, ಐಎಎಸ್ ಅಧಿಕಾರಿಗಳೇ ಇರಬೇಕು ಎನ್ನುವುದು ರಾಜ್ಯ ಸರ್ಕಾರದ ನಿರ್ಧಾರ. ಇದರಿಂದಾಗಿ ಕೆ-ರೈಡ್‌ಗೆ ಪೂರ್ಣಾವಧಿ ವ್ಯವಸ್ಥಾಪಕ ನಿರ್ದೇಶಕರು ಇಲ್ಲದಂತಾಗಿದೆ. ಕೆ-ರೈಡ್ ಮತ್ತು ನೈರುತ್ಯ ರೈಲ್ವೆ ನಡುವೆ ಸಮನ್ವಯದ ಕೊರತೆ, ತಡವಾಗುತ್ತಿರುವ ನಿರ್ಧಾರ, ಹಣಕಾಸು ಬಿಡುಗಡೆಯಲ್ಲಿ ವಿಳಂಬ ಎಲ್ಲ ಸೇರಿ ಈಗ ಕಾಮಗಾರಿ ಸ್ಥಗಿತಗೊಳ್ಳುವಂತಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಬಿಎಸ್‌ಆರ್‌ಪಿ ಯೋಜನೆ: ಉಪನಗರ ರೈಲು ಯೋಜನೆಯ ಪ್ರಸ್ತಾವ 1985ರಿಂದಲೇ ಇತ್ತು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರ 2018ರಲ್ಲಿ ನಿರ್ಧರಿಸಿತ್ತು. 2020ರಲ್ಲಿ ಅನುಮೋದನೆ ನೀಡಿತ್ತು. ಕೋವಿಡ್, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಹೊಂದಾಣಿಕೆ ಕೊರತೆ ಕಾರಣಗಳಿಂದಾಗಿ ಮತ್ತೆರಡು ವರ್ಷ ಕಾಮಗಾರಿ ಆರಂಭವಾಗಲಿಲ್ಲ.

'40 ವರ್ಷಗಳಿಂದ ಆಗದ ಯೋಜನೆ 40 ತಿಂಗಳಲ್ಲಿ ಪೂರ್ಣಗೊಳ್ಳಲಿದೆ' ಎಂದು 2022ರಲ್ಲಿ ಬೆಂಗಳೂರಿಗೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಘೋಷಿಸಿದ್ದರು. ಅನಂತರ ಯೋಜನೆ ವೇಗ ಪಡೆದುಕೊಂಡಿತ್ತು.

ಕಾರಿಡಾರ್–2 (ಚಿಕ್ಕಬಾಣಾವರ–ಬೈಯಪ್ಪನಹಳ್ಳಿ) 2022ರ ಡಿಸೆಂಬರ್‌ನಲ್ಲಿ ಕಾಮಗಾರಿ ಆರಂಭವಾಯಿತು. ಕಾರಿಡಾರ್–4ರ (ಹೀಲಳಿಗೆ–ರಾಜಾನುಕುಂಟೆ) ಟೆಂಡರ್ ಪ್ರಕ್ರಿಯೆ 2023ರ ಡಿಸೆಂಬರ್‌ನಲ್ಲಿ ನಡೆಯಿತು. ಎರಡೂ ಕಾರಿಡಾರ್‌ಗಳನ್ನು ನಿರ್ಮಿಸಲು ಎಲ್ ಆ್ಯಂಡ್ ಟಿ ಕಂಪನಿ ಗುತ್ತಿಗೆ ಪಡೆದಿತ್ತು. ಕಾರಿಡಾರ್–1 (ಬೆಂಗಳೂರು ನಗರ–ದೇವನಹಳ್ಳಿ), ಕಾರಿಡಾರ್–3ಕ್ಕೆ (ಕೆಂಗೇರಿ–ವೈಟ್‌ಫೀಲ್ಡ್) ಚಾಲನೆ ದೊರೆತಿಲ್ಲ. ನಡೆಯುತ್ತಿದ್ದ ಕಾಮಗಾರಿಗಳೂ ನಿಂತುಹೋಗಿವೆ.

'ಸಮಗ್ರವಾಗಿ ಗೊತ್ತಿಲ್ಲ, ಯಾವುದೇ ಮಾಹಿತಿ ಇಲ್ಲ' ಎಂದು ಕೆ-ರೈಡ್ ಅಧಿಕಾರಿಗಳು ಪ್ರತಿಕ್ರಿಯಿಸುತ್ತಿದ್ದಾರೆ. ಹೆಚ್ಚುವರಿಯಾಗಿ ವ್ಯವಸ್ಥಾಪಕ ನಿರ್ದೇಶಕರಾಗಿರುವ ಎಸ್. ಮಂಜುಳಾ ಅವರು 'ಬ್ಯುಸಿ' ಇರುವುದಾಗಿ ತಿಳಿಸಿದ್ದು, ಕಾಮಗಾರಿ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.

ಜನಪ್ರತಿನಿಧಿಗಳ ನಿರ್ಲಕ್ಷ್ಯ

ನಾಲ್ಕು ಕಾರಿಡಾರ್‌ಗಳನ್ನು ಮುಗಿಸಲು ಪ್ರಧಾನಿ ನರೇಂದ್ರ ಮೋದಿ ಅವರು ನೀಡಿದ್ದ 40 ತಿಂಗಳ ಗಡುವಿನಲ್ಲಿ 35 ತಿಂಗಳು ಮುಗಿದಿದೆ. ಐದು ತಿಂಗಳಷ್ಟೇ ಉಳಿದಿದೆ. ನಾಲ್ಕರಲ್ಲಿ ಒಂದು ಕಾರಿಡಾರ್ ಕೂಡ ಪೂರ್ಣಗೊಳ್ಳುವುದಿಲ್ಲ. 2026ರಲ್ಲಿ ಎರಡನೇ ಕಾರಿಡಾರ್‌ನಲ್ಲಿ ಚಿಕ್ಕಬಾಣಾವರದಿಂದ ಯಶವಂತಪುರದವರೆಗೆ ರೈಲು ಸಂಚರಿಸುವಂತೆ ಮಾಡುವ ಗುರಿಯನ್ನು ಕೆ-ರೈಡ್ ಇಟ್ಟುಕೊಂಡಿತ್ತು. ಅದೂ ನೆರವೇರುವ ಲಕ್ಷಣ ಕಾಣಿಸುತ್ತಿಲ್ಲ. ಸಂಸದರಾದ ಶೋಭಾ ಕರಂದ್ಲಾಜೆ, ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಕೆ. ಸುಧಾಕರ್, ಸಿ.ಎನ್. ಮಂಜುನಾಥ್ ಅವರ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಈ ಯೋಜನೆ ಇದೆ. ಇವರಲ್ಲಿ ಯಾರೂ ಬಿಎಸ್‌ಆರ್‌ಪಿಯನ್ನು ಗಂಭೀರವಾಗಿ ತೆಗೆದುಕೊಂಡಿಲ್ಲ. ಪ್ರಗತಿ ಪರಿಶೀಲನಾ ಸಭೆ ನಡೆಸಿಲ್ಲ. ರಾಜ್ಯ ಸರ್ಕಾರವೂ ನಿರ್ಲಕ್ಷಿಸಿದೆ. ಬೆನ್ನತ್ತಿ ಕೆಲಸ ಮಾಡಿಸುವ ಜನಪ್ರತಿನಿಧಿಗಳು, ಅಧಿಕಾರಿಗಳು ಇಲ್ಲದೇ ಇರುವುದರಿಂದ ಈಗ ಕಾಮಗಾರಿಯೇ ಸ್ಥಗಿತಗೊಂಡಿದೆ.

ರಾಜಕುಮಾರ್ ದುಗರ್, 'ಸಿಟಿಜನ್ಸ್ ಫಾರ್ ಸಿಟಿಜನ್ಸ್' ಸಂಸ್ಥಾಪಕ

ಹೊಣೆಗಾರಿಕೆಯಿಂದ ಜಾರಿಕೊಳ್ಳುತ್ತಿದ್ದಾರೆ

ಪೂರ್ಣಾವಧಿ ವ್ಯವಸ್ಥಾಪಕ ನಿರ್ದೇಶಕರನ್ನು ರಾಜ್ಯ ಸರ್ಕಾರ ನೇಮಿಸಿಲ್ಲ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇತ್ತೀಚೆಗೆ ದೂರಿದ್ದಾರೆ. ಆದರೆ, ಅವರದ್ದೇ ರೈಲ್ವೆಯಿಂದ ಜಮೀನು ಹಸ್ತಾಂತರ ವಿಳಂಬವಾಗಿದೆ. ಒಬ್ಬರಿಗೊಬ್ಬರು ಹೊಣೆಗಾರಿಕೆಯಿಂದ ಜಾರಿಕೊಳ್ಳಲು ಆರೋಪಿಸುತ್ತಾ ಇದ್ದಾರೆಯೇ ಹೊರತು, ಹೇಗೆ ಕಾಮಗಾರಿ ಪೂರ್ಣಗೊಳಿಸುವುದು ಎಂದು ಚಿಂತನೆ ನಡೆಸುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಈ ಕಿತ್ತಾಟದ ನಡುವೆ ಯೋಜನೆ ಅನುಷ್ಠಾನಗೊಳಿಸಬೇಕಾದ ಕೆ-ರೈಡ್ ಬಡವಾಗಿದೆ. ಈಗಿನ ಸ್ಥಿತಿ ನೋಡಿದರೆ ನನ್ನ ಜೀವಿತಾವಧಿಯಲ್ಲಿ ಉಪನಗರ ರೈಲು ಸಂಚರಿಸುವುದನ್ನು ನೋಡುವ ಅವಕಾಶ ಸಿಗುವುದು ಅನುಮಾನ.

ಕೆ.ಎನ್. ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

ಸುದ್ದಿ 2 ನಿಮಿಷ

ನೀರು ಸರಬರಾಜು ನೌಕರರಿಂದ 'ಚಲೋ ಬೆಂಗಳೂರು' ಜೂ. 18ಕ್ಕೆ

ಬೆಂಗಳೂರು: ರಾಜ್ಯದ ಮಹಾನಗರಪಾಲಿಕೆ, ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳಲ್ಲಿ ಕೆಲಸ ಮಾಡುವ ನೀರು ಸರಬರಾಜು ನೌಕರರನ್ನು ನೇರ ನೇಮಕಾತಿ ಇಲ್ಲವೇ ನೇರ ಪಾವತಿ ವ್ಯವಸ್ಥೆಗೆ ಒಳಪಡಿಸಬೇಕು ಎಂದು ಆಗ್ರಹಿಸಿ ಜೂನ್ 18 ರಿಂದ 'ಚಲೋ ಬೆಂಗಳೂರು' ನಡೆಸಿ, ಮುಷ್ಕರ ಹಮ್ಮಿಕೊಳ್ಳಲು ರಾಜ್ಯ ನೀರು ಸರಬರಾಜು ನೌಕರರ ಮಹಾ ಸಂಘ ನಿರ್ಧರಿಸಿದೆ.


ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಂಘದ ಅಧ್ಯಕ್ಷ ಪಾವಗಡ ಶ್ರೀರಾಮ್, 'ನೇರ ನೇಮಕಾತಿ ಮಾಡುವುದಾಗಿ 2016ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದರು. 2018ರವರೆಗೆ ಅವರೇ ಮುಖ್ಯಮಂತ್ರಿಯಾಗಿದ್ದರೂ ನೇರ ನೇಮಕಾತಿ ಮಾಡಲಿಲ್ಲ. ಅನಂತರ ಐದು ವರ್ಷಗಳ ಬಳಿಕ ಅವರೇ ಮುಖ್ಯಮಂತ್ರಿ ಆದರೂ ನೇರ ನೇಮಕಾತಿ ಮಾಡಿಲ್ಲ' ಎಂದು ದೂರಿದರು.

ವಿಶೇಷ ನೇಮಕಾತಿ, ನೇರ ನೇಮಕಾತಿ ಮಾಡುವ ಸಂಬಂಧ ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆದಿತ್ತು. ಅನಂತರ ರಾಜ್ಯದ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಿಂದ ಮಾಹಿತಿ ಪಡೆದುಕೊಳ್ಳಲಾಗಿತ್ತು. ಈ ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆ ಒಪ್ಪಿಗೆ ನೀಡದೇ ಈಗಿರುವ ಆದೇಶದಂತೆ ಮುಂದುವರಿಸಲು ಸೂಚಿಸಿ ಕಡತ ವಾಪಸ್ ಕಳುಹಿಸಿತ್ತು ಎಂದು ತಿಳಿಸಿದರು.

2025ರಲ್ಲಿ ಮತ್ತೆ ಕಡತವನ್ನು ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಹಾಸಂಘದ ಪದಾಧಿಕಾರಿಗಳಾದ ರಮೇಶ್, ಪುರುಷೋತ್ತಮ, ಮಂಜುನಾಥ, ಸೋಮಣ್ಣ ಸತೀಶ್ ಭಾಗವಹಿಸಿದ್ದರು.

ವಿಧಾನಸೌಧಕ್ಕೆ 102 ಪ್ರವಾಸಿಗರು



ಬೆಂಗಳೂರು: ವಿಧಾನಸೌಧ ಮಾರ್ಗದರ್ಶಿ ಪ್ರವಾಸ ಯೋಜನೆಗೆ ಭಾನುವಾರ ಚಾಲನೆ ನೀಡಲಾಗಿದೆ. ಮೊದಲ ದಿನ 102 ಪ್ರವಾಸಿಗರು ಕಾಲ್ನಡಿಗೆ ಮೂಲಕ ವಿಧಾನಸೌಧ ವೀಕ್ಷಿಸಿದ್ದಾರೆ.

ಭಾನುವಾರ ನಾಲ್ಕು ತಂಡಗಳಲ್ಲಿ ಪ್ರವಾಸಿಗರನ್ನು ಕರೆದೊಯ್ಯಲಾಗಿತ್ತು. ಪ್ರತಿ ತಂಡದಲ್ಲಿ ತಲಾ 30 ಜನರು ಟಿಕೆಟ್ ಕಾಯ್ದಿರಿಸಿದ್ದರು. ಒಟ್ಟಯ 120 ಮಂದಿ ಟಿಕೆಟ್ ಕಾಯ್ದಿರಿಸಿದ್ದು, 102 ಮಂದಿ ಬಂದಿದ್ದರು ಎಂದು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ತಿಳಿಸಿದೆ.

ಇಂಗ್ಲಿಷ್‌ನಲ್ಲಿ ವಿವರಣೆ ಜತೆಗೆ ಎರಡು ತಂಡ, ಕನ್ನಡದಲ್ಲಿ ವಿವರಣೆ ಜತೆಗೆ ಎರಡು ತಂಡಗಳನ್ನು ಕಾಲ್ನಡಿಗೆ ಪ್ರವಾಸಕ್ಕೆ ಕರೆದೊಯ್ಯಲಾಗಿತ್ತು. ಸಾರ್ವಜನಿಕರಿಂದ ಉತ್ತಮ ಸ್ಪಂದನ ವ್ಯಕ್ತವಾಗಿದೆ ಎಂದು ನಿಗಮವು ತಿಳಿಸಿದೆ.

ರುಜುಲಾ, ಅಂಶ್ ಚಾಂಪಿಯನ್



ಆಲ್ ಇಂಡಿಯಾ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ ಪ್ರಶಸ್ತಿ ವಿಜೇತರು. (ನಿಂತವರು) ಎಡದಿಂದ; ಅಂಶ್ ನೇಗಿ (ಬಾಲಕರ ಸಿಂಗಲ್ಸ್), ರುಜುಲಾ ರಾಮು (ಬಾಲಕಿಯರ ಸಿಂಗಲ್ಸ್), ಕೀರ್ತಿ ಮಂಚಾಲ, ವಿಷ್ಣು ಕೇದಾರ್ (ಮಿಶ್ರ ಡಬಲ್ಸ್). (ಕುಳಿತವರು)ವೆನ್ನೆಲಾ ಕೆ., ರೇಶಿಕಾ ಯು. (ಬಾಲಕಿಯರ ಡಬಲ್ಸ್) ಭವ್ಯ ಛಾಬ್ರಾ, ಪರಮ್ ಚೌಧರಿ(ಬಾಲಕರ ಡಬಲ್ಸ್).

ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಬೆಂಗಳೂರು: ಕರ್ನಾಟಕದ ರುಜುಲಾ ರಾಮು ಅವರು ಯೋನೆಕ್ಸ್- ಸನ್‌ರೈಸ್ ಆಲ್ ಇಂಡಿಯಾ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯ (19 ವರ್ಷದೊಳಗಿನವರ) ಬಾಲಕಿಯರ ಫೈನಲ್‌ನಲ್ಲಿ ತೆಲಂಗಾಣದ ವೆನ್ನಾಲ ಕೆ. ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಆಶ್ರಯದಲ್ಲಿ ಭಾನುವಾರ ನಡೆದ ಟೂರ್ನಿಯ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ರುಜುಲಾ 21-17, 21-14ರ ನೇರ ಗೇಮ್‌ಗಳಿಂದ ಒಂಬತ್ತನೇ ಶ್ರೇಯಾಂಕದ ವೆನ್ನಾಲ ಅವರನ್ನು ಸೋಲಿಸಿದರು. ಉತ್ತರಾಖಂಡದ ಅಂಶ್ ನೇಗಿ ಬಾಲಕರ ಸಿಂಗಲ್ಸ್ ಫೈನಲ್‌ನಲ್ಲಿ 16-21, 22-20, 21-12ರಿಂದ ತಮ್ಮದೇ ರಾಜ್ಯದ ಸೂರ್ಯಾಕ್ಷ್ ರಾವತ್ ಅವರನ್ನು ಮಣಿಸಿ, ಕಿರೀಟ ಗೆದ್ದರು.

ಬಾಲಕರ ಡಬಲ್ಸ್‌ನಲ್ಲಿ ದೆಹಲಿಯ ಭವ್ಯ ಛಾಬ್ರಾ ಮತ್ತು ಪರಮ್ ಚೌಧರಿ ಜೋಡಿ 21-15, 25-23ರಿಂದ ಆಂಧ್ರಪ್ರದೇಶದ ಭಾರ್ಗವ್ ರಾಮ್ ಮತ್ತು ವಿಶ್ವ ತೇಜ್ ಗೊಬ್ಬೂರು ಅವರನ್ನು ಸೋಲಿಸಿ ಚಾಂಪಿಯನ್ ಆಯಿತು.

ವೆನ್ನಲ ಮತ್ತು ರೇಷಿಕಾ (ತೆಲಂಗಾಣ/ ತಮಿಳುನಾಡು) ಜೋಡಿಯು ಬಾಲಕಿಯರ ಡಬಲ್ಸ್‌ನಲ್ಲಿ 21-14, 21-18ರಿಂದ ಉತ್ತರಾಖಂಡದ ಗಾಯತ್ರಿ ರಾವತ್ ಮತ್ತು ಮಾನಸ ರಾವತ್ ಜೋಡಿಯನ್ನು ಸೋಲಿಸಿ ಪ್ರಶಸ್ತಿ ಗೆದ್ದಿತು.

ಮಿಶ್ರ ಡಬಲ್ಸ್‌ನಲ್ಲಿ ವಿಷ್ಣು ಕೇದಾರ ಮತ್ತು ಕೀರ್ತಿ ಮಂಚಾಲ (ಆಂಧ್ರಪ್ರದೇಶ/ತೆಲಂಗಾಣ) ಜೋಡಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 7-21, 21-17, 21-18ರಿಂದ ವಂಶ್ ದೇವ್ ಮತ್ತು ಶ್ರಾವಣಿ ವಾಲೇಕರ್ (ದೆಹಲಿ/ ಮಹಾರಾಷ್ಟ್ರ) ಅವರನ್ನು ಸೋಲಿಸಿ ಚಾಂಪಿಯನ್ ಆಯಿತು.

'ಕ್ಷಮೆ ಕೇಳುವುದು ದೊಡ್ಡ ಗುಣ'

ನಟ ಕಮಲ್ ಹಾಸನ್ ಹೇಳಿಕೆ ಖಂಡಿಸಿದ ಸಂಸದ ಡಾ.ಸಿ.ಎನ್‌. ಮಂಜುನಾಥ್

ಪ್ರಜಾವಾಣಿ ವಾರ್ತೆ



ಸಮಾರಂಭದಲ್ಲಿ (ಕುಳಿತವರು ಎಡದಿಂದ) ಸುದೇಶ್ ಮಹಾನ್, ಪ್ರೇಮ್‌ದಾಸ್ ಅಡ್ಯಂತಾಯ, ಗೀತಾ ಸುರತ್ಕಲ್, ರೇಣುಕಾ ರೆಡ್ಡಿ ಮತ್ತು ರಮ್ಯಾ ನವೀನ್ ಅವರಿಗೆ ರಂಗ ಗೌರವ ಸಲ್ಲಿಸಲಾಯಿತು. ರಂಗಚಂದಿರದ ಕಾರ್ಯದರ್ಶಿ ಎ.ಎಸ್. ಚಂದ್ರಶೇಖರ್ (ಜೆಪಿಜಿ ಚಂದ್ರು), ಮನೋರಮಾ ಚೌಟ, ಸಾಹಿತಿ ನಾ. ದಾಮೋದರ ಶೆಟ್ಟಿ, ಪುರುಷೋತ್ತಮ ಬಿಳಿಮಲೆ, ಡಾ.ಸಿ.ಎನ್‌. ಮಂಜುನಾಥ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಮತ್ತು ರಂಗಚಂದಿರ ಟ್ರಸ್ಟ್ ಗೌರವಾಧ್ಯಕ್ಷ ರಾಧಾಕೃಷ್ಣ ಹೆಗಡೆ ಉಪಸ್ಥಿತರಿದ್ದರು– ಪ್ರಜಾವಾಣಿ ಚಿತ್ರ

ಬೆಂಗಳೂರು: 'ಭಾಷೆಯ ಮೇಲೆ ನಮಗೆ ಭಾವನಾತ್ಮಕ ಸಂಬಂಧ ಇರುತ್ತದೆ. ಕ್ಷಮೆ ಕೇಳುವುದು ಮನುಷ್ಯನ ದೊಡ್ಡ ಗುಣ. ಆದರೆ, ಅದನ್ನು ಏಕೆ ಪ್ರತಿಷ್ಠೆಯಾಗಿ ತೆಗೆದುಕೊಳ್ಳುತ್ತಿದ್ದಾರೋ ತಿಳಿಯುತ್ತಿಲ್ಲ' ಎಂದು ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ರಂಗಚಂದಿರ ಸಂಸ್ಥೆಯು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಡಾ.ಡಿಕೆ. ಚೌಟರ ನೆನಪಿನ ನಾಟಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಕಮಲ್ ಹಾಸನ್ ಅವರ ಹೆಸರು ಉಲ್ಲೇಖಿಸದೆ ಭಾಷೆ ಬಗೆಗೆ ಅವರು ನೀಡಿದ ಹೇಳಿಕೆಯನ್ನು ಖಂಡಿಸಿದರು.

'ನಾಲಿಗೆಯನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು. ಶರೀರದಲ್ಲಿ ಮಿದುಳು, ಹೃದಯ ಸೇರಿ ಎಲ್ಲ ಅಂಗಾಂಗವೂ ಸವೆಯುತ್ತವೆ. ಆದರೆ, ನಾಲಿಗೆ ಮಾತ್ರ ಸವೆಯುವುದಿಲ್ಲ. ಇದೇ ಸಮಸ್ಯೆಗೆ ಕಾರಣವಾಗಿದೆ. ನಾಲಿಗೆಗೆ ಗಾಯವಾದರೆ ವಾಸಿಯಾಗುತ್ತದೆ, ನಾಲಿಗೆಯಿಂದ ಬೇರೆಯವರಿಗೆ ಗಾಯವಾದರೆ ಅದು ಮಾಯುವುದಿಲ್ಲ' ಎಂದರು.

'ದಕ್ಷಿಣ ಭಾರತದಲ್ಲಿ ಇರುವುದು ದ್ರಾವಿಡ ಭಾಷೆಗಳು. ಒಂದು ಭಾಷೆಯಿಂದ ಮತ್ತೊಂದು ಭಾಷೆ ಹುಟ್ಟಿಲ್ಲ. ಎಲ್ಲವೂ ಸ್ವತಂತ್ರ ಭಾಷೆಗಳಾಗಿವೆ. ಕೆಲವರು ನಾಲಿಗೆಯನ್ನು ಹರಿಬಿಟ್ಟು ಸಮಸ್ಯೆಯನ್ನು ಉಂಟುಮಾಡುತ್ತಿದ್ದಾರೆ. ತಪ್ಪು ಮಾಡಿದರೆ, ನಮ್ಮ ಮಾತಿನಿಂದ ಬೇರೆಯವರಿಗೆ ನೋವಾಗಿದ್ದರೆ ಕ್ಷಮೆ ಕೇಳುವುದರಿಂದ ವ್ಯಕ್ತಿಯ ವ್ಯಕ್ತಿತ್ವ ದೊಡ್ಡದಾಗುತ್ತದೆ. ತಪ್ಪು ಮಾಡಿದರೆ ನಾವು ಚಿಕ್ಕಮಕ್ಕಳಿಗೂ ಕ್ಷಮೆ ಕೇಳುತ್ತೇವೆ. ಇದು ಮನುಷ್ಯನ ಅತಿ ದೊಡ್ಡ ಸಂಪತ್ತು. ಕನ್ನಡ ನಮಗೆ ಮಾತೃಭಾಷೆಯಾದರೆ, ಇಂಗ್ಲಿಷ್ ಬದುಕುವ ಭಾಷೆಯಾಗಿದೆ. ಮಕ್ಕಳನ್ನು ಆಂಗ್ಲ ಮಾಧ್ಯಮದಲ್ಲಿ ಓದಿಸಿದರೂ, ಮನೆಯಲ್ಲಿ ಕನ್ನಡ ಬಳಸಬೇಕು. ಕನ್ನಡ ಕನ್ನಡಕವಾಗಿರದೆ ಕಣ್ಣಾಗಿರಬೇಕು' ಎಂದು ಹೇಳಿದರು.

'ನಾಟಕಗಳು ಸಮಾಜ ತಿದ್ದುವ, ಪರಿವರ್ತನೆ ಮಾಡುವ ಕೆಲಸ ಮಾಡಿವೆ. ನಮ್ಮಸುತ್ತಮುತ್ತಲು ನಡೆಯುವ ಘಟನೆಗಳನ್ನೇ ನಾಟಕದ ರೂಪದಲ್ಲಿ ತೋರಿಸಲಾಗುತ್ತಿದ್ದು, ಸಮಾಜ ಪರಿವರ್ತನೆಗೆ ಕಾರಣವಾಗುತ್ತಿವೆ' ಎಂದರು.

'ಡಿ.ಕೆ ಚೌಟ ಅವರು ಕೇವಲ ಒಬ್ಬ ವ್ಯಕ್ತಿಯಾಗಿರದೆ, ರಂಗಭೂಮಿಯ ದೈತ್ಯ ಶಕ್ತಿಯಾಗಿದ್ದರು. ಕಿರಿಯ ಕಲಾವಿದರನ್ನು ಅವರು ಪ್ರೋತ್ಸಾಹಿಸುತ್ತಿದ್ದರು' ಎಂದು ಸ್ಮರಿಸಿಕೊಂಡರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ನಾಟಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಐವರಿಗೆ ರಂಗಗೌರವ ಸಲ್ಲಿಕೆ

ಸಮಾರಂಭದಲ್ಲಿ ಕಲಾ ನಿರ್ದೇಶಕ ಸುದೇಶ್ ಮಹಾನ್, ರಂಗಭೂಮಿ ಕಲಾವಿದರಾದ ಪ್ರೇಮ್‌ದಾಸ್ ಅಡ್ಯಂತಾಯ, ಗೀತಾ ಸುರತ್ಕಲ್, ರೇಣುಕಾ ರೆಡ್ಡಿ ಹಾಗೂ ರಂಗಕರ್ಮಿ ರಮ್ಯಾ ನವೀನ್ ಅವರಿಗೆ ರಂಗಗೌರವ ಸಲ್ಲಿಸಲಾಯಿತು. ಬಳಿಕ ನಟಿ ಕಲ್ಪನಾ ಅವರ ಜೀವನಗಾಥೆ ಆಧಾರಿತ ಏಕವ್ಯಕ್ತಿ ನಾಟಕ 'ಮಿನುಗು ತಾರೆ' ಪ್ರದರ್ಶಿಸಲಾಯಿತು. ಕೆ.ಎಸ್.ಡಿ.ಎಲ್.ಚಂದ್ರು ನಿರ್ದೇಶನದಲ್ಲಿ ರೂಪಾಂತರ ತಂಡ ಈ ನಾಟಕವನ್ನು ಪ್ರಸ್ತುತಪಡಿಸಿತು. ನಂಜುಂಡೇಗೌಡ ಸಿ. ನಿರ್ದೇಶನದಲ್ಲಿ ದೃಶ್ಯ ಕಾವ್ಯ ತಂಡವು 'ಹುಲಿ ಹಿಡಿದ ಕಡಸು' ನಾಟಕ ಪ್ರದರ್ಶನ ಕಂಡಿತು.

ನಬಾರ್ಡ್‌ನ ಹೆಚ್ಚುವರಿ ಬಡ್ಡಿ ಸರ್ಕಾರ ಭರಿಸಲಿ: ದಿನೇಶ್

ಪ್ರಜಾವಾಣಿ ವಾರ್ತೆ



ದಿನೇಶ್ ಗೂಳಿಗೌಡ

ಬೆಂಗಳೂರು: 'ನಬಾರ್ಡ್ ಕೇಳುತ್ತಿರುವ ಹೆಚ್ಚುವರಿ ಬಡ್ಡಿಯನ್ನು ಅಪೆಕ್ಸ್ ಬ್ಯಾಂಕ್ ಪರವಾಗಿ ರಾಜ್ಯ ಸರ್ಕಾರ ಭರಿಸಿ, ರಾಜ್ಯದಲ್ಲಿ ಆಹಾರ ಧಾನ್ಯ ಉತ್ಪಾದನೆಯ ಗುರಿ ತಲುಪಲು ನೆರವಾಗಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಹಕಾರ ಸಚಿವ ಕೆ.ಎನ್. ರಾಜಣ್ಣ ಅವರಿಗೆ ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

'ಪ್ರಸಕ್ತ ವರ್ಷ 37 ಲಕ್ಷ ರೈತರಿಗೆ ₹28 ಸಾವಿರ ಕೋಟಿ ಸಾಲ ವಿತರಿಸುವ ಗುರಿಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ. ನಬಾರ್ಡ್ ನಿಗದಿ ಪಡಿಸಿರುವುದಕ್ಕಿಂತ ಹೆಚ್ಚುವರಿ ಸಾಲವನ್ನು ಅಪೆಕ್ಸ್ ಬ್ಯಾಂಕ್ ಪಡೆಯಬೇಕಿದ್ದರೆ ಹೆಚ್ಚುವರಿಯಾಗಿ ಶೇಕಡ 4ರಷ್ಟು ಬಡ್ಡಿ ಭರಿಸಬೇಕಿದೆ. ಅಪೆಕ್ಸ್ ಬ್ಯಾಂಕ್‌ನ ಮೇಲೆ ಬೀಳುವ ಹೆಚ್ಚುವರಿ ಹೊರೆಯನ್ನು ರಾಜ್ಯ ಸರ್ಕಾರ ಭರಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

'ಕಳೆದ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕ್‌ಗೆ ನಬಾರ್ಡ್ ಶೇ 4ರ ಬಡ್ಡಿ ದರದಲ್ಲಿ ₹5,450 ಕೋಟಿ ಸಾಲ ನೀಡಿತ್ತು. ಈ ಬಾರಿ ಶೇ 4ರ ಬಡ್ಡಿಯಲ್ಲಿ ನೀಡುವ ಸಾಲದ ಪ್ರಮಾಣವನ್ನು ₹2,700 ಕೋಟಿಗೆ ಸೀಮಿತಗೊಳಿಸಿದೆ. ಹೆಚ್ಚುವರಿ ಸಾಲ ನೀಡಲು ನಬಾರ್ಡ್ ಸಿದ್ಧವಿದ್ದರೂ ಅದಕ್ಕೆ ಶೇ 8.25ರಷ್ಟು (ಶೇ 4.25 ಹೆಚ್ಚುವರಿ) ಬಡ್ಡಿ ನೀಡಬೇಕೆಂದು ಹೇಳುತ್ತಿದೆ. ಹೆಚ್ಚುವರಿ ಬಡ್ಡಿ ನೀಡಿ ಸಾಲ ಪಡೆಯದಿದ್ದರೆ ಅಪೆಕ್ಸ್, ಡಿಸಿಸಿ ಬ್ಯಾಂಕ್‌ಗಳು ಹಾಗೂ ಆ ಮೂಲಕ, ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ' ಎಂದೂ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಟೈರ್ ಅಂಗಡಿಗೆ ಬೆಂಕಿ

ಬೆಂಗಳೂರು: ನಗರದ ಜೆ.ಸಿ.ರಸ್ತೆಯಲ್ಲಿರುವ ಟೈರ್ ಹಾಗೂ ಬೇರಿಂಗ್ ಅಂಗಡಿಯಲ್ಲಿ ಶನಿವಾರ ತಡರಾತ್ರಿ ಬೆಂಕಿ ಅವಘಡ ಸಂಭವಿಸಿದ್ದು, ಅಪಾರ ಪ್ರಮಾಣದ ವಸ್ತುಗಳು ಬೆಂಕಿಗೆ ಆಹುತಿ ಆಗಿವೆ.

ಟೈರ್ ಅಂಗಡಿಯಲ್ಲಿ ತಡರಾತ್ರಿ ಏಕಾಏಕಿ ಬೆಂಕಿ ಕಾಣಿಸಿಕೊಂಡು, ಟೈರ್‌ಗಳು, ಬೇರಿಂಗ್, ಇನ್ನಿತರ ವಸ್ತುಗಳಿಗೆ ಹಾನಿಯಾಗಿದೆ.ಐದು ವಾಹನದಲ್ಲಿ ಬಂದ ಅಗ್ನಿಶಾಮಕದಳ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು.

ಬೆಂಕಿ ಅವಘಡಕ್ಕೆ ಕಾರಣವೇನು ಎಂಬುದರ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಅವಘಡ ಸಂಭವಿಸಿದ ವೇಳೆ ಸಿಬ್ಬಂದಿ ಇರಲಿಲ್ಲ. ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಅವಘಡ ಸಂಭವಿಸಿರುವ ಶಂಕೆ ವ್ಯಕ್ತವಾಗಿದೆ.



ಕೊಳಲು ವಾದನ

ಗೋಕುಲಂ ಶಿಷ್ಯ ಬಳಗ ನಗರದ ಪ್ರಭಾತ್ ಕಲಾಸಂಭ್ರಮದಲ್ಲಿ ಶನಿವಾರ ಆಯೋಜಿಸಿದ್ದ 'ಸುವರ್ಣ ವೇಣು' ಗುರುವಂದನೆ ಕಾರ್ಯಕ್ರಮದಲ್ಲಿ ಗೋಕುಲಂ ಸಂಗೀತ ಶಾಲೆಯ ವಿದ್ಯಾರ್ಥಿಗಳು ಕೊಳಲು ವಾದನವನ್ನು ಪ್ರಸ್ತುತಪಡಿಸಿದರು -ಪ್ರಜಾವಾಣಿ ಚಿತ್ರ

ಮಾತೃಭಾಷೆಯಲ್ಲಿ ನಟಿಸಿ, ಮೇರುನಟರಾದ ರಾಜ್: ಬಣ್ಣನೆ

ರಾಜ್‌ಕುಮಾರ್ ಕಂಚಿನ ಪುತ್ಥಳಿ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ



ನೆಲಮಹೇಶ್ವರಿ ನಗರದಲ್ಲಿ ನಟಸಾರ್ವಭೌಮ ರಾಜಕುಮಾರ್ ಅವರ ಕಂಚಿನ ಪುತ್ಥಳಿಯನ್ನು ಶಾಸಕ ಎಸ್‌. ಮುನಿರಾಜು, ಲೋಕಾರ್ಪಣೆ ಮಾಡಿದರು

ಪೀಣ್ಯ ದಾಸರಹಳ್ಳಿ: ನೆಲಮಹೇಶ್ವರಿ ನಗರದಲ್ಲಿ ಗಂಧದಗುಡಿ ಕನ್ನಡ ಯುವಕರ ಸಂಘ ಮತ್ತು ಕರ್ನಾಟಕ ಜನಸ್ಪಂದನ ಟ್ರಸ್ಟ್ ಸಹಯೋಗದೊಂದಿಗೆ ಸಂಘದ 25ನೇ ವರ್ಷದ ಬೆಳ್ಳಿ ಹಬ್ಬದ ಸಂಭ್ರಮದಲ್ಲಿ ನಟಸಾರ್ವಭೌಮ ಡಾ.ರಾಜ್‌ಕುಮಾರ್ ಪುತ್ಥಳಿಯನ್ನು ಶಾಸಕ ಎಸ್. ಮುನಿರಾಜು ಲೋಕಾರ್ಪಣೆ ಮಾಡಿದರು.

ಬಳಿಕ ಮಾತನಾಡಿದ ಅವರು, 'ಕನ್ನಡದಲ್ಲೂ ಚಿತ್ರನಟರು ಬೇರೆ ಬೇರೆ ಭಾಷೆಗಳಲ್ಲಿ ನಟನೆ ಮಾಡಿದ್ದರು. ಆದರೆ ರಾಜ್‌ಕುಮಾರ್ ಅವರು ಮಾತ್ರ ಕನ್ನಡ ಬಿಟ್ಟು ಬೇರೆ ಯಾವುದೇ ಬಾಷೆಗಳಲ್ಲಿ ನಟನೆ ಮಾಡದೇ ಕನ್ನಡ ನೆಲ, ಜಲ, ಭಾಷೆಯಿಂದಲೇ ಮೇರು ನಟರಾದ ಏಕೈಕ ವ್ಯಕ್ತಿ' ಎಂದು ಬಣ್ಣಿಸಿದರು.

ದಾಸರಹಳ್ಳಿ ಕ್ಷೇತ್ರ ಘಟಕದ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ವೈ.ಬಿ. ಎಚ್. ಜಯದೇವ್ ಮಾತನಾಡಿ, ಡಾ.ರಾಜ್‌ಕುಮಾರ್ ಅವರು ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿದವರು ಎಂದು ಹೇಳಿದರು.

ಮೆರವಣಿಗೆ: ಬೆಳಿಗ್ಗೆ ನೆಲಮಹೇಶ್ವರಿ ದೇವಸ್ಥಾನದಿಂದ 21 ಕಳಸ ಹೊತ್ತ ಮಹಿಳೆಯರು ತಮಟೆ, ವಾದ್ಯಗೋಷ್ಠಿಗಳೊಂದಿಗೆ ಮೆರವಣಿಗೆ ಮೂಲಕ ಪುತ್ಥಳಿ ಅನಾವರಣದ ಜಾಗಕ್ಕೆ ತಲುಪಿದರು. ಸಂಜೆ ಆಕಾಶ್ ಅವರ 'ನೃತ್ಯ ಕಲಾ' ತಂಡದವರಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರಿಗೆ 'ಗಂಧದ ಗುಡಿ ಡಾ. ರಾಜ್ ಪ್ರಶಸ್ತಿ' ಪುರಸ್ಕಾರ ನೀಡಲಾಯಿತು.

ಸಮಾಜ ಸೇವಕ ಟಿ. ಧರ್ಮೇಶ್ ಗೌಡ, ಸಂಘದ ಅಧ್ಯಕ್ಷ ಪಿ.ನಾಗರಾಜ್, ಟ್ರಸ್ಟ್ ಅಧ್ಯಕ್ಷ ಹನುಮಂತಪ್ಪ ಮೇಡೇಗಾರ, ಬಿಜೆಪಿ ಮುಖಂಡ ಟಿ.ಶಿವಕುಮಾರ್, ಲತಾ ಕುಂದರಗಿ, ರಾಜೇಂದ್ರ ಕೊಣ್ಣೂರ, ಆನಂದ್, ಅಂಬಣ್ಣ ಮೂಡಬಿ, ರಾಮಲಿಂಗಪ್ಪ, ಸಂಘದ ಪದಾಧಿಕಾರಿಗಳು ಹಾಗೂ ಸಾವಿರಾರು ಅಭಿಮಾನಿಗಳು, ಸ್ಥಳೀಯ ನಿವಾಸಿಗಳು ಭಾಗವಹಿಸಿದ್ದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

'ಮೋರಿಗೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್ ಕುಸಿತ'




ಮೋರಿಯ ಮೇಲೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್‌ಗಳು ಕುಸಿದಿರುವುದು

ವಾಜರಹಳ್ಳಿಯ ಎಲ್‌ಐಸಿ ಬಡಾವಣೆಯ ಮುಖ್ಯರಸ್ತೆಯ ಮೋರಿಯ ಮೇಲೆ ಅಳವಡಿಸಿದ್ದ ಕಾಂಕ್ರೀಟ್ ಸ್ಲ್ಯಾಬ್‌ಗಳು ಕುಸಿದುಬಿದ್ದಿವೆ. ಇದರಿಂದ, ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ರಾತ್ರಿ ಸಮಯದಲ್ಲಿ ಯಾರಾದರೂ ಬಿದ್ದು ಅನಾಹುತ ಮಾಡಿಕೊಳ್ಳುವ ಮುನ್ನ ಇದನ್ನು ದುರಸ್ತಿಗೊಳಿಸಬೇಕು.

ವಾಜರಹಳ್ಳಿ ನಾಗರಿಕರು

'ಹನುಮಗಿರಿ ರಸ್ತೆಯುದ್ದಕ್ಕೂ ಗುಂಡಿ'



ರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ

ಇಟ್ಟಮಡು ಮುಖ್ಯ ರಸ್ತೆಯಿಂದ ಸಪ್ತಗಿರಿ ಲೇಔಟ್ ಹಾಗೂ ಹೊಸಕೆರೆಹಳ್ಳಿಗೆ ಸಂಪರ್ಕ ಕಲ್ಪಿಸುವ ಹನುಮಗಿರಿ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ಮಾರ್ಸ್ ಮೌಂಟ್ ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ದಿ ಪ್ರೊಮೊಂಟ್ ಟಾಟಾ ಹೌಸಿಂಗ್ ಅಪಾರ್ಟ್‌ಮೆಂಟ್ ಸಮುಚ್ಚಯದ ಪ್ರವೇಶದ್ವಾರ ತಲುಪುವ ಸುಮಾರು 500 ಮೀ. ಉದ್ದಕ್ಕೂ ಎಲ್ಲೆಂದರಲ್ಲಿ ಗುಂಡಿಗಳಿದ್ದು, ಇದನ್ನು ತಪ್ಪಿಸಲು ದ್ವಿಚಕ್ರ ವಾಹನ ಸವಾರರು ಹರಸಾಹಸ ಪಡಬೇಕಾಗಿದೆ. ರಸ್ತೆ ಇಳಿಜಾರಿನಿಂದ ಕೂಡಿರುವುದರಿಂದ ವಾಹನಗಳೂ ವೇಗವಾಗಿ ಬರುತ್ತವೆ. ಕಟ್ಟಡಗಳ ನಿರ್ಮಾಣ ಕಾಮಗಾರಿ ಇಲ್ಲಿ ಹೆಚ್ಚಾಗಿ ನಡೆಯುತ್ತಿರುವುದರಿಂದ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಹೊತ್ತೊಯ್ಯುವ ಲಾರಿಗಳ ಸಂಚಾರವೂ ಈ ರಸ್ತೆಯಲ್ಲಿ ಹೆಚ್ಚಿದೆ. ಮಳೆ ಬಂದಾಗ ನೀರು ತುಂಬಿ, ಗುಂಡಿಗಳು ಕಾಣದಂತಾಗುತ್ತಿವೆ. ಈ ರಸ್ತೆಯು ಆರ್.ಆರ್.ನಗರ ವ್ಯಾಪ್ತಿಗೆ ಬರಲಿದ್ದು, ಸಂಬಂಧಪಟ್ಟ ಅಧಿಕಾರಿಗಳು ಗುಂಡಿ ಮುಚ್ಚಲು ಕೂಡಲೇ ಕ್ರಮವಹಿಸಬೇಕು.

ಮಂಜುನಾಥ್, ಸಪ್ತಗಿರಿ ಲೇಔಟ್ ನಿವಾಸಿ



ಬಸ್ ತಂಗುದಾಣದ ಮುಂಭಾಗದಲ್ಲಿ ಸುರಿದಿರುವ ಕಸದ ರಾಶಿ

'ಬಸ್ ತಂಗುದಾಣವೂ ಕಸ ಹಾಕುವ ಜಾಗವೂ'

ಜೆ.ಪಿ. ನಗರ ಮೆಟ್ರೊ ನಿಲ್ದಾಣದ ಪಕ್ಕದಲ್ಲಿರುವ ಸಾರಕ್ಕಿ ಬಸ್ ತಂಗುದಾಣ ಈಗ ಕಸ ಹಾಕುವ ಪ್ರದೇಶವಾಗಿದೆ. ಇದರ ಪಕ್ಕದಲ್ಲಿಯೇ ನಟ ವಿಷ್ಣುವರ್ಧನ್ ಅವರ ಪುತ್ಥಳಿಯೂ ಇದೆ. ನಿತ್ಯ ಈ ಬಸ್ ತಂಗುದಾಣದ ಮುಂದೆ ರಾಶಿಗಟ್ಟಲೆ ಕಸ ತಂದು ಎಸೆಯಲಾಗುತ್ತಿದೆ. ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಬಿಬಿಎಂಪಿ ಸಿಬ್ಬಂದಿ ಕೂಡಲೇ ಇಲ್ಲಿನ ಕಸ ವಿಲೇವಾರಿ ಮಾಡಿ, ಸ್ವಚ್ಛತೆ ಕಾಪಾಡಬೇಕು.

ಭೂಮಿಕ ಲಕ್ಷ್ಮೀನಾರಾಯಣ, ಪ್ರಯಾಣಿಕರು

'ಬಿದ್ದ ಮರ ತೆರವುಗೊಳಿಸಿ'

ಕನಕಪುರ ರಸ್ತೆಯ ನ್ಯಾಯಾಂಗ ಬಡಾವಣೆಯಲ್ಲಿರುವ ಬಿಬಿಎಂಪಿ ಉದ್ಯಾನ ನಿರ್ವಹಣೆ ಮಾಡುತ್ತಿಲ್ಲ. ಇತ್ತೀಚೆಗೆ ಸುರಿದ ಗಾಳಿ ಮಳೆಗೆ ಇಲ್ಲಿನ ಮರದ ರೆಂಬೆ ಕೊಂಬೆಗಳು ಧರೆಗೆ ಉರುಳಿವೆ. ಇವುಗಳನ್ನು ತೆರವುಗೊಳಿಸದ ಕಾರಣ ವಾಯುವಿಹಾರಿಗಳ ಓಡಾಟಕ್ಕೆ ಅಡಚಣೆ ಆಗಿದೆ. ಉದ್ಯಾನದಲ್ಲಿರುವ ಗ್ರಂಥಾಲಯದ ಕಟ್ಟಡ ಈಗ ನಿರ್ವಾಹಕರ ವಸತಿನಿಲಯವಾಗಿ ಬದಲಾಗಿದೆ. ಉದ್ಯಾನದ ನಿರ್ವಹಣೆ ಇಲ್ಲದೇ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ.

ಟಿ.ವಿ.ಬಿ. ರಾಜನ್, ನಮ್ಮನೆ ಅಪಾರ್ಟ್‌ಮೆಂಟ್, ತಲಘಟ್ಟಪುರ



ಉದ್ಯಾನದಲ್ಲಿ ಮರದ ರೆಂಬೆಯೊಂದು ಉರುಳಿ ಬಿದ್ದಿದೆ

ಸೋಮವಾರ, ಜೂನ್ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 152 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಗೆಲುವಿನ ಓಟ

ಸರ್ಬಿಯಾದ ಟೆನಿಸ್ ತಾರೆ ನೊವಾಕ್ ಜೊಕೊವಿಚ್ ಅವರು ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ನೊವಾಕ್ ಜೊಕೊವಿಚ್ (ಸರ್ಬಿಯಾ)
6-3, 6-4, 6-2
ಫಿಲಿಪ್ ಮಿಸೋಲಿಕ್ (ಆಸ್ಟ್ರಿಯಾ)

ಒಳಜಗಳ: ಕೆಪಿಎಸ್‌ಸಿಗೆ ಗ್ರಹಣ

ತಾರಕಕ್ಕೇರಿದ ಭಿನ್ನಮತ • ನಿಯಮಿತವಾಗಿ ನಡೆಯದ ಸಭೆ: ಕೋರ್ಟ್ ಮೆಟ್ಟಿಲೇರಿದ ‘ಜ್ಞಾಪನ ಪತ್ರ’

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್‌ಸಿ) ಆಂತರಿಕ ಭಿನ್ನಮತ ತಾರಕಕ್ಕೇರಿದೆ. ಇದರಿಂದಾಗಿ ನಾನಾ ಇಲಾಖೆಗಳ ಮೂರು ಸಾವಿರದ ಮುನ್ನೂರಕ್ಕೂ ಹೆಚ್ಚು ಹುದ್ದೆಗಳ ಭರ್ತಿ ಪ್ರಕ್ರಿಯೆಗೆ ಗ್ರಹಣ ಬಡಿದಿದೆ.

ಅಧ್ಯಕ್ಷರು– ಸದಸ್ಯರ ನಡುವಿನ ಸಂಬಂಧ ಹದಗೆಟ್ಟ ಪರಿಣಾಮ, ನಾಲ್ಕೈದು ತಿಂಗಳಿಂದ ಆಯೋಗದ ಸಭೆ ನಿಯಮಿತವಾಗಿ ನಡೆಯುತ್ತಿಲ್ಲ. ಇದರ ಪರಿಣಾಮವಾಗಿ ವಾಣಿಜ್ಯ ತೆರಿಗೆಗಳ ಇಲಾಖೆಯ ಇನ್‌ಸ್ಪೆಕ್ಟರ್ (ಸಿಟಿಐ) 245, ಲೆಕ್ಕಪತ್ರ ಇಲಾಖೆಯ ಲೆಕ್ಕ ಸಹಾಯಕರ 242 ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿ ಅತಂತ್ರ ಸ್ಥಿತಿಯಲ್ಲಿವೆ. ವಿವಿಧ ಇಲಾಖೆಗಳ ‘ಬಿ’ ವೃಂದದ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಹುದ್ದೆಯೂ ಸೇರಿದಂತೆ ಹಲವು ‘ಸಿ’ ವೃಂದದ ಹುದ್ದೆಗಳಿಗೆ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟವಾಗಿಲ್ಲ. ಹಲವು ಹುದ್ದೆಗಳ ಭರ್ತಿಗೆ ಹೊರಡಿಸಿರುವ ಅಧಿಸೂಚನೆಗಳು ತೂಗುಯ್ಯಾಲೆಯಲ್ಲಿವೆ.

ಆಯೋಗದ ಸಭೆಗೆ ಗೈರಾಗುತ್ತಿರುವ ಬಗ್ಗೆ ಸದಸ್ಯ ವಿಜಯಕುಮಾರ್ ಡಿ. ಕುಚನೂರೆ (ಮೇ 30ರಂದು ನಿವೃತ್ತರಾಗಿದ್ದಾರೆ) ಅವರಿಗೆ ಏಪ್ರಿಲ್ 3ರಂದು ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಅವರು ನೀಡಿದ ‘ಜ್ಞಾಪನ ಪತ್ರ’ ಚರ್ಚೆಗೆ ಕಾರಣವಾಗಿದೆ. ಈ ಪತ್ರವನ್ನು ಪ್ರಶ್ನಿಸಿ ವಿಜಯಕುಮಾರ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ಪತ್ರಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ. ಅಲ್ಲದೆ, ಪ್ರಕರಣದ ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಿದ್ದು, ಅಧ್ಯಕ್ಷರಿಗೆ ತುರ್ತು ನೋಟಿಸ್ ಜಾರಿ ಮಾಡಿದೆ. ಆ ಮೂಲಕ, ಕೆಪಿಎಸ್‌ಸಿ ಒಳಜಗಳ ಬೀದಿಗೆ ಬಂದಿದೆ.

ಪ್ರತಿ ಮಂಗಳವಾರ ಆಯೋಗದ ಸಭೆ ನಡೆಯುವುದು ವಾಡಿಕೆ. ಆದರೆ, ಇತ್ತೀಚೆಗೆ ನಿಯಮಿತವಾಗಿ ಸಭೆ ನಡೆಯುತ್ತಿಲ್ಲ. ಪ್ರಸಕ್ತ ತಿಂಗಳಿನಲ್ಲಿ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಭರ್ತಿಗೆ ನಡೆಯಲಿದ್ದ ಪರೀಕ್ಷೆಯ ಸಿದ್ಧತೆಯ ಪರಿಶೀಲನೆಗಾಗಿ ಮೇ 2ರಂದು ತುರ್ತು ಸಭೆ ನಡೆದಿತ್ತು. ಆ ಬಳಿಕ ಮೇ 29ರಂದು ಮಾತ್ರ ಸಭೆ ನಡೆದಿದೆ. ಈ ಸಭೆಯೂ ಗೊಂದಲದಲ್ಲಿಯೇ ಮುಕ್ತಾಯವಾಯಿತು ಎಂದು ಕೆಪಿಎಸ್‌ಸಿ ಮೂಲಗಳು ಹೇಳಿವೆ.

ಅಧ್ಯಕ್ಷರಿಗೆ ಏಪ್ರಿಲ್ 1ರಂದು ‘ಟಿಪ್ಪಣಿ’ ನೀಡಿದ ಸದಸ್ಯರಾದ ವಿಜಯಕುಮಾರ್ ಡಿ. ಕುಚನೂರೆ, ಆರ್. ಗಿರೀಶ್ ಮತ್ತು ಎಂ.ವಿ. ರಾಮಕೃಷ್ಣಪ್ರಸಾದ್, ‘ವಾರಕ್ಕೊಮ್ಮೆ ಆಯೋಗದ ಸಭೆ ನಡೆಸುವ ಬಗ್ಗೆ ಸೂಕ್ತ ಕ್ರಮ ವಹಿಸಬೇಕು’ ಎಂದು ಮನವಿ ಮಾಡಿದ್ದರು. ಈ ಮಧ್ಯೆ, ಅನಾರೋಗ್ಯದ ಕಾರಣಕ್ಕೆ ತಮಗೆ ಆನ್‌ಲೈನ್ ಮೂಲಕ ಸಭೆಯಲ್ಲಿ ಭಾಗವಹಿಸಲು ವ್ಯವಸ್ಥೆ ಮಾಡುವಂತೆ ವಿಜಯಕುಮಾರ್ ಮನವಿ ಮಾಡಿದ್ದರು.

6ನೇ ಪುಟ ನೋಡಿ

ಸದಸ್ಯರ ಕೆರಳಿಸಿದ ಅಧ್ಯಕ್ಷರ ಪತ್ರ

ಆಯೋಗದ ದೈನಂದಿನ ಕಾರ್ಯನಿರ್ವಹಣೆಯಲ್ಲಿ ಸದಸ್ಯರ ಸಕ್ರಿಯ ಭಾಗವಹಿಸುವಿಕೆಯ ಕುರಿತಂತೆ 2024ರ ಜೂನ್ 27ರಂದು ನಡೆದ ಸಭೆಯಲ್ಲಿ ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್, ‘ಸದಸ್ಯರು ಕಚೇರಿಗೆ ಪ್ರತಿದಿನ ಹಾಜರಾಗಬೇಕು. ಆದರೆ, ಕೆಲವರು ನಿಯಮಿತವಾಗಿ ಹಾಜರಾಗುವುದಿಲ್ಲ ಅಥವಾ ಹಾಜರಾದರೂ ಮಾಹಿತಿ ನೀಡುವುದಿಲ್ಲ. ಕೆಲವರು ಸಭೆಗಳಿಗೂ ನಿಯಮಿತವಾಗಿ ಹಾಜರಾಗುವುದಿಲ್ಲ ಅಥವಾ ಹಾಜರಾಗಲು ಸಾಧ್ಯವಿಲ್ಲ ಎಂಬ ಮಾಹಿತಿಯನ್ನೂ ನೀಡುವುದಿಲ್ಲ. ಇದು ಅಪೇಕ್ಷಣೀಯವಾದುದಲ್ಲ’ ಎಂದು ಆಕ್ಷೇಪ ವ್ಯಕ್ತಪಡಿಸಿ ಸದಸ್ಯರಿಗೆ ಪತ್ರ ನೀಡಿದ್ದರು. ಈ ಪತ್ರವು ಸದಸ್ಯರನ್ನು ಕೆರಳಿಸಿತ್ತು. ‘ಸದಸ್ಯರೊಬ್ಬರು ಆ ಪತ್ರವನ್ನು ಸಭೆಯಲ್ಲಿಯೇ ಹರಿದುಹಾಕಿದ್ದಾರೆ’ ಎಂದು ವಿಜಯಕುಮಾರ್ ಡಿ. ಕುಚನೂರೆ ಅವರಿಗೆ ಏಪ್ರಿಲ್ 3ರಂದು ಬರೆದ ಜ್ಞಾಪನ ಪತ್ರದಲ್ಲಿ ಅಧ್ಯಕ್ಷರು ಉಲ್ಲೇಖಿಸಿದ್ದಾರೆ.

ಕೆಪಿಎಸ್‌ಸಿ– ನೇಮಕಾತಿ ಸ್ಥಿತಿಗತಿ

ತಾತ್ಕಾಲಿಕ ಪಟ್ಟಿ ಪ್ರಕಟ (ಅಂತಿಮ ಪಟ್ಟಿ ಬಾಕಿ)

ವೃಂದ	ಹುದ್ದೆಗಳ ಸಂಖ್ಯೆ
ವಾಣಿಜ್ಯ ತೆರಿಗೆ ಪರಿವೀಕ್ಷಕರು (ಸಿಟಿಐ)	245
ಲೆಕ್ಕಪತ್ರ ಇಲಾಖೆಯ ಲೆಕ್ಕ ಸಹಾಯಕರು	242

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಣೆಗೆ ಬಾಕಿ (ಫಲಿತಾಂಶ ಪ್ರಕಟಣೆ ಬಾಕಿ)

ಪಂಚಾಯತ್ ಅಭಿವೃದ್ಧಿ ಅಧಿಕಾರಿ (ಪಿಡಿಒ)	247
ಮೋಟಾರು ವಾಹನ ನಿರೀಕ್ಷಕರು	76
ವಿವಿಧ ಇಲಾಖೆಗಳ ಗ್ರೂಪ್ ‘ಬಿ’ ವೃಂದದ ಒಟ್ಟು ಹುದ್ದೆಗಳು	327
ಜಲಸಂಪನ್ಮೂಲ ಇಲಾಖೆ (ಕಿರಿಯ ಎಂಜಿನಿಯರ್ –ಸಿವಿಲ್)	300

ನೇಮಕಾತಿ ಪ್ರಕ್ರಿಯೆ ಆರಂಭಿಸಲು ಬಾಕಿ

ಕೈಗಾರಿಕಾ ವಿಸ್ತರಣಾಧಿಕಾರಿ	63
ಕೃಷಿ ಅಧಿಕಾರಿ ಮತ್ತು ಕೃಷಿ ಸಹಾಯಕ ಅಧಿಕಾರಿ	945
ಪಶು ವೈದ್ಯಾಧಿಕಾರಿ	400
ಭೂ ಮಾಪಕರು	364
ಕೈಗಾರಿಕಾ ವಿಸ್ತರಣಾ ಅಧಿಕಾರಿ	63
ವಿವಿಧ ಇಲಾಖೆಗಳ ಗ್ರೂಪ್ ‘ಸಿ’ ಹುದ್ದೆಗಳು	97



ಜಾಗೃತಿ ಬೆಂಗಳೂರಿನ ಸ್ಯಾಂಕಿ ಟ್ಯಾಂಕ್ ಬಳಿ ರಾಷ್ಟ್ರೀಯ ಪ್ರಾಣಿ ಹಕ್ಕುಗಳ ದಿನದ ಅಂಗವಾಗಿ ಭಾನುವಾರ ‘ಅವರ್ಸ್ ಪ್ಲಾನೆಟ್ ದೇರ್ಸ್ ಟೂ’ ಸಂಘಟನೆಯ ಕಾರ್ಯಕರ್ತರು ವಿವಿಧ ಪ್ರಾಣಿಗಳ ಚಿತ್ರಗಳನ್ನು ಹಿಡಿದು ಪ್ರಾಣಿ ಹಕ್ಕುಗಳ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು ಚಿತ್ರ: ಪುಷ್ಕರ ವಿ.

ಬಾಲಕಿ ಮೇಲೆ ಅತ್ಯಾಚಾರ: ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘15 ವರ್ಷದ ಬಾಲಕಿ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿ ಮೂವರು ಆರೋಪಿಗಳನ್ನು ಬಂಧಿಸಿದ್ದು, ಇಬ್ಬರು ಬಾಲಕರನ್ನು ವಶಕ್ಕೆ ಪಡೆಯಲಾಗಿದೆ. ಪರಾರಿಯಾದ ಮತ್ತೊಬ್ಬ ಆರೋಪಿ ಬಂಧನಕ್ಕೆ ಬಲೆ ಬೀಸಿದ್ದೇವೆ’ ಎಂದು ನಗರ ಪೊಲೀಸ್ ಕಮಿಷನರ್ ಭೂಷಣ್ ಗುಲಾಬರಾವ್ ಬೊರಸೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಭಾನುವಾರ ಮಾತನಾಡಿದ ಅವರು, ‘ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಎಪಿಎಂಸಿ ಠಾಣೆಯಲ್ಲಿ 6 ಮಂದಿ ವಿರುದ್ಧ ಶನಿವಾರ ಎಫ್‌ಐಆರ್ ದಾಖಲಾಗಿತ್ತು. ಅದಾದ 24 ತಾಸಿನೊಳಗೆ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ. ಸಂತ್ರಸ್ತೆ ಮತ್ತು ಆರೋಪಿಗಳು ಬೆಳಗಾವಿ ಜಿಲ್ಲೆಯವರೇ ಆಗಿದ್ದಾರೆ’ ಎಂದರು.

‘ಆರಂಭದಲ್ಲಿ ಒಬ್ಬನು ಬಾಲಕಿಯನ್ನು ಪರಿಚಯಿಸಿಕೊಂಡು, ಸ್ನೇಹ ಬೆಳೆಸಿದ್ದ. ಬಳಿಕ ಆತ ಮತ್ತು ಸ್ನೇಹಿತರು 2024ರ ಡಿಸೆಂಬರ್‌ನಲ್ಲಿ ಬಾಲಕಿಯನ್ನು ಪುಸಲಾಯಿಸಿ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿದ್ದರು. ಅತ್ಯಾಚಾರದ ದೃಶ್ಯವನ್ನು ವಿಡಿಯೊ ರೆಕಾರ್ಡ್ ಮಾಡಿಕೊಂಡಿದ್ದರು. ಅದನ್ನೇ ತೋರಿಸಿ ಬ್ಲ್ಯಾಕ್‌ಮೇಲ್ ಮಾಡಿ, 2025ರ ಜನವರಿಯಲ್ಲಿ ಮತ್ತೆ ಮೂವರು ಅತ್ಯಾಚಾರ ಮಾಡಿದ್ದರು. ಬೇರೆ ಬೇರೆ ಸ್ಥಳಗಳಲ್ಲಿ ಅತ್ಯಾಚಾರ ನಡೆದಿದ್ದು, ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಲು ಪ್ರಯತ್ನಿಸಲಾಗುವುದು’ ಎಂದರು.

ಸಿಐಡಿಗೆ ವರ್ಗ: ‘ಬೆಳಗಾವಿ ತಾಲ್ಲೂಕಿನ ಸಂತಿಬಸ್ತವಾಡದಲ್ಲಿ ಕುರ್‌ಆನ್ ಸುಟ್ಟ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿದೆ. ತನಿಖೆಗಾಗಿ ಅವರಿಗೆ ಸ್ಥಳೀಯ ಪೊಲೀಸರು ಸಹಕಾರ ನೀಡುತ್ತಿದ್ದಾರೆ. ಆರೋಪಿಗಳನ್ನು ಶೀಘ್ರ ಬಂಧಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆದಿದೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮಾರುಕಟ್ಟೆಗೆ ನಂದಿನಿ ಕೇಕ್, ಮಫಿನ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಕೇಂದ್ರ ಕಚೇರಿಯಲ್ಲಿ ಭಾನುವಾರ ನಡೆದ ವಿಶ್ವ ಹಾಲು ದಿನಾಚರಣೆಯಲ್ಲಿ ನಂದಿನಿ ಬ್ರ್ಯಾಂಡ್‌ನ ಸ್ಲೈಸ್ ಕೇಕ್, ಮಫಿನ್ಸ್ ಹಾಗೂ ಬಾರ್ ಕೇಕ್ ಎಂಬ ಮೂರು ಮಾದರಿಯ 18 ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು.

ನೂತನ ಉತ್ಪನ್ನಗಳನ್ನು ಬಿಡುಗಡೆ ಮಾಡಿ ಮಾತನಾಡಿದ ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಅವರು, ‘ವಿಶ್ವ ಹಾಲು ದಿನದ ಅಂಗವಾಗಿ ನೂತನ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಗಿದೆ. ಮಕ್ಕಳು ಮತ್ತು ಯುವ ಸಮುದಾಯದ ಅಭಿರುಚಿಗೆ ತಕ್ಕಂತೆ ನಂದಿನಿ ಗ್ರಾಹಕರಿಗೆ ಕೆಎಂಎಫ್ ಉತ್ಪನ್ನಗಳನ್ನು ಒದಗಿಸುತ್ತಿದೆ’ ಎಂದು ಹೇಳಿದರು.

10ನೇ ಪುಟ ನೋಡಿ

ಸಮೀಕ್ಷೆ: ವಿಶೇಷ ಶಿಬಿರದ ಅವಧಿ ವಿಸ್ತರಣೆ

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ನಡೆಸುತ್ತಿರುವ ಸಮಗ್ರ ಸಮೀಕ್ಷೆಯ ವಿಶೇಷ ಶಿಬಿರಗಳ ಅವಧಿಯನ್ನು ಜೂನ್ 6ರವರೆಗೆ ಮತ್ತು ಆನ್‌ಲೈನ್ ನೋಂದಣಿಯನ್ನು ಜೂನ್ 8ರವರೆಗೆ ವಿಸ್ತರಿಸಲಾಗಿದೆ.

ಸಮಗ್ರ ಸಮೀಕ್ಷೆಯ ಭಾಗವಾಗಿ ಮನೆ–ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವ ಹಂತ ಈಗಾಗಲೇ ಕೊನೆಗೊಂಡಿದೆ. ಈ ಹಂತದಲ್ಲಿ ಮಾಹಿತಿ ನೀಡದೇ ಇದ್ದವರು, ಮಾಹಿತಿ ತಪ್ಪಾದವರು ವಿಶೇಷ ಶಿಬಿರಗಳಿಗೆ ತೆರಳಿ ಅಥವಾ ಆನ್‌ಲೈನ್ ಮೂಲಕ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ.

ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅಧ್ಯಕ್ಷತೆಯ ಏಕಸದಸ್ಯ ವಿಚಾರಣಾ ಆಯೋಗವು ಈ ಬಗ್ಗೆ ಪ್ರಕಟಣೆ ಹೊರಡಿಸಿದ್ದು, ‘ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಸಾಧ್ಯವಾಗಿಲ್ಲ. ಜತೆಗೆ ಎಲ್ಲ ಜಿಲ್ಲೆಗಳಲ್ಲೂ ಪೂರ್ಣ ಪ್ರಮಾಣದಲ್ಲಿ ಸಮೀಕ್ಷೆ ಸಾಧ್ಯವಾಗಿಲ್ಲ. ಮನವಿಗಳನ್ನು ಪರಿಶೀಲಿಸಿ, ವಿಶೇಷ ಶಿಬಿರಗಳು ಮತ್ತು ಆನ್‌ಲೈನ್ ನೋಂದಣಿಯ ಅವಧಿಯನ್ನು ಮಾತ್ರ ವಿಸ್ತರಿಸಲು ನಿರ್ಣಯಿಸಲಾಗಿದೆ’ ಎಂದು ಆಯೋಗವು ತಿಳಿಸಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ಆಪರೇಷನ್ ಸಿಂಧೂರ’ ಕಾರ್ಯಾಚರಣೆ ಯಶಸ್ವಿ

ಕೆ.ಆರ್‌ಪುರ: ‘ಯುನಿಟಿ ರನ್’

ಪ್ರಜಾವಾಣಿ ವಾರ್ತೆ

ಕೆ.ಆರ್‌ಪುರ: ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯಲ್ಲಿ ಯಶಸ್ವಿಯಾದ ಭಾರತೀಯ ಸಶಸ್ತ್ರ ಪಡೆಗಳಿಗೆ ಗೌರವ ಸಲ್ಲಿಸಲು ಹಾಗೂ ಸೈನಿಕರ ಧೈರ್ಯ, ಸಾಹಸ ಹಾಗೂ ಸೇವೆಯನ್ನು ಸ್ಮರಿಸುವ ಉದ್ದೇಶದಿಂದ ಹೆಣ್ಣೂರು-ಬಾಣಸವಾಡಿ ಕಾಸ್ಮೋಪಾಲಿಟನ್ ಕ್ಲಬ್ ಆಶ್ರಯದಲ್ಲಿ ‘ಯುನಿಟಿ ರನ್’ ಓಟವನ್ನು ಆಯೋಜಿಸಲಾಗಿತ್ತು.

ಕ್ಲಬ್ ಆವರಣದಿಂದ ಬೆಳಿಗ್ಗೆ 6.30 ಗಂಟೆಗೆ ಓಟ ಆರಂಭವಾಯಿತು. ಕಲ್ಯಾಣನಗರ ಮತ್ತು ಎಚ್‌.ಆರ್‌. ಬಿ.ಆರ್ ಮುಖ್ಯರಸ್ತೆಯ ಮುಖಾಂತರ ಕಲ್ಯಾಣನಗರದ ಓಂ ಶಕ್ತಿ ದೇವಸ್ಥಾನದ ಮಾರ್ಗವಾಗಿ 3 ಮತ್ತು 6 ಕಿಲೋಮೀಟರ್ ದೂರದವರೆಗೆ ಸಂಚರಿಸಿ, 8 ಗಂಟೆಗೆ ಮತ್ತೆ ಕ್ಲಬ್‌ನ ಆವರಣಕ್ಕೆ ಆಗಮಿಸಿತು. ಓಟದಲ್ಲಿ 800ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ವಿಜೇತರಿಗೆ ಬಹುಮಾನ ವಿತರಿಸಲಾಯಿತು.

ಈ ವೇಳೆ ಮಾತನಾಡಿದ ಕ್ಲಬ್‌ನ ಅಧ್ಯಕ್ಷ ಹಾಗೂ ಅಂತರರಾಷ್ಟ್ರೀಯ ಹಾಕಿ ಆಟಗಾರ ಎ.ಬಿ.ಸುಬ್ಬಯ್ಯ, ‘ಆಪರೇಷನ್ ಸಿಂಧೂರ’ ಕಾರ್ಯಾಚರಣೆಯಲ್ಲಿ ಯಶಸ್ವಿಯಾದ ಭಾರತೀಯ ಸಶಸ್ತ್ರ ಪಡೆಗೆ ಗೌರವ ಸಲ್ಲಿಸಲು ಮತ್ತು ಅವರ ನಿಸ್ವಾರ್ಥ ಸೇವೆಯನ್ನು ಶ್ಲಾಘಿಸುವುದರ ಜೊತೆಗೆ ಸೈನಿಕರಿಗೆ ಇನ್ನಷ್ಟು ಸ್ಫೂರ್ತಿ ನೀಡಲು ಮತ್ತು ನಾಗರಿಕರಲ್ಲಿ ಹುರುಪು ಮತ್ತು ಅರಿವು ಮೂಡಿಸುವ ಉದ್ದೇಶದಿಂದ ಯುನಿಟಿ ರನ್ ಆಯೋಜಿಸಲಾಗಿತ್ತು.

ಓಟದಲ್ಲಿ 6ರಿಂದ 70 ವರ್ಷ-ದವರೆಗಿನ ವಯೋಮಾನದವರು ಉತ್ಸಾಹದಿಂದ ಪಾಲ್ಗೊಂಡಿದ್ದರು ಎಂದು ತಿಳಿಸಿದರು.

ಶಾಸಕ ಧೀರಜ್ ಮುನಿರಾಜು, ಕ್ಲಬ್‌ನ ಉಪಾಧ್ಯಕ್ಷ ಅಂಥೋಣಿ ಎಸ್‌. ಎಲ್, ಕಾರ್ಯದರ್ಶಿ ಕೆ.ಪ್ರಶಾಂತ್ ರೆಡ್ಡಿ, ಖಜಾಂಚಿ ಕೆ.ಬಿ.ರತ್ನಾಕರರೆಡ್ಡಿ, ಮಾಜಿ ಅಧ್ಯಕ್ಷ ಕೆ.ಸಿ.ಜಗನ್ನಾಥರೆಡ್ಡಿ, ಬೆಂಗಳೂರು ಗ್ರಾಮಾಂತರ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್‌. ನಾಗರಾಜು, ಎಸಿಪಿ ರಂಗಪ್ಪ, ಬಿಬಿಎಂಪಿ ವಿರೋಧಪಕ್ಷದ ಮಾಜಿ ನಾಯಕ ಪದ್ಮನಾಭ ರೆಡ್ಡಿ, ನಗರಸಭೆ ಮಾಜಿ ಸದಸ್ಯ ಕೆ.ಸಿ.ಗಣೇಶ್‌ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.



ಹೆಣ್ಣೂರುಬಾಣಸವಾಡಿ ಕಾಸ್ಮೋಪಾಲಿಟನ್ ಕ್ಲಬ್ ಆಶ್ರಯದಲ್ಲಿ ಆಯೋಜಿಸಿದ್ದ ‘ಯುನಿಟಿ ರನ್’ಗೆ ಶಾಸಕ ಧೀರಜ್ ಮುನಿರಾಜು ಚಾಲನೆ ನೀಡಿದರು

‘ಬಿಜೆಪಿ, ಆರೆಸ್ಸೆಸ್, ವಿಹಿಂಪದಿಂದಲೇ ಕೋಮುದ್ವೇಷ’

ಪ್ರಜಾವಾಣಿ

ಬೆಂಗಳೂರು: ‘ರಾಜ್ಯದಲ್ಲಿ ಬಿಜೆಪಿ, ಆರೆಸ್ಸೆಸ್ ಹಾಗೂ ವಿಶ್ವ ಹಿಂದೂ ಪರಿಷತ್ ಸಂಘಟನೆಗಳು ಕೋಮುದ್ವೇಷವನ್ನು ಹರಡುತ್ತಿವೆ. ಧರ್ಮಗಳ ಮಧ್ಯೆ ವೈಮನಸ್ಸು ಹುಟ್ಟುಹಾಕುವ ಕಾರ್ಖಾನೆ-ಗಳಂತಾಗಿವೆ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಭಾನುವಾರ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷ ಕೋಮುದ್ವೇಷ ಹುಟ್ಟು-ಹಾಕುತ್ತಿದೆ ಎಂಬ ಬಿಜೆಪಿ ಆರೋಪದಲ್ಲಿ ಯಾವುದೇ ಹುರುಳಿಲ್ಲ’ ಎಂದರು.

‘ಎರಡು ದಶಕಗಳಿಂದ ದ್ವೇಷ ಭಾಷಣ ಹಾಗೂ ನಕಲಿ ಸುದ್ದಿ ಹಂಚುವುದನ್ನು ಬಿಜೆಪಿ ಬೆಂಬಲಿತ ಗುಂಪುಗಳು ಸಾಂಸ್ಥಿಕವಾಗಿ ಮಾಡುತ್ತಿವೆ. ಈ ಸಂಘಟನೆಗಳು ಕರಾವಳಿ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಉತ್ತರ ಕನ್ನಡ ಹಾಗೂ ಮಲೆನಾಡು ಪ್ರದೇಶಗಳನ್ನು ದ್ವೇಷ ಹುಟ್ಟುಹಾಕುವ ಪ್ರಯೋಗಾಲಯಗಳನ್ನಾಗಿ ಮಾಡಿವೆ. ದ್ವೇಷ ಭಾಷಣಕ್ಕೆ ಕಡಿವಾಣ ಹಾಕುವ ಉದ್ದೇಶದಿಂದ ರಾಜ್ಯ ಸರ್ಕಾರ ಸದ್ಯದಲ್ಲೇ ಹೊಸ ಕಾಯ್ದೆ ಜಾರಿಗೆ ತರಲಿದೆ’ ಎಂದರು.

ಸೈನಿಕರ ಕಲ್ಯಾಣ ನಿಧಿಗೆ ₹10 ಲಕ್ಷ

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಸೈನಿಕರ ನೈತಿಕ ಶಕ್ತಿಯನ್ನು ಬಲಗೊಳಿಸುವ ನಿಟ್ಟಿನಲ್ಲಿ ಪಂಚಾಯಿತಿ ವತಿಯಿಂದ ಸೈನಿಕರ ಕಲ್ಯಾಣ ನಿಧಿಗೆ ₹10 ಲಕ್ಷ ದೇಣಿಗೆ ನೀಡಲಾಗುತ್ತಿದೆ’ ಎಂದು ಕುಂಬಳಗೋಡು ಪಂಚಾಯಿತಿ ಅಧ್ಯಕ್ಷ ಎನ್. ದೇವರಾಜ್ ಹೇಳಿದರು.

ಕುಂಬಳಗೋಡು ಪಂಚಾಯಿತಿಯ 2025-26ನೇ ಸಾಲಿನ ಮೊದಲನೇ ಸುತ್ತಿನ ಗ್ರಾಮಸಭೆಯಲ್ಲಿ ಶಾಸಕ ಎಸ್. ಟಿ.ಸೋಮಶೇಖರ್ ಅವರಿಗೆ ದೇಣಿಗೆಯ ಚೆಕ್ ನೀಡಿ, ಅವರು ಮಾತನಾಡಿದರು.

ಪಂಚಾಯಿತಿ ವ್ಯಾಪ್ತಿಯ ಸಮಸ್ತ ಮಹಿಳೆಯರ ಸಬಲೀಕರಣಕ್ಕಾಗಿ ಸ್ತ್ರೀ ಶಕ್ತಿ ಸೌಧ ನಿರ್ಮಿಸುವ ಉದ್ದೇಶ ಹೊಂದಿದ್ದು, ಶಾಸಕ ಎಸ್. ಟಿ. ಸೋಮಶೇಖರ್ ಅಗತ್ಯ ಬೆಂಬಲ ನೀಡುವಂತೆ ಕೋರಿದರು.

ಕಡೆಯ ಗ್ರಾಮ ಸಭೆ: ಜಿಬಿಎ ಅಸ್ತಿತ್ವಕ್ಕೆ ಬಂದಿರುವುದರಿಂದ ಕುಂಬಳಗೋಡು ಗ್ರಾಮ ಪಂಚಾಯಿತಿಯ ಕಟ್ಟ ಕಡೆಯ ಗ್ರಾಮಸಭೆ ಹಲವಾರು ಸವಲತ್ತುಗಳ ವಿತರಣೆಗೆ ಸಾಕ್ಷಿಯಾಯಿತು.

ಹೊಸಪಾಳ್ಯ, ಕುಂಬಳಗೋಡು, ಅಂಚೆಪಾಳ್ಯ, ಗೇರು ಪಾಳ್ಯ, ಕಣಿಮಿಣಕೆ ಅಂಗನವಾಡಿಗಳಿಗೆ ತಲಾ ಒಂದು ವಾಟರ್ ಫಿಲ್ಟರ್, ಹೊಸಪಾಳ್ಯ ಅಂಗನವಾಡಿಗೆ ಒಂದು ಫ್ರಿಡ್ಜ್, ಪಂಚಾಯಿತಿ ವ್ಯಾಪ್ತಿಯ 65 ಸ್ತ್ರೀ ಶಕ್ತಿ ಗುಂಪುಗಳಿಗೆ ಸೀರೆ, ಬಾಣಂತಿಯರು, ಅಂಗವಿಕಲರು ಸೇರಿದಂತೆ 1000 ಮಂದಿಗೆ ಕುಕ್ಕರ್, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ₹10 ಸಾವಿರ ವಿದ್ಯಾರ್ಥಿವೇತನ, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ಸೀರೆಗಳನ್ನು ವಿತರಿಸಲಾಯಿತು.

ಶಾಸಕ ಎಸ್. ಟಿ. ಸೋಮಶೇಖರ್ ಮಾತನಾಡಿ, ‘ಜಲ ಜೀವನ್ ಮಿಷನ್ ಅಡಿ ನೀರಿನ ಸಂಪರ್ಕಕ್ಕಾಗಿ ತೋಡಿರುವ ಗುಂಡಿಗಳಿಗೆ ಬಿದ್ದು ದ್ವಿಚಕ್ರ ವಾಹನ ಸವಾರರು ಸಾವಿಗೆ ಈಡಾಗುತ್ತಿದ್ದಾರೆ. ಅಧಿಕಾರಿಗಳು ಯೋಜನೆಯನ್ನು ಸಮರ್ಪಕವಾಗಿ ಜಾರಿಗೊಳಿಸಬೇಕು’ ಎಂದು ತಾಕೀತು ಮಾಡಿದರು.

ಕುಂಬಳಗೋಡು ಪಂಚಾಯಿತಿ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಸೇರ್ಪಡೆಯಾಗುವ ಮೂಲಕ ಮತ್ತಷ್ಟು ಅಭಿವೃದ್ಧಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಮಂಚನಬೆಲೆ ಜಲಾಶಯದಿಂದ ಕ್ಷೇತ್ರದ 71 ಗ್ರಾಮಗಳಿಗೆ ಕುಡಿಯುವ ನೀರು ದೊರಕಲಿದೆ ಎಂದು ಮಾಹಿತಿ ನೀಡಿದರು.

ಉಪಾಧ್ಯಕ್ಷ ಗೋಪಾಲ ಕೃಷ್ಣ, ಮಾಜಿ ಅಧ್ಯಕ್ಷರಾದ ಚಿಕ್ಕರಾಜು, ನರಸಿಂಹಮೂರ್ತಿ ಮುಖಂಡರಾದ ಅನಿಸ್, ಯಶೋದಮ್ಮ, ನಂಜಪ್ಪ, ನಂಜೇಗೌಡ ಮತ್ತಿತರು ಉಪಸ್ಥಿತರಿದ್ದರು.

ಧೂಮಪಾನ: ಕ್ಯಾನ್ಸರ್ ಪತ್ತೆಗೆ ತಪಾಸಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವಿಶ್ವ ತಂಬಾಕು ರಹಿತ ದಿನದ ಅಂಗವಾಗಿ ಎಚ್‌ಸಿಜಿ ಕ್ಯಾನ್ಸರ್ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಯು ಸಂಚಾರ ಪೊಲೀಸರು ಹಾಗೂ ಸಾರ್ವಜನಿಕರಿಗೆ ಉಚಿತ ಶ್ವಾಸಕೋಶ ಕ್ಯಾನ್ಸರ್ ತಪಾಸಣೆಯನ್ನು ಶನಿವಾರ ನಡೆಸಿದರು.

ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ, ಐದು ವರ್ಷಗಳು ಹಾಗೂ ಅದಕ್ಕಿಂತ ಹೆಚ್ಚಿನ ಅವಧಿಯಿಂದ ಧೂಮಪಾನ ಮಾಡುತ್ತಿರುವವರಿಗೆ ತಪಾಸಣೆ ಮಾಡಿಸಿಕೊಳ್ಳು-ವಂತೆ ಪ್ರೇರೇಪಿಸುವುದು ಶಿಬಿರದ ಉದ್ದೇಶವಾಗಿತ್ತು. ಈ ಶಿಬಿರದಲ್ಲಿ ಕ್ಯಾನ್ಸರ್ ಹಾಗೂ ಶ್ವಾಸಕೋಶ ತಜ್ಞರು ತಪಾಸಣೆಗೊಳಗಾದವರ ಜತೆಗೆ ಸಮಾಲೋಚನೆ ನಡೆಸಿದರು. ಬಾಯಿ ಕ್ಯಾನ್ಸರ್ ಪತ್ತೆ ಸಂಬಂಧವೂ ತಪಾಸಣೆ ನಡೆಸಿ, ಕೆಲವರಿಗೆ ಸಿಟಿ ಸ್ಕ್ಯಾನ್ ಕೂಡ ಮಾಡಲಾಯಿತು.


ಈ ವೇಳೆ ಮಾತನಾಡಿದ ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ. ರೋಶಿನಿ ದಾಸ್‌ಗುಪ್ತ, ‘ಧೂಮಪಾನದಿಂದ ಶ್ವಾಸಕೋಶ ಸೇರಿ ದೇಹದ ವಿವಿಧ ಅಂಗಾಂಗಗಳಿಗೆ ಹಾನಿಯಾಗಲಿದೆ. ತಂಬಾಕು ಉತ್ಪನ್ನಗಳ ಸೇವನೆಯಿಂದ ಕ್ಯಾನ್ಸರ್, ಶ್ವಾಸಕೋಶದ ಸಮಸ್ಯೆ ಸೇರಿದಂತೆ ವಿವಿಧ ಕಾಯಿಲೆಗಳು ಕಾಣಿಸಿ-ಕೊಳ್ಳಲಿವೆ. ನೇರ ಮತ್ತು ಪರೋಕ್ಷ ಧೂಮಪಾನಗಳೆರಡೂ ನಮ್ಮ ಆರೋಗ್ಯಕ್ಕೆ ಅತ್ಯಂತ ಅಪಾಯಕಾರಿ. ಆದ್ದರಿಂದ ಚಿಕಿತ್ಸೆಯ ಜತೆಗೆ ಅರಿವು ಮೂಡಿಸಲಾಗು-ತ್ತಿದೆ’ ಎಂದು ಹೇಳಿದರು.

ಹೆಲ್ತ್‌ಕೇರ್ ಗ್ಲೋಬಲ್ ಎಂಟರ್‌ಪ್ರೈಸಸ್‌ನ ಕರ್ನಾಟಕ ಪ್ರಾದೇಶಿಕ ವ್ಯವಹಾರದ ಮುಖ್ಯಸ್ಥ ಮನಿಶ್ ಕುಮಾರ್, ‘ನಿಯಮಿತ ಆರೋಗ್ಯ ತಪಾಸಣೆ ಉತ್ತೇಜಿಸುವ ಮೂಲಕ, ತಂಬಾಕಿನ ವಿನಾಶಕಾರಿ ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದೇವೆ. ಆ ಮೂಲಕ ಕ್ಯಾನ್ಸರ್ ತಡೆಗೆ ಶ್ರಮಿಸಲಾಗುತ್ತಿದೆ’ ಎಂದರು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಯೋಗ ದಿನಾಚರಣೆ: ಅತಿಥಿಗಳು: ಸಂತೋಷ್ ಹೆಗ್ಡೆ, ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಮಂಜುನಾಥ್, ಎಸ್.ಟಿ. ಸೋಮಶೇಖರ್, ಬಸವರಾಜ ಪಾಟೀಲ, ಆಯೋಜನೆ: ಹೊಸಬೆಳಕು ಟ್ರಸ್ಟ್, ಸ್ಥಳ: ಹಿಲ್‌ಸೈಡ್ ಆಯುರ್ವೇದಿಕ್ ಮೆಡಿಕಲ್ ಕಾಲೇಜು, ಸಾಲದೊಡ್ಡಿ ಗ್ರಾಮ, ಕನಕಪುರ ಮುಖ್ಯರಸ್ತೆ, ಬೆಳಿಗ್ಗೆ 9ರಿಂದ

ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್, ದೀಪಾ ಭಾಸ್ತಿ ಅವರಿಗೆ ಅಭಿನಂದನಾ ಸಮಾರಂಭ: ಅಭಿನಂದಿಸುವವರು: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಉಪಸ್ಥಿತಿ: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11


ಬಾನು ಮುಷ್ತಾಕ್

ಬುಕರ್ ಪ್ರಶಸ್ತಿ ಪಡೆದ ಬಾನು ಮುಷ್ತಾಕ್ ಅವರಿಗೆ ವಿಚಾರಗೋಷ್ಠಿಯ ಗೌರವ: ‘ಬಾನು ಮುಷ್ತಾಕ್ ಅವರ ಕತೆಗಳಲ್ಲಿ ಬಂಡಾಯದ ಆಶಯ’ ಕುರಿತು: ಎನ್.ಕೆ. ಲೋಲಾಕ್ಷಿ, ‘ಚಳವಳಿಗಳ ಸಂಗತಿಯಾಗಿ ಬಾನು ಮುಷ್ತಾಕ್’ ಕುರಿತು: ಆರ್.ಜಿ. ಹಳ್ಳಿ ನಾಗರಾಜ್, ಅಧ್ಯಕ್ಷತೆ: ಕೆ. ಷರೀಫಾ, ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಉಪಸ್ಥಿತಿ: ಶ್ರೀನಿವಾಸ ನಾಯಕ್, ಆಯೋಜನೆ: ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಬಾಪೂಜಿ ಸಭಾಂಗಣ, ಸರ್ಕಾರಿ ಕಲಾ ಕಾಲೇಜು, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಸಂಜೆ 4

‘ಕಾರ್ಯವಿಧಾನದಲ್ಲಿ ಸುಧಾರಣೆಗಳು– ವಿಕಸಿತ ಭಾರತಕ್ಕೆ ದಾರಿ’ ಉಪನ್ಯಾಸ: ಸಂಜೀವ್ ಸನ್ಯಾಲ್, ಆಯೋಜನೆ: ಚಾಣಕ್ಯ ವಿಶ್ವವಿದ್ಯಾಲಯ, ಸ್ಥಳ: ಯುವಪಥ, ಜಯನಗರ, ಸಂಜೆ 5

ಮಹಾವಿಷ್ಣು ವಿಶ್ವ ವಿರಾಟ ದರ್ಶನ, ಮಹಾಕುಂಬಾಭಿಷೇಕ: ವಿದ್ಯಾಧೀಶ ತೀರ್ಥ ಸ್ವಾಮೀಜಿ, ಯದುಗಿರಿ ಯತಿರಾಜ್ ಜೀಯರ್ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ಶ್ರೀಕೋದಂಡ ರಾಮಸ್ವಾಮಿ ದೇವಸ್ಥಾನ, ಈಜಿಪುರ, ಸಂಜೆ 6ರಿಂದ

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಚಾಲಕನನ್ನು ಅಮಾನತುಗೊಳಿಸಲು ಆದೇಶ ಹೊರಡಿಸಿದ ಬಿಎಂಟಿಸಿ

ಯುವತಿ ಮೇಲೆ ಬಸ್ ಹತ್ತಿಸಲು ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬಿಎಂಟಿಸಿ ಚಾಲಕನೊಬ್ಬ ಯುವತಿ ಮೇಲೆ ಬಸ್ ಹತ್ತಿಸಲು ಯತ್ನಿಸಿರುವ ಘಟನೆ ಕಸ್ತೂರಬಾ ರಸ್ತೆಯ ನಡೆದಿದೆ. ಈ ಘಟನೆಗೆ ಸಂಬಂಧಿಸಿದಂತೆ ಚಾಲಕನನ್ನು ಅಮಾನತುಗೊಳಿಸಿ, ಬಿಎಂಟಿಸಿ ಆದೇಶ ಹೊರಡಿಸಿದೆ.

ಮೇ 23ರ ಸಂಜೆ 5.40ಕ್ಕೆ ಈ ಘಟನೆ ನಡೆದಿತ್ತು. ಘಟನೆ ದೃಶ್ಯ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿದೆ. ಬಸ್‌ನ ಹಿಂಬದಿ ಭಾಗ ಕಾರಿಗೆ ತಾಗಿತ್ತು. ಇದರಿಂದಾಗಿ ಬಿಎಂಟಿಸಿ ಬಸ್ ಚಾಲಕ ಪ್ರಶಾಂತ್ ಮತ್ತು ಯುವತಿ ನಡುವೆ ಗಲಾಟೆಯಾಗಿತ್ತು.


ಕಾರಿನಿಂದ ಇಳಿದ ಯುವತಿ ಬಿಎಂಟಿಸಿ ಬಸ್ ಅನ್ನು ತಡೆದು ಚಾಲಕನನ್ನು ಪ್ರಶ್ನೆ ಮಾಡಲು ಮುಂದಾಗಿದ್ದರು. ಆದರೆ, ಈ ವೇಳೆ ಚಾಲಕ ಯುವತಿಯ ಮೇಲೆ ಬಸ್ ಹತ್ತಿಸಲು ಮುಂದಾಗಿದ್ದು, ಕೂದಲೆಳೆ ಅಂತರದಲ್ಲಿ ಯುವತಿ ಪಾರಾಗಿದ್ದಾರೆ.

ಯುವತಿಯ ಮೇಲೆ ಬಸ್ ಹತ್ತಿಸಲು ಯತ್ನಿಸಿದ್ದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಚಾಲಕನ ಕೃತ್ಯಕ್ಕೆ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ಷೇಪ ವ್ಯಕ್ತವಾಯಿತು.

ಅಮಾನತು: ಯುವತಿ ಮೇಲೆ ಬಿಎಂಟಿಸಿ ಬಸ್ ಹತ್ತಿಸಲು ಯತ್ನಿಸಿದ್ದ ಚಾಲಕ ಪ್ರಶಾಂತ್ ಅವರನ್ನು ಅಮಾನತುಗೊಳಿಸಿ ಬಿಎಂಟಿಸಿ ಆದೇಶ ಹೊರಡಿಸಿದೆ.

ಪ್ರತ್ಯಕ್ಷದರ್ಶಿಗಳ ಹೇಳಿಕೆ ಪ್ರಕಾರ ಹಾಗೂ ಪ್ರಾಥಮಿಕ ಪರಿಶೀಲನೆಯ ವೇಳೆ ಯುವತಿ ಬಸ್ ತಡೆದಿದ್ದರೂ ಚಾಲಕ ಮುಂದಕ್ಕೆ ಚಲಾಯಿಸಲು ಯತ್ನಿಸಿರುವುದು ಕಂಡುಬಂದಿದೆ. ಇದರಿಂದ ಮಹಿಳೆಯು ತೀವ್ರ ಅಪಾಯಕ್ಕೆ ಒಳಗಾಗುವ ಸ್ಥಿತಿ ನಿರ್ಮಾಣವಾಗಿತ್ತು. ತಕ್ಷಣ ಬದಿಗೆ ಸರಿದ ಕಾರಣದಿಂದ ಅಪಾಯ ತಪ್ಪಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಸಂಬಂಧ ಕಬ್ಬನ್‌ಪಾರ್ಕ್ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಕಸ್ತೂರಬಾ ರಸ್ತೆಯಲ್ಲಿ ಬಿಎಂಟಿಸಿ ಚಾಲಕನೊಬ್ಬ ಯುವತಿ ಮೇಲೆ ಬಸ್ ಹತ್ತಿಸಲು ಯತ್ನಿಸಿರುವ ದೃಶ್ಯ

ಅಪರಾಧ ಸುದ್ದಿ

ಮಹಿಳೆ ಬಂಧನ, ಬಿಡುಗಡೆ

ಆಟೊ ಚಾಲಕನಿಗೆ ಚಪ್ಪಲಿಯಿಂದ ಹೊಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳ್ಳಂದೂರು ಪೊಲೀಸರು ಬಿಹಾರದ ಮಹಿಳೆಯನ್ನು ಬಂಧಿಸಿ, ಬಳಿಕ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

ಬೆಳ್ಳಂದೂರು ಸೆಂಟ್ರಲ್ ಮಾಲ್ ಬಳಿ ಹಿಂದಿ ಭಾಷೆಯಲ್ಲಿ ಮಾತನಾಡುತ್ತಿದ್ದ ಮಹಿಳೆಯು ಆಟೊ ಚಾಲಕರೊಬ್ಬರಿಗೆ ಶನಿವಾರ ಚಪ್ಪಲಿಯಿಂದ ಹೊಡೆದಿದ್ದರು. ಈ ಸಂಬಂಧ ಚಾಲಕ ಲೋಕೇಶ್ ಅವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿ, ತನಿಖೆ ಕೈಗೊಂಡರು.

‘ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆಯನ್ನು ಆಧರಿಸಿ ಮಹಿಳೆಯನ್ನು ಪತ್ತೆ ಮಾಡಲಾಯಿತು. ನಗರದ ಐ.ಟಿ. ಕಂಪನಿ ಉದ್ಯೋಗಿಯಾಗಿರುವ ಪಂಕೂರಿ ಮಿಶ್ರಾ ಅವರು ಪಿ.ಜಿ ಯಲ್ಲಿ ವಾಸವಿದ್ದು, ಭಾನುವಾರ ಬೆಳಿಗ್ಗೆ ಅವರನ್ನು ಠಾಣೆಯಲ್ಲಿ ವಿಚಾರಣೆಗೆ ಒಳಪಡಿಸಲಾಯಿತು’ ಎಂದು ಪೊಲೀಸರು ತಿಳಿಸಿದರು.

‘ಗರ್ಭಿಣಿಯಾಗಿರುವ ನಾನು ದ್ವಿಚಕ್ರ ವಾಹನದಲ್ಲಿ ಆಸ್ಪತ್ರೆಗೆ ತೆರಳಿ ವಾಪಸ್ ಬರುತ್ತಿದ್ದೆ. ಆಗ ನನ್ನ ದ್ವಿಚಕ್ರ ವಾಹನಕ್ಕೆ ಆಟೊ ಡಿಕ್ಕಿಯಾಯಿತು. ಈ ವಿಚಾರಕ್ಕೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು. ಚಾಲಕ ನನ್ನನ್ನು ನಿಂದಿಸಿದ್ದಲ್ಲದೇ, ಸರಿಯಾಗಿ ವರ್ತಿಸಲಿಲ್ಲ. ಕೋಪಗೊಂಡು ಚಪ್ಪಲಿಯಲ್ಲಿ ಹಲ್ಲೆ ಮಾಡಿದ್ದೆ’ ಎಂದು ಮಹಿಳೆ ವಿಚಾರಣೆ ವೇಳೆ ತಿಳಿಸಿದ್ದಾರೆ.

ಮಹಿಳೆಯ ಹೇಳಿಕೆ ದಾಖಲಿಸಿಕೊಂಡು, ಕರೆದಾಗ ವಿಚಾರಣೆಗೆ ಹಾಜರಾಗುವಂತೆ ಹೇಳಿ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಇದೇ ವೇಳೆ ಕನ್ನಡಪರ ಸಂಘಟನೆಗಳು ಠಾಣೆ ಮುಂದೆ ಜಮಾಯಿಸಿ, ಮಹಿಳೆಯನ್ನು ಬಂಧಿಸಿ, ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದವು.

ಮಹಿಳೆ ಚಪ್ಪಲಿಯಿಂದ ಹೊಡೆಯುತ್ತಿರುವ ದೃಶ್ಯವು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿತ್ತು.

ನಿಷೇಧಾಜ್ಞೆ ಉಲ್ಲಂಘನೆ, ಸರ್ಕಾರಿ ಆಸ್ತಿಗೆ ಹಾನಿ

ಮೂವರು ಶಾಸಕರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಗುಬ್ಬಿ (ತುಮಕೂರು): ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿ ವಿರೋಧಿಸಿ ಶನಿವಾರ ತಾಲ್ಲೂಕಿನ ಸಂಕಾಪುರದ ಬಳಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಬಿಜೆಪಿ ಮತ್ತು ಜೆಡಿಎಸ್‌ನ ಮೂವರು ಶಾಸಕರು ಮತ್ತು ಮಠಾಧೀಶರು ಸೇರಿದಂತೆ ನೂರಕ್ಕೂ ಹೆಚ್ಚು ಜನರ ವಿರುದ್ಧ ಗುಬ್ಬಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಮಠಾಧೀಶರು, ಶಾಸಕರಾದ ಬಿ.ಸುರೇಶ್ ಗೌಡ, ಎಂ.ಟಿ.ಕೃಷ್ಣಪ್ಪ, ಜಿ.ಬಿ.ಜ್ಯೋತಿ ಗಣೇಶ್, ಮಾಜಿ ಸಚಿವ ಸೊಗಡು ಶಿವಣ್ಣ, ಬಿಜೆಪಿ ಮುಖಂಡ ಎಸ್.ಡಿ.ದಿಲೀಪ್ ಕುಮಾರ್, ಎ.ಗೋವಿಂದರಾಜು, ಎಚ್.ಎಸ್.ರವಿಶಂಕರ್ ಮತ್ತು ಇತರರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

₹35 ಲಕ್ಷ ಮೌಲ್ಯದ ಯಂತ್ರಗಳು ಜಖಂ

ಕಾಮಗಾರಿ ಸ್ಥಳದಲ್ಲಿದ್ದ ಯಂತ್ರೋಪಕರಣದ ಮೇಲೆ ಪ್ರತಿಭಟನಕಾರರು ಕಲ್ಲು ತೂರಿದ ಪರಿಣಾಮ ₹34.65 ಲಕ್ಷ ಮೌಲ್ಯದ ಯಂತ್ರಗಳಿಗೆ ಹಾನಿಯಾಗಿದೆ ಎಂದು ಗುತ್ತಿಗೆದಾರ ಶಿವಕುಮಾರ್ ನೀಡಿದ ದೂರಿನ ಮೇರೆಗೆ ಮೂವರು ಶಾಸಕರು ಸೇರಿ 30 ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

‘ಎರಡು ಪೈಪ್, ಜನರೇಟರ್, ಡೀಸೆಲ್ ಟ್ಯಾಂಕರ್ ಹಾಳಾಗಿವೆ. ಇಬ್ಬರು ಆಪರೇಟರ್‌ಗಳಿಗೆ ಗಾಯಗಳಾಗಿವೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಶನಿವಾರ ಪ್ರತಿಭಟನೆಗೆ ಸಾವಿರಾರು ಜನ ಸೇರುವ ಮಾಹಿತಿ ಪಡೆದ ತಾಲ್ಲೂಕು ಆಡಳಿತ ನಿಷೇಧಾಜ್ಞೆ ಜಾರಿಗೊಳಿಸಿತ್ತು. ಲಿಂಕ್ ಕೆನಾಲ್ ಕಾಮಗಾರಿ ನಡೆಯುತ್ತಿರುವ ಸಂಕಾಪುರದ 10 ಕಿಲೋಮೀಟರ್ ವ್ಯಾಪ್ತಿಯಲ್ಲಿ ಯಾವುದೇ ಹೋರಾಟಕ್ಕೆ ಅವಕಾಶ ನೀಡಿರಲಿಲ್ಲ. ಸಾವಿರಾರು ಪ್ರತಿಭಟನಕಾರರು ನಿಷೇಧಾಜ್ಞೆ ಧಿಕ್ಕರಿಸಿ ಕಾಮಗಾರಿ ಸ್ಥಳಕ್ಕೆ ನುಗ್ಗಿದ್ದರು.

ನಿಷೇಧಾಜ್ಞೆ ಉಲ್ಲಂಘನೆ, ಕೊಲೆ ಯತ್ನ, ಸರ್ಕಾರಿ ಆಸ್ತಿಪಾಸ್ತಿಗೆ ಹಾನಿ, ಪ್ರಚೋದನಕಾರಿ ಭಾಷಣ ಮಾಡಿದ ಆರೋಪದ ಮೇರೆಗೆ ಇವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಏಕಾಏಕಿ ಕಾಮಗಾರಿ ಜಾಗಕ್ಕೆ ನುಗ್ಗಿ, ಆಸ್ತಿಪಾಸ್ತಿಗೆ ಹಾನಿ ಮಾಡಲಾಗಿದೆ, ಬೃಹತ್ ನಿರ್ಮಾಣ ವಾಹನಗಳ ಮೇಲೆ ಕಲ್ಲು ತೂರಾಟ ಮಾಡಲಾಗಿದೆ ಎಂದು ಆರೋಪಿಸಲಾಗಿದೆ.

ಇಂದಿರಾ ಕ್ಯಾಂಟೀನ್‌ಗೆ ಚಾಲನೆ



ಚಿಕ್ಕಬಾಣಾವರದ ಇಂದಿರಾ ಕ್ಯಾಂಟೀನ್‌ನಲ್ಲಿ ಎಸ್‌.ಮುನಿರಾಜು ಆಹಾರ ವಿತರಿಸಿದರು

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ಸುಮಾರು ಒಂದೂವರೆ ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಇಂದಿರಾ ಕ್ಯಾಂಟೀನ್ ಕಟ್ಟಡಕ್ಕೆ ಶಾಸಕ ಎಸ್.ಮುನಿರಾಜು ಚಾಲನೆ ನೀಡಿದರು.

‘ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ಬಡವರು, ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸಮಾಡುತ್ತಿದ್ದಾರೆ. ಜೊತೆಗೆ ಉತ್ತರ ಭಾಗದ ಹಲವಾರು ಜಿಲ್ಲೆಗಳಿಂದ ರೈಲ್ವೆ ನಿಲ್ದಾಣಕ್ಕೆ ಸಾವಿರಾರು ಜನರು ಬರುತ್ತಾರೆ. ಈ ಭಾಗದ ಜನರ ಬಹಳ ದಿನಗಳ ಬೇಡಿಕೆಯಂತೆ ಇಂದಿರಾ ಕ್ಯಾಂಟೀನ್ ಆರಂಭಿಸಲಾಗಿದೆ’ ಎಂದು ಮುನಿರಾಜು ಹೇಳಿದರು.

'ಚಿಕ್ಕಬಾಣಾವರ ರೈಲ್ವೆ ನಿಲ್ದಾಣ ಮುಖ್ಯರಸ್ತೆಯಲ್ಲಿ ₹36 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಸುಸಜ್ಜಿತ ಸಾರ್ವಜನಿಕ ಶೌಚಾಲಯಕ್ಕೂ ಚಾಲನೆ ನೀಡಲಾಗಿದೆ. ಪುರಸಭೆಯಲ್ಲಿ ಈಗ ತೆರಿಗೆ ಕಟ್ಟಿಸಿಕೊಂಡು ಖಾತೆ ಮಾಡಲಾಗುತ್ತಿದೆ. ಬೇಗ ಬೇಗ ಖಾತೆಗಳನ್ನು ಮಾಡಿಸಿಕೊಂಡರೆ ಮುಂದೆ ಬಿಬಿಎಂಪಿ ಆದಾಗ ಅನುಕೂಲವಾಗುತ್ತದೆ’ ಎಂದು ಸಲಹೆ ನೀಡಿದರು.

ಬೆಂಗಳೂರು ನಗರ ಜಿಲ್ಲೆ ಉಪ ವಿಭಾಗಾಧಿಕಾರಿ ಪ್ರಮೋದ್ ಪಾಟೀಲ್, ಯೋಜನಾ ನಿರ್ದೇಶಕಿ ಮಾಧವಿ, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮರಿಸ್ವಾಮಿ, ಪುರಸಭೆ ಮುಖ್ಯಾಧಿಕಾರಿ ಸಂದೀಪ್.ಎಂ, ಸ್ಥಳೀಯ ಮುಖಂಡರಾದ ಬಿ.ಎಂ. ಚಿಕ್ಕಣ್ಣ, ವೆಂಕಟೇಶ್, ಭಾಗ್ಯಮ್ಮ ಉಪಸ್ಥಿತರಿದ್ದರು.

ನಿರ್ಮಾಪಕ ಸೂರಪ್ಪ ಬಾಬುಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ನಿರ್ಮಾಣಕ್ಕೆಂದು ಪಡೆದ ಸಾಲ ಹಿಂತಿರುಗಿಸದ ಪ್ರಕರಣಕ್ಕೆ ಸಂಬಂಧಿಸಿದಂತೆ ನಿರ್ಮಾಪಕ ಸೂರಪ್ಪ ಬಾಬು ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಸೋಮವಾರ ನೋಟಿಸ್ ಜಾರಿ ಮಾಡಲಾಗುವುದು ಎಂದು ಅಮೃತಹಳ್ಳಿ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಗರದ ತಲಕಾವೇರಿ ಲೇಔಟ್ ನಿವಾಸಿ ಎಚ್.ಜಿ. ಲಕ್ಷ್ಮೀ ಅವರ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಳ್ಳಲಾಗಿದೆ.

ಮಹಿಳೆಯಿಂದ ಹಣ ಪಡೆದುಕೊಂಡಿರುವ ಹಾಗೂ ಅವರಿಗೆ ಎಷ್ಟು ಹಣ ವಾಪಸ್ ನೀಡಲಾಗಿದೆ ಎಂಬುದರ ಬಗ್ಗೆ ದಾಖಲೆಗಳನ್ನು ಹಾಜರುಪಡಿಸುವಂತೆ ಸೂರಪ್ಪಗೆ ಸೂಚಿಸಲಾಗುವುದು ಎಂದು ಪೊಲೀಸರು ತಿಳಿಸಿದರು.

‘ನಟರಾದ ಶಿವರಾಜಕುಮಾರ್, ಗಣೇಶ್ ಅವರನ್ನು ಹಾಕಿಕೊಂಡು ‘ಪ್ರೊಡಕ್ಷನ್ ನಂಬರ್ 06’ ಚಿತ್ರ ನಿರ್ಮಿಸುತ್ತಿರುವುದಾಗಿ ನಂಬಿಸಿ ₹92.50 ಲಕ್ಷ ಪಡೆದುಕೊಂಡಿದ್ದರು. ಈ ಪೈಕಿ ₹25 ಲಕ್ಷವನ್ನು ಮಾತ್ರ ಹಿಂದಿರುಗಿಸಿದ್ದರು. ಉಳಿದ ಹಣವನ್ನು ಕೇಳಿದಾಗ ನಿಮಗೆ ಕೊಡಲು ಹಣವಿಲ್ಲ, ಏನು ಬೇಕಾದರೂ ಮಾಡಿಕೊಳ್ಳಿ ಎಂದು ಬೆದರಿಕೆ ಹಾಕಿದ್ದಾರೆ’ ಎಂದು ದೂರಿನಲ್ಲಿ ವಿವರಿಸಲಾಗಿದೆ.

‘2023ರ ಅಕ್ಟೋಬರ್‌ನಲ್ಲಿ ಸೂರಪ್ಪ ಬಾಬು ಭೇಟಿಯಾಗಿ, ಚಿತ್ರ ನಿರ್ಮಾಣಕ್ಕೆ ಹಣಕಾಸು ನೆರವು ಕೋರಿದ್ದರು. ಹಂತ ಹಂತವಾಗಿ ಅವರಿಗೆ ಸಾಲದ ರೂಪದಲ್ಲಿ ಹಣ ನೀಡಿದ್ದೇನೆ. ಈ ಸಂಬಂಧ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಹಣ ಪಡೆದುಕೊಂಡ ಕೆಲ ದಿನಗಳ ಬಳಿಕ ಸೂರಪ್ಪ ಸಂಪರ್ಕಕ್ಕೆ ಸಿಕ್ಕಿರಲಿಲ್ಲ. ಪರಿಶೀಲಿಸಿದಾಗ, ಶಿವರಾಜ್ ಕುಮಾರ್ ಮತ್ತು ಗಣೇಶ್ ಅವರನ್ನು ಹಾಕಿಕೊಂಡು ಯಾವುದೇ ಚಿತ್ರ ನಿರ್ಮಿಸುತ್ತಿಲ್ಲ ಎಂಬುದು ಗೊತ್ತಾಯಿತು’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

‘ಸಿನಿಮಾ ರಂಗದಲ್ಲಿರುವ ಕೆಲವರನ್ನು ವಿಚಾರಿಸಿದಾಗ, ಸೂರಪ್ಪ ಬಾಬು ಅವರು ಶಿವರಾಜ್‌ಕುಮಾರ್ ಹಾಗೂ ಗಣೇಶ್ ಅವರೊಂದಿಗೆ ಸಿನಿಮಾ ಮಾಡುತ್ತಿಲ್ಲ. ಆದರೆ ಉಪೇಂದ್ರ ಅವರೊಂದಿಗೆ ಸಿನಿಮಾ ನಿರ್ಮಾಣ ಮಾಡುತ್ತಿರುವುದು ತಿಳಿಯಿತು’ ಎಂದು ಮಹಿಳೆ ಹೇಳಿದ್ದಾರೆ.

ಲಾಕರ್‌ನಲ್ಲಿಯೇ ಆಭರಣ ಪತ್ತೆ: ಎಸ್‌ಬಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದ ಚಿನ್ನಾಭರಣ ಕಳ್ಳತನವಾಗಿದೆ ಎಂಬ ಆರೋಪ ಸುಳ್ಳು, ವಾಸ್ತವಕ್ಕೆ ದೂರವಾಗಿದೆ’ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಪಷ್ಟಪಡಿಸಿದೆ.

ಚಿಕ್ಕಮಾರನಹಳ್ಳಿಯ ಡಾಲರ್ಸ್ ಕಾಲೊನಿಯ ಎಸ್‌ಬಿಐ ಶಾಖೆಯ ಬ್ಯಾಂಕ್ ಲಾಕರ್‌ನಲ್ಲಿಟ್ಟಿದ್ದ ಚಿನ್ನಾಭರಣ ಕಳ್ಳತನವಾಗಿದೆ ಎಂದು ಆರೋಪಿಸಿ ಸಿ.ಡಿ.ಬಿಂದು ಎಂಬುವವರು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಈ ಆರೋಪಕ್ಕೆ ಸಂಬಂಧಿಸಿದಂತೆ ಸ್ಪಷ್ಟನೆ ನೀಡಿರುವ ಬ್ಯಾಂಕ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕ, ‘ಸಾಕ್ಷಿದಾರರು, ದೂರುದಾರರು ಮತ್ತು ಪೊಲೀಸರ ಸಮಕ್ಷಮದಲ್ಲಿ ಲಾಕರ್ ಪರಿಶೀಲಿಸಲಾಯಿತು. ದೂರುದಾರರು ನಾಪತ್ತೆಯಾಗಿದ್ದವು ಎಂದು ಆರೋಪಿಸಿದ್ದ ಆಭರಣಗಳು ಅಲ್ಲಿ ಯಥಾಸ್ಥಿತಿಯಲ್ಲಿ ಇರುವುದು ಕಂಡುಬಂದಿದೆ’ ಎಂದು ಹೇಳಿದ್ದಾರೆ. ಈ ಎಲ್ಲಾ ಪ್ರಕ್ರಿಯೆಯನ್ನು ತನಿಖಾಧಿಕಾರಿಗಳು ವಿಡಿಯೊ ಚಿತ್ರೀಕರಣ ಮಾಡಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ಹರಿದು ಮೀಟರ್ ರೀಡರ್ ಸಾವು

ಬೆಳಗಾವಿ: ಇಲ್ಲಿನ ಜೈತನಮಾಳ್ ಪ್ರದೇಶದಲ್ಲಿನ ಮನೆಗೆ ಭಾನುವಾರ ವಿದ್ಯುತ್ ಮೀಟರ್ ರೀಡಿಂಗ್‌ಗೆ ಹೋದಾಗ, ಮೀಟರ್ ಬಾಕ್ಸ್‌ನಲ್ಲಿ ವಿದ್ಯುತ್ ಪ್ರವಹಿಸಿ ಸಿಬ್ಬಂದಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

‘ತಾಲ್ಲೂಕಿನ ಯಳ್ಳೂರ ಗ್ರಾಮದ ರಾಹುಲ್ ಪಾಟೀಲ ಮೃತರು. ಮೀಟರ್ ರೀಡರ್ ಆಗಿ ಅವರು ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಎಂಎಫ್: ಗರಿಷ್ಠ 1.25 ಕೋಟಿ ಲೀಟರ್ ಸಂಗ್ರಹದ ನಿರೀಕ್ಷೆ; ಹೆಚ್ಚಿದ ಹಸಿರು ಮೇವಿನ ಲಭ್ಯತೆ

ಕೋಟಿ ಲೀಟರ್ ದಾಟಿದ ಹಾಲು ಸಂಗ್ರಹ

• ಗಾಣಧಾಳು ಶ್ರೀಕಂಠ



ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳದಲ್ಲಿ (ಕೆಎಂಎಫ್) ನಿತ್ಯದ ಹಾಲು ಸಂಗ್ರಹ ಪ್ರಮಾಣ ಒಂದು ಕೋಟಿ ಲೀಟರ್ ದಾಟಿದ್ದು, ಇದು ಸಾರ್ವಕಾಲಿಕ ದಾಖಲೆಯಾಗಿದೆ.

ಕಳೆದ ವರ್ಷ ನಿತ್ಯದ ಹಾಲಿನ ಸಂಗ್ರಹ ಕೋಟಿ ಲೀಟರ್‌ಗೆ ತಲುಪಿತ್ತು. ಈ ವರ್ಷ ಮುಂಗಾರಿನ ಆರಂಭದಲ್ಲೇ ಒಂದು ಕೋಟಿ ಲೀಟರ್ ದಾಟಿದೆ. ಲಭ್ಯವಾಗಿರುವ ಮಾಹಿತಿ ಪ್ರಕಾರ, ಮೇ 24ರಂದು 1.02 ಕೋಟಿ ಲೀಟರ್ ಹಾಲು ಸಂಗ್ರಹವಾಗಿದೆ ಎಂದು ಕೆಎಂಎಫ್‌ನ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ರಾಜ್ಯದಲ್ಲಿ ಕೆಎಂಎಫ್ ವ್ಯಾಪ್ತಿಯಲ್ಲಿ 16 ಜಿಲ್ಲಾ ಹಾಲು ಒಕ್ಕೂಟಗಳಿವೆ. 15,840 ಡೇರಿಗಳಿವೆ. 26.89 ಲಕ್ಷ ರೈತರು ಹಾಲು ಪೂರೈಸುತ್ತಾರೆ. ಬೇಸಿಗೆಯಲ್ಲಿ ಹಸಿರು ಮೇವಿನ ಕೊರತೆಯ ಕಾರಣ ಸಹಜವಾಗಿ ಹಾಲಿನ ಇಳುವರಿ ಕಡಿಮೆಯಾಗುತ್ತದೆ. ಡೇರಿಗಳಲ್ಲಿ ನಿತ್ಯದ ಹಾಲಿನ ಸಂಗ್ರಹ ಸರಾಸರಿ 80 ಲಕ್ಷ ಲೀಟರ್‌ನಷ್ಟಿರುತ್ತದೆ. ಕಳೆದ ವರ್ಷ ಇದೇ ದಿನದಂದು 89 ಲಕ್ಷ ಲೀಟರ್ ಹಾಲು ಸಂಗ್ರಹವಾಗಿತ್ತು.

ಆದರೆ, ಈ ವರ್ಷ ಫೆಬ್ರುವರಿ ಕೊನೆಯ ವಾರದಿಂದಲೇ ರಾಜ್ಯದ ವಿವಿಧೆಡೆ ತುಂತುರು ಮಳೆ ಶುರುವಾಯಿತು. ವಿಶೇಷವಾಗಿ ಬಯಲು ಸೀಮೆಯ ಕೆಲ ಜಿಲ್ಲೆಗಳಲ್ಲಿ ಮುಂಗಾರು ಪೂರ್ವ ಮಳೆ ಹೆಚ್ಚು ಸುರಿಯಿತು. ಹಸಿರು ಮೇವಿನ ಲಭ್ಯತೆ ಹೆಚ್ಚಾಗಿ ಹಾಲು ಸಂಗ್ರಹ ಪ್ರಮಾಣವೂ ಶೇಕಡ 12ರಷ್ಟು ಹೆಚ್ಚಳವಾಗಿತ್ತು.

ಮೇ ತಿಂಗಳಾಂತ್ಯದವರೆಗೂ ಹಾಲು ಸಂಗ್ರಹ ಹೆಚ್ಚಾಗುತ್ತಲೇ ಇದ್ದು, ಈಗ ಒಂದು ಕೋಟಿ ಲೀಟರ್ ದಾಟಿದೆ. ಈ ಪ್ರಮಾಣ ಇನ್ನೂ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಕೆಎಂಎಫ್ ಮೂಲಗಳು ತಿಳಿಸಿವೆ.

‘ಈ ವರ್ಷ ಬೇಸಿಗೆಯಲ್ಲಿ ಉತ್ತಮ ಮಳೆಯಾಯಿತು. ಹಸಿರು ಮೇವು ಸಿಕ್ಕಿತು. ವಾತಾವರಣ ತಂಪಾದ ಕಾರಣ ಹಸುಗಳು ಆರೋಗ್ಯವಾಗಿದ್ದು, ಕಳೆದ ವರ್ಷದ ಬೇಸಿಗೆಗಿಂತ ಸ್ವಲ್ಪ ಹೆಚ್ಚು ಹಾಲು ಕೊಟ್ಟವು. ಈ ಬಾರಿ ಬೇಸಿಗೆ ಯಲ್ಲಿ ಡೇರಿಗೆ ಹೆಚ್ಚು ಹಾಲು ಹಾಕಿದ್ದೇವೆ’ ಎಂದು ತುಮಕೂರು ಜಿಲ್ಲೆಯ ತೋವಿನಕೆರೆಯ ಹೈನುಗಾರರಾದ ರಾಜೇಶ್ವರಿ ವಿವರಿಸಿದರು.

> **ಪ್ರೋತ್ಸಾಹಧನ, ಉತ್ತಮ ಮಳೆಯಿಂದಾಗಿ ಮೇ ತಿಂಗಳಲ್ಲಿ ನಿತ್ಯದ ಹಾಲಿನ ಸಂಗ್ರಹ ಒಂದು ಕೋಟಿ ಲೀಟರ್ ದಾಟಿದೆ. ಈ ವರ್ಷ 1.25 ಕೋಟಿ ಲೀಟರ್‌ಗೂ ಹೆಚ್ಚು ಸಂಗ್ರಹವಾಗುವ ಅಂದಾಜು ಇದೆ**
>
> **ಭೀಮಾನಾಯ್ಕ,** ಅಧ್ಯಕ್ಷ, ಕೆಎಂಎಫ್

ಮೇ 24 ರಂದು ಬಮೂಲ್‌ನಲ್ಲಿ 18ಲಕ್ಷ ಲೀಟರ್, ಹಾಸನ ಘಟಕದಲ್ಲಿ 14 ಲಕ್ಷ ಲೀಟರ್ ಮತ್ತು ಮಂಡ್ಯ ಘಟಕದಲ್ಲಿ 10 ಲಕ್ಷಕ್ಕೂ ಹೆಚ್ಚು ಲೀಟರ್ ಹಾಲು ಸಂಗ್ರಹವಾಗಿದೆ. ಇವು ಅತಿ ಹೆಚ್ಚು ಹಾಲು ಸಂಗ್ರಹವಾಗಿರುವ ಮೊದಲ ಮೂರು ಜಿಲ್ಲೆಗಳಾಗಿವೆ.

ಪ್ರಜಾವಾಣಿ ವಿಶೇಷ

ಹೆಚ್ಚಾದ ಹಾಲನ್ನು ಮೌಲ್ಯವರ್ಧನೆ ಸೇರಿದಂತೆ ವಿವಿಧ ರೀತಿಯಲ್ಲಿ ಸಂಗ್ರಹಿಸಿ ಸಮರ್ಥವಾಗಿ ನಿಭಾಯಿಸಲು ಕೆಎಂಎಫ್ ಸಿದ್ಧತೆ ನಡೆಸಿದೆ. ಸದ್ಯ ನಿತ್ಯ ಸಂಗ್ರಹವಾಗುವ ಕೋಟಿ ಲೀಟರ್ ಹಾಲಿನಲ್ಲಿ 75 ಲಕ್ಷ ಲೀಟರ್‌ನಷ್ಟು ಗ್ರಾಹಕರಿಗೆ ಮಾರಾಟವಾಗುತ್ತದೆ.

‘ಸಂಗ್ರಹವಾಗುವ ಹೆಚ್ಚುವರಿ ಹಾಲಿನಿಂದ, ಹಾಲಿನ ಪುಡಿ, ತುಪ್ಪ, ಮೊಸರು ಸೇರಿದಂತೆ ವಿವಿಧ ಮೌಲ್ಯವರ್ಧಿತ ಉತ್ಪನ್ನಗಳನ್ನು ತಯಾರಿಸಲಾಗುತ್ತದೆ. ಈ ಮೂಲಕ ಮುಂದಿನ ಬೇಸಿಗೆ ವೇಳೆಗೆ ಕೆಎಂಎಫ್ ಉತ್ಪನ್ನಗಳಿಗೆ ಕೊರತೆಯಾಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ್ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ವರ್ಷವಾರು ಮೇನಲ್ಲಿ ಸರಾಸರಿ ಹಾಲಿನ ಸಂಗ್ರಹ ಪ್ರಮಾಣ (ಲಕ್ಷ ಲೀ.)

ವರ್ಷ	ಲಕ್ಷ ಲೀ.
2020	76.36
2021	85.14
2022	87.00
2023	82.00
2024	86.30
2025	97.55

** ಮೇ 24, 2025ರಂದು 1.0234 ಕೋಟಿ ಲೀಟರ್ ಹಾಲು ಸಂಗ್ರಹವಾಗಿದೆ

ಒಕ್ಕೂಟ	ಮೇ 24ರ ಹಾಲು ಸಂಗ್ರಹ (ಲಕ್ಷ ಲೀ.)
ಬೆಂಗಳೂರು	18.31
ಹಾಸನ	14.5
ಮಂಡ್ಯ	12.4
ಮೈಸೂರು	9.42
ತುಮಕೂರು	10.6
ಶಿವಮೊಗ್ಗ	8.31
ಕೋಲಾರ	7.48
ಚಿಕ್ಕಬಳ್ಳಾಪುರ	5.5
ದಕ್ಷಿಣ ಕನ್ನಡ	4.14
ಚಾಮರಾಜನಗರ	3.04
ಬೆಳಗಾವಿ	2.16
ಬಳ್ಳಾರಿ	2.17
ಧಾರವಾಡ	1.83
ವಿಜಯಪುರ	1.51
ಹಾವೇರಿ	1.48
ಕಲಬುರಗಿ	0.58
ಒಟ್ಟು	102.35

‘ಆಪರೇಷನ್ ಸಿಂಧೂರ’ ಪ್ರಬಂಧ ಸ್ಪರ್ಧೆ

ನವದೆಹಲಿ (ಪಿಟಿಐ): ರಕ್ಷಣಾ ಸಚಿವಾಲಯವು ‘ಆಪರೇಷನ್ ಸಿಂಧೂರ’ ಬಗ್ಗೆ ಜೂನ್ 1ರಿಂದ 30 ರವರೆಗೆ ಪ್ರಬಂಧ ಸ್ಪರ್ಧೆ ಆಯೋಜಿಸಿದೆ.

ಶಾಲೆಯ ಗಂಟೆ ಬಾರಿಸಿದೆ. ಜ್ಞಾನದೇಗುಲಗಳಲ್ಲಿ ಇನ್ನು ಚಿಣ್ಣರ ಕಲರವ

ವಿದ್ಯಾರ್ಥಿ ವೇತನ ಕೈಪಿಡಿ

ಗುರುರಾಯರು ಫೌಂಡೇಷನ್ ಸ್ಕಾಲರ್‌ಷಿಪ್

ಪದವಿಪೂರ್ವ ಶಿಕ್ಷಣ ಪಡೆಯುವ ಅಭ್ಯರ್ಥಿಗಳಿಗೆ ನೀಡಲಾಗುತ್ತದೆ.

ಅರ್ಹತೆ: ಭಾರತೀಯ ನಾಗರಿಕರಾಗಿದ್ದು, ಅರ್ಜಿ ಸಲ್ಲಿಸುವ ಸಮಯದಲ್ಲಿ 22ಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಅರ್ಜಿದಾರರು ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಪದವಿ ಶಿಕ್ಷಣಕ್ಕಾಗಿ 2025-26ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪಡೆದಿರಬೇಕು. ಸೂಕ್ತ ದಾಖಲೆಗಳೊಂದಿಗೆ ಉತ್ತಮ ಶೈಕ್ಷಣಿಕ ಸಾಧನೆಗಳನ್ನು ಹೊಂದಿದವರಾಗಿರಬೇಕು.
ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷಕ್ಕಿಂತ ಹೆಚ್ಚಿರಬಾರದು.

ಆರ್ಥಿಕ ಸಹಾಯ: ಆಯ್ದ ಅಧ್ಯಯನ ಕೋರ್ಸ್‌ನ ಬೋಧನಾ ಶುಲ್ಕಕ್ಕೆ ಸಂಪೂರ್ಣ ವಿದ್ಯಾರ್ಥಿವೇತನ ಸಿಗುತ್ತದೆ.

ಅರ್ಜಿ ಸಲ್ಲಿಕೆಗೆ ಕೊನೇ ದಿನ: 30.06.2025

ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/GRFS1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜ ವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

2) ಕಾಲಾನುಕ್ರಮದಲ್ಲಿ ಜೋಡಿಸಿ

1) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.

2) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು

4) ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ–ಡಿ–ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು

ಉತ್ತರ:–

1) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ–ಡಿ–ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು

2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು. (1664)

3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು (1746)

4) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

ಬಿಟ್ಟ ಸ್ಥಳ ತುಂಬಿರಿ

1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ....

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

2 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ....

ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

3) ....ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪೆನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂತು.

ಉತ್ತರ:– 1602

4) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ....

ಉತ್ತರ:– ಮಾರ್ತಾಂಡ ವರ್ಮ

7) ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ.ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ .... ಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.

ಉತ್ತರ:– ಪೂರ್ವದೇಶ

8) ಇಂಗ್ಲಿಷರು..........................ಎಂಬಲ್ಲಿ ಸೆಂಟ್ ಜಾರ್ಜ್ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು

ಉತ್ತರ:– ಮದ್ರಾಸ್

9) ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು ....ಎಂಬ ಮೂರು ಹಳ್ಳಿಗಳನ್ನು ಇಂಗ್ಲಿಷರು ಖರೀದಿಸಿ ಫೋರ್ಟ್ ವಿಲಿಯಂ ಎಂಬ ಕೋಟೆಯನ್ನು ಕಟ್ಟಿದರು. ಇದರ ಸುತ್ತ ಕಲ್ಕತ್ತಾ ನಗರ ಬೆಳೆಯಿತು.

ಉತ್ತರ:– ಗೋವಿಂದಪುರ

10) ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ....ರಿಂದ ಮದ್ರಾಸನ್ನು ವಶಪಡಿಸಿಕೊಂಡನು.

ಉತ್ತರ:– ಬ್ರಿಟಿಷ್

11) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.

ಉತ್ತರ:– ಪಾಂಡಿಚೇರಿ

12)..............................ವರ್ಷ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.

ಉತ್ತರ:– 1664

14)...................ವರ್ಷ ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದ

ಉತ್ತರ:– 1746

15) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ....

ಉತ್ತರ:– 'ಅಸಫ್ ಜಾ'

16) .... ಒಪ್ಪಂದದೊಂದಿಗೆ ಮೊದಲ ಕಾರ್ನಾಟಿಕ್ ಯುದ್ಧ ಅಂತ್ಯವಾಯಿತು?

ಉತ್ತರ:– 'ಏಕ್ಸ್–ಲಾ–ಚಾಪೆಲ್'

17) ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದವರು ....

ಉತ್ತರ:– ಫ್ರೆಂಚರು

18) ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ ....ಎಂಬ ಅಧಿಕಾರಿಯನ್ನು ನೇಮಿಸಿದ್ದರು

. ಉತ್ತರ:– 'ಬುಸ್ಸಿ'

19) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.

ಉತ್ತರ:– ಪಾಂಡಿಚೇರಿ

20) ಫ್ರೆಂಚರ................ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.

ಉತ್ತರ:– ಕೌಂಟ್– ಡಿ– ಲಾಲಿ

21) 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಮೂರನೆಯ ಕಾರ್ನಾಟಿಕ್ ಯುದ್ಧ ಮುಕ್ತಾಯವಾಯಿತು ಮತ್ತು ಫ್ರೆಂಚರಿಗೆ ....ಯನ್ನು ಹಿಂತಿರುಗಿಸಲಾಯಿತು

ಉತ್ತರ:– ಪಾಂಡಿಚೇರಿ

22) ಸಿರಾಜ–ಉದ್–ದೌಲ್‌ನು ಪೋರ್ಟ್ ....ಯನ್ನು ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು

ಉತ್ತರ:– ವಿಲಿಯಂ ಕೋಟೆ

23) ಯಾವುದೇ ತೆರಿಗೆ ಇಲ್ಲದೆ, ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಾಣೆ ಮಾಡಲು ಬೇಕಾದ ಪರವಾನಿಗೆ ಪತ್ರವೇ........................

ಉತ್ತರ:– ದಸ್ತಕ್

24) 1757ರ ....ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೇ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು

ಉತ್ತರ:– ಪ್ಲಾಸಿ ಕದನದ

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

II PUC: PHYSICS

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

Chapter – 1

ELECTRIC CHARGES AND FIELDS

5. A pendulum bob of mass 80 mg and carrying charge of 2 x 10^{-8} C is at rest at a certain angle with the vertical in a horizontal uniform electric field of 20,000 Vm^{-1}. Find the tension in thread of the pendulum and the angle, it makes with the vertical.

Soln:- (.........Contd)

$$\therefore \tan\theta = \frac{2\times10^{-8}\times 20,000}{8\times10^{-5}\times 9.8}$$
$$= 0.5102$$
$$\Rightarrow \theta = \tan^{-1}(0.5102)$$
$$= 27.02^{0}$$


STEP - 3 Find Tension T

From eqn. (ii),

$$T = \frac{qE}{\sin\theta}$$
$$= \frac{2\times10^{-8}\times 20,000}{\sin 27.02^{0}}$$
$$= 8.8 \times 10^{-4}\ N.$$

6. Infinite number of identical charges each of charge q are placed along the x-axis at a distance a, 2a, 3a, 4a, ... from the origin. Calculate the magnitude of the electric field at the origin due to this distribution of charges.

Soln:- Various charges placed along x-axis are shown in figure.



According to superposition principle, electric field at O due to the given distribution of charges is given by

$$E_1 = E_2 + E_3 + E_4 + \ldots\ldots$$
$$= \frac{1}{4\pi\epsilon_0}\frac{q}{a^2} + \frac{1}{4\pi\epsilon_0}\frac{q}{4a^2} + \frac{1}{4\pi\epsilon_0}\frac{q}{9a^2} + \frac{1}{4\pi\epsilon_0}\frac{q}{16a^2} + \ldots\ldots$$
$$= \frac{1}{4\pi\epsilon_0}\frac{q}{a^2}\left[1 + \frac{1}{4} + \frac{1}{9} + \frac{1}{16} + \ldots\ldots\right]$$
$$= \frac{1}{4\pi\epsilon_0}\frac{q}{a^2}\left[1 + \frac{1}{2^2} + \frac{1}{3^2} + \frac{1}{4^2} + \ldots\ldots\right]$$
$$\text{But}\left[1 + \frac{1}{2^2} + \frac{1}{3^2} + \frac{1}{4^2} + \ldots\ldots\right] = \frac{\pi^2}{6}$$
$$\therefore E = \frac{1}{4\pi\epsilon_0}\frac{q}{a^2} \times \frac{\pi^2}{6}$$
$$= \frac{1}{4\pi\epsilon_0}\left[\frac{\pi^2 q}{6a^2}\right]$$

Answer the following :-

1. A small metallic ball is suspended through an insulating thread in a uniform electric field. If high energy X-ray beam falls on the ball, what will happen to the ball?

Ans:- Falling of high energy X-ray beam on the metal ball will result into emission of electrons from it. Thus the ball acquires positive charge and is deflected by the uniform electric field.

2. What is the role of electric field in microwave cooking?

Ans:- Foods that contain water can be cooked better in a microwave oven because water molecules are electric dipoles which oscillate due to the electric field of microwaves generated in the oven. The bonded molecules of water are broken because of these oscillations, thus transferring their energy into thermal, thus transferring their energy into thermal energy. This thermal energy cooks the food in a microwave oven.

3. Let two charged particles have similar curved paths in a uniform electrostatic field. Then pick the false statements

(1) They have same specific charge i.e., $\frac{e}{m}$ ratio

(2) Their masses must be same


(3) Their charges are of same sign

(4) Magnitudes of their charges must be same.


Ans:- (2) and (4) are false statements because in these cases their $\frac{e}{m}$ ratios will be same and the charges will be of same sign.

4. Give a rough plot of field lines in the electric field around two charges +3 unit and -1 unit.

Ans:- Field lines are directly proportional to the magnitude of electric field. On the other hand, electric field is directly proportional to the magnitude of charge. Thus, the field lines starting or ending on a charge are proportional to the magnitude of charge. It means, field lines starting from a large charge are more than starting from a small charge. The plot is given as ahead:



5. A pendulum consisting of an insulating bob of mass *m* and charge *q* hung as shown in the figure. What is the time period of the pendulum if uniform electric field $\vec{E}$ is set up between the plates.



Soln:- Let the pendulum be at an angle θ with the vertical.

Net force acting on the bob = $(mg - qE)$.

(Contd...)

ದಾನಿಗಳ ಕೊರತೆಯಿಂದ ಸಿಗದ ಅಂಗಾಂಗ • ನೋವಿನಲ್ಲಿಯೇ ದಿನ ಕಳೆಯುತ್ತಿರುವ ರೋಗಿಗಳು

ಅಂಗಾಂಗ ಕಸಿ: ಕಾಯುತ್ತಿವೆ ಸಾವಿರಾರು ಜೀವ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಅಂಗಾಂಗಗಳಿಗೆ ಬೇಡಿಕೆ ಹೆಚ್ಚುತ್ತಲೇ ಇದ್ದು, ಸದ್ಯ 5,948 ಮಂದಿ ಅಂಗಾಂಗಗಳಿಗಾಗಿ ಎದುರು ನೋಡುತ್ತಿದ್ದಾರೆ.

ಆರೋಗ್ಯ ಇಲಾಖೆಯಡಿ ಕಾರ್ಯ-ನಿರ್ವಹಿಸುತ್ತಿರುವ ಜೀವಸಾರ್ಥಕತೆ ಸಂಸ್ಥೆ ಅಂಗಾಂಗಗಳ ಕೊರತೆ ನೀಗಿಸಲು ಶ್ರಮಿಸುತ್ತಿದೆ. ಅಂಗಾಂಗ ದಾನಕ್ಕೆ ಪ್ರೋತ್ಸಾಹಿಸುವ ಜತೆಗೆ ಅಂಗಾಂಗ ವೈಫಲ್ಯ ಆಗಿರುವ ರೋಗಿಗಳಿಗೆ ಅಂಗಾಂಗಗಳನ್ನು ಒದಗಿಸಲು ನೆರವಾಗುತ್ತಿದೆ.

ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯಿಂದ ಪಡೆಯಲಾದ ಅಂಗಾಂಗಗಳನ್ನು ಸಂಸ್ಥೆಯಡಿ ಹೆಸರು ನೋಂದಾಯಿಸಿದವರಿಗೆ ಒದಗಿಸಲಾಗುತ್ತಿದೆ. ದಾನಿಗಳ ಕೊರತೆ, ಹೊಂದಾಣಿಕೆ ಆಗದಿರುವುದು ಇತ್ಯಾದಿ ಕಾರಣಗಳಿಂದ ಹಲವರು ಪ್ರತಿನಿತ್ಯ ಸಮಸ್ಯೆ ಎದುರಿಸು-ತ್ತಿದ್ದಾರೆ.

ಅಂಗಾಂಗ ಕಸಿ ಚಿಕಿತ್ಸೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಆರೋಗ್ಯ ಇಲಾಖೆ 70 ಆಸ್ಪತ್ರೆಗಳಿಗೆ ಮಾನ್ಯತೆ ನೀಡಿದೆ. ಅವುಗಳಲ್ಲಿ ಬೆಂಗಳೂರು ನಗರದಲ್ಲಿಯೇ 47 ಆಸ್ಪತ್ರೆಗಳಿವೆ. ದಕ್ಷಿಣ ಕನ್ನಡದಲ್ಲಿ 9, ಮೈಸೂರಿನಲ್ಲಿ 6, ಧಾರವಾಡದಲ್ಲಿ 4, ಕಲಬುರಗಿಯಲ್ಲಿ 2, ಬೆಳಗಾವಿ ಮತ್ತು ಉಡುಪಿಯಲ್ಲಿ ತಲಾ ಒಂದು ಆಸ್ಪತ್ರೆ ಅಂಗಾಂಗ ಕಸಿಗೆ ನೋಂದಣಿಯಾಗಿವೆ.

ಬೆಂಗಳೂರಿನಲ್ಲಿಯೇ ಅಧಿಕ ಆಸ್ಪತ್ರೆಗಳು ನೋಂದಣಿಯಾಗಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ರೋಗಿಗಳು ರಾಜಧಾನಿಗೆ ಕಸಿ ಶಸ್ತ್ರಚಿಕಿತ್ಸೆಗೆ ಬರುತ್ತಿದ್ದಾರೆ. ಜೀವಸಾರ್ಥಕತೆಯಡಿ ಅಂಗಾಂಗ ಕಸಿಗೆ ಹೆಸರು ನೋಂದಾಯಿಸಿಕೊಂಡವರಲ್ಲಿ ಬಹುತೇಕರು ಬೆಂಗಳೂರಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ರೋಗಿಗಳೇ ಆಗಿದ್ದಾರೆ.

ಜನರಲ್ಲಿ ಅರಿವಿನ ಕೊರತೆಯು ಅಂಗಾಂಗ ದಾನ ಪ್ರಕ್ರಿಯೆಗೆ ಹಿನ್ನಡೆಯಾಗಿದೆ. ಅಂಗಾಂಗ ವೈಫಲ್ಯಕ್ಕೆ ಒಳಗಾದವರಿಗೆ ಸಕಾಲಕ್ಕೆ ಕಸಿ ಮಾಡದಿದ್ದಲ್ಲಿ ಜೀವಕ್ಕೆ ಕುತ್ತು ಬರುವ ಸಾಧ್ಯತೆ ಇದೆ.

ಇಲಾಖೆಯಡಿ ಕಸಿಗೆ ಮಾನ್ಯತೆ ಪಡೆದ ಆಸ್ಪತ್ರೆಗಳ ವೈದ್ಯರೂ ಮಿದುಳು ನಿಷ್ಕ್ರಿಯಗೊಂಡ ವ್ಯಕ್ತಿಯ ಕುಟುಂಬಸ್ಥರಿಗೆ ಅಂಗಾಂಗ ದಾನದ ಮಹತ್ವದ ಬಗ್ಗೆ ತಿಳಿಸಿ, ಸಂಗ್ರಹಿಸಿದ ಅಂಗಾಂಗವನ್ನು ನೋಂದಾಯಿತ ರೋಗಿಗಳಿಗೆ ಕಸಿ ಮಾಡುತ್ತಿದ್ದಾರೆ. ಇಷ್ಟಾಗಿಯೂ ಅಂಗಾಂಗಗಳ ಬೇಡಿಕೆ-ಪೂರೈಕೆ ನಡುವಿನ ಅಂತರವು ಹೆಚ್ಚುತ್ತಲೇ ಇದೆ.

ಮೂತ್ರಪಿಂಡಕ್ಕೆ ಬೇಡಿಕೆ: ಜೀವಸಾರ್ಥಕತೆ ಸಂಸ್ಥೆಯ ಪ್ರಕಾರ, ಅಂಗಾಂಗ ವೈಫಲ್ಯ ಕಾರಣ ಹೆಸರು ನೋಂದಾಯಿಸಿದವರಲ್ಲಿ ಅರ್ಧಕ್ಕೂ ಅಧಿಕ ಮಂದಿ ಮೂತ್ರಪಿಂಡ ವೈಫಲ್ಯ ಸಮಸ್ಯೆ ಎದುರಿಸುತ್ತಿದ್ದವರಾಗಿದ್ದಾರೆ. ಬದಲಾದ ಜೀವನ ಶೈಲಿ ಸೇರಿ ವಿವಿಧ ಕಾರಣಗಳಿಂದ ಅಂಗಾಂಗ ವೈಫಲ್ಯಕ್ಕೆ ಒಳಪಡುವವರ ಸಂಖ್ಯೆ ಹೆಚ್ಚುತ್ತಿದ್ದು, ಯಕೃತ್ತು, ಹೃದಯ, ಶ್ವಾಸಕೋಶ ಕಸಿಗೂ ಅಧಿಕ ಸಂಖ್ಯೆಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ.

‘ಮಾನವ ಅಂಗಾಂಗ ದಾನ ಕಸಿ ಕಾಯ್ದೆ 1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿಯ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಇದು ಕಾನೂನು ಬದ್ಧವಾಗಿದೆ. ಮಿದುಳು ನಿಷ್ಕ್ರಿಯಗೊಂಡ ಬಳಿಕ ಕುಟುಂಬದ ಸದಸ್ಯರ ಒಪ್ಪಿಗೆ ಮೇರೆಗೆ ಅಂಗಾಂಗವನ್ನು ದಾನವಾಗಿ ಪಡೆಯಲಾಗುತ್ತದೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.



ಅಂಗಾಂಗಗಳಿಗೆ ಬೇಡಿಕೆ ಎಲ್ಲಿ, ಎಷ್ಟು?

ಜಿಲ್ಲೆ	ಕಾಯುತ್ತಿರುವವರು
ಬೆಂಗಳೂರು	4,364
ಮೈಸೂರು	466
ಧಾರವಾಡ	380
ದಕ್ಷಿಣ ಕನ್ನಡ	317
ಉಡುಪಿ	158

68 ಮಂದಿ ಅಂಗಾಂಗ ದಾನ

ಜೀವಸಾರ್ಥಕತೆ ಪ್ರಕಾರ, ರಾಜ್ಯದಲ್ಲಿ ಈ ವರ್ಷ 68 ಮಂದಿ ಅಂಗಾಂಗ ದಾನ ಮಾಡಿದ್ದಾರೆ. ಇವರಿಂದ 116 ಮೂತ್ರಪಿಂಡ ಸೇರಿ 196 ಅಂಗಾಂಗಗಳನ್ನು ಸ್ವೀಕರಿಸಲಾಗಿದೆ. ಚರ್ಮ, ಹೃದಯದ ಕವಾಟ ಸೇರಿ 145 ಅಂಗಾಂಶಗಳನ್ನು ಸಂಗ್ರಹಿಸಲಾಗಿದೆ. ಐದು ವರ್ಷಗಳಲ್ಲಿ 629 ಮಂದಿ ದಾನ ಮಾಡಿದ್ದಾರೆ.

ಸಂಸ್ಥೆಯ ಪ್ರಕಾರ, ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಶ್ವಾಸಕೋಶ, ಯಕೃತ್ತು, ಸಣ್ಣ ಕರುಳು ಹಾಗೂ ಮೇದೋಜೀರಕ ಗ್ರಂಥಿ ದಾನದ ಮೂಲಕ ಎಂಟು ಜೀವಗಳಿಗೆ, ಹೃದಯದ ಕವಾಟ, ಚರ್ಮ, ಕಣ್ಣು ಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ ಹಲವು ಮಂದಿಗೆ ನೆರವಾಗಬಹುದಾಗಿದೆ.

‘ಜಿಲ್ಲಾಸ್ಪತ್ರೆಗಳಲ್ಲಿ ಕೇಂದ್ರ ಪ್ರಾರಂಭ’



ದಿನೇಶ್ ಗುಂಡೂರಾವ್

‘ಮಿದುಳು ನಿಷ್ಕ್ರಿಯಗೊಂಡು ಮೃತಪಟ್ಟವರಿಂದ ಅಂಗಾಂಗಗಳನ್ನು ಪಡೆಯುವ ಪ್ರಯತ್ನಗಳು ಸರ್ಕಾರಿ ಜಿಲ್ಲಾ ಆಸ್ಪತ್ರೆ ಹಾಗೂ ವೈದ್ಯಕೀಯ ಕಾಲೇಜುಗಳಲ್ಲಿ ಹೆಚ್ಚಾಗಬೇಕು. ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಅಂಗಾಂಗ ಮರುಪಡೆಯುವಿಕೆ ಕೇಂದ್ರ ಪ್ರಾರಂಭಿಸಲು ಕ್ರಮವಹಿಸಲಾಗಿದೆ. ಕಳೆದ ವಾರ ಜೀವಸಾರ್ಥಕತೆ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಅಂಗಾಂಗ ದಾನ ಹೆಚ್ಚಿಸುವ ಬಗ್ಗೆ ಚರ್ಚಿಸಲಾಗಿದೆ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿ 2 ನಿಮಿಷ

ಸ್ವಯಂ ಪ್ರತಿಷ್ಠೆಯ ಭಾಷಣ ಮೋದಿ ಮಾಡಬಾರದು– ಖರ್ಗೆ

ಬೆಂಗಳೂರು: ‘ದೇಶದ ವಿಚಾರದಲ್ಲಿ ಒಗ್ಗಟ್ಟು ಇರಬೇಕು. ನಾವು ಎಲ್ಲಿ ಮಾತನಾಡಬೇಕು ಎನ್ನುವುದು ಗೊತ್ತಿರಬೇಕು. ದೇಶದ ಭದ್ರತೆ ವಿಚಾರದಲ್ಲಿ ಎಲ್ಲ ನಾಯಕರು ಬಾಯಿ ಮುಚ್ಚಿಕೊಂಡು ಇರಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ನಮ್ಮ ವಿರೋಧಿಗಳನ್ನು ಓಡಿಸುವ ಕೆಲಸ ಮಾಡಬೇಕು. ಏನು ಘಟನೆ ಆಗಿದೆಯೊ ಆ ಬಗ್ಗೆ ತಿಳಿದುಕೊಂಡು ಮಾತನಾಡುವುದು ಒಳ್ಳೆಯದು’ ಎಂದರು.

‘ಭಾರತದ ವಾದವನ್ನು ಜಗತ್ತಿನ ಮುಂದೆ ಮಂಡಿಸಲು ತೆರಳಿರುವ ವಿವಿಧ ಪಕ್ಷಗಳ ಸದಸ್ಯರನ್ನು ಒಳಗೊಂಡ ಸಂಸದೀಯ ನಿಯೋಗದ ವರದಿಗಳು ಹೊರಬರುವ ಮೊದಲು, ನರೇಂದ್ರ ಮೋದಿಯವರು ಚುನಾವಣಾ ಭಾಷಣ ಮಾಡಬಾರದು. ನಾನು ಅದನ್ನು ಮಾಡಿದ್ದೇನೆ, ಇದನ್ನು ಮಾಡಿದ್ದೇನೆಂದು ಅವರು ಸ್ವಯಂ ಘೋಷಣೆ ಮಾಡಬಾರದು’ ಎಂದು ಖರ್ಗೆ ಅಭಿಪ್ರಾಯಪಟ್ಟರು.

‘ಇಡೀ ದೇಶ ನಮ್ಮ ಸೇನೆಯ ಹಿಂದೆ ಇದೆ. ಸೇನೆಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇನೆ ಎಂದು ಮೋದಿ ಈ ಹಿಂದೆ ಹೇಳಿದ್ದರು. ಮತ್ತೆ ಈಗ ಯಾಕೆ ಮಾತನಾಡುತ್ತಿ-ದ್ದಾರೆ? ಅವರು ಸ್ವಯಂ ಪ್ರತಿಷ್ಠೆಯ ಭಾಷಣ ಮಾಡಬಾರದು’ ಎಂದರು. ‘ಸಂಸತ್ ಅಧಿವೇಶನ ಕರೆದು ಚರ್ಚೆ ಮಾಡೋಣವೆಂದು ಹೇಳಿ ದ್ದೇವೆ. ಪಾಕಿಸ್ತಾನ ಕೂಡ ಸಂಸತ್ ಅಧಿವೇಶನ ಕರೆದು ಚರ್ಚೆ ನಡೆ ಸಿದೆ. ನಾವು ಯಾರೂ ದೇಶದ ವಿರುದ್ಧ ಮಾತನಾಡುವುದಿಲ್ಲ’ ಎಂದು ತಿಳಿಸಿದರು.



ಸರ್ಕಾರಿ ಆಸ್ಪತ್ರೆ: ದೂರು ಸಲ್ಲಿಕೆಗೆ ಅವಕಾಶ

ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳು ಅಥವಾ ಆರೋಗ್ಯ ಸೇವೆಗಳ ಬಗ್ಗೆ ದೂರುಗಳಿದ್ದರೆ ಅವುಗಳನ್ನು ವಾಟ್ಸ್‌ಆ್ಯಪ್ ಮೂಲಕ ಕಳಿಸುವ ಅವಕಾಶವನ್ನು ಆರೋಗ್ಯ ಇಲಾಖೆ ಕಲ್ಪಿಸಿದೆ.

9449843001 ಈ ಮೊಬೈಲ್ ಸಂಖ್ಯೆಗೆ ದೂರುಗಳ ಜತೆಗೆ ಸಲಹೆಗಳನ್ನು ರೋಗಿಗಳು, ಅವರ ಸಹಾಯಕರು ಹಾಗೂ ಸಾರ್ವಜನಿಕರು ಕಳುಹಿಸಬಹುದಾಗಿದೆ. ಅಗತ್ಯವಿದ್ದರೆ ದೂರುಗಳಿಗೆ ಸಂಬಂಧಿಸಿದ ಫೋಟೊ ಹಾಗೂ ವಿಡಿಯೊಗಳನ್ನೂ ಕಳುಹಿಸುವಂತೆ ಇಲಾಖೆ ತಿಳಿಸಿದೆ.

ದೂರುಗಳನ್ನು ಇಲಾಖೆಯ ಪ್ರಧಾನ ಕಾರ್ಯದರ್ಶಿಯವರೇ ಪರಿಶೀಲಿಸಿ, ಕ್ರಮ ಕೈಗೊಳ್ಳುತ್ತಾರೆ. ಮಾಹಿತಿದಾರರ ವಿವರವನ್ನು ಗೋಪ್ಯವಾಗಿ ಇಡಲಾಗುವುದು. ವಾಟ್ಸ್‌ಆ್ಯಪ್ ಸಂಖ್ಯೆಯ ಮೂಲಕ ಸಂದೇಶಗಳನ್ನು ಮಾತ್ರ ಸ್ವೀಕರಿಸಲಾಗುವುದು. ಕರೆಗಳಿಗೆ ಅವಕಾಶವಿಲ್ಲ ಎಂದೂ ಇಲಾಖೆ ಹೇಳಿದೆ.

ಸಂಕ್ಷಿಪ್ತ ಸುದ್ದಿ

‘ನಟ ಕಮಲ್ ಹಾಸನ್ ಕ್ಷಮೆಯಾಚಿಸಲಿ’



ರಚಿತಾ ರಾಮ್

ಹುಬ್ಬಳ್ಳಿ:‘ಕನ್ನಡದ ಬಗ್ಗೆ ತಮಿಳು ನಟ ಕಮಲ್ ಹಾಸನ್ ಹೇಳಿಕೆ ಖಂಡನೀಯ. ಕೂಡಲೇ ಅವರು ಕ್ಷಮೆಯಾಚಿಸಬೇಕು’ ಎಂದು ನಟಿ ರಚಿತಾ ರಾಮ್ ಹೇಳಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಿನಿಮಾ ಮೂಲಕ ಅಪಾರ ಅಭಿಮಾನಿ-ಗಳನ್ನು ಹೊಂದಿರುವ ಅವರು, ಕನ್ನಡದ ಬಗ್ಗೆ ಈ ರೀತಿ ಮಾತನಾಡಿರುವುದು ಸಮಂಜಸವಲ್ಲ’ ಎಂದರು.

‘ಕ್ಷಮೆ ಕೇಳದಿದ್ದರೆ ಅವರ ನಟನೆಯ ‘ಥಗ್ ಲೈಫ್’ ಸಿನಿಮಾವನ್ನು ರಾಜ್ಯದಲ್ಲಿ ಬ್ಯಾನ್ ಮಾಡಬೇಕೇ? ಬೇಡವೇ? ಎಂಬ ಬಗ್ಗೆ ಚಿತ್ರರಂಗದ ಹಿರಿಯರು ನಿರ್ಧರಿಸುತ್ತಾರೆ. ಈ ಬಗ್ಗೆ ನಾನು ಪ್ರತಿಕ್ರಿಯಿಸಲ್ಲ’ ಎಂದು ರಚಿತಾ ಹೇಳಿದರು.

ಉಸ್ತುವಾರಿ ಬದಲಿಸಲು ಕೇಳಿಲ್ಲ: ಸಚಿವ ದಿನೇಶ್

ಬೆಂಗಳೂರು: ‘ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸ್ಥಾನದಿಂದ ಬದಲಿಸುವಂತೆ ನಾನು ಕೇಳಿಲ್ಲ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ‘ಮಂಗಳೂರಿಗೆ ಭೇಟಿ ನೀಡಿ ಸಾಕಷ್ಟು ಕಾನೂನು ಕ್ರಮಗಳನ್ನು ಕೈಗೊಳ್ಳಲು ಸೂಚನೆ ನೀಡಿದ್ದೇನೆ. ಉಸ್ತುವಾರಿ ಬದಲಾವಣೆ ವಿಷಯ ಎಲ್ಲಿಂದ ಬಂತೊ ಗೊತ್ತಿಲ್ಲ’ ಎಂದರು.

‘ಜವಾಬ್ದಾರಿ ವಹಿಸಿಕೊಂಡ ಬಳಿಕ ಎಲ್ಲ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಉಸ್ತುವಾರಿ ಬದಲಾವಣೆಗೆ ಸಂಬಂಧಿಸಿದಂತೆ ಯಾರೊ ಒಬ್ಬರು, ಇಬ್ಬರು ಹೇಳಿಕೆ ಕೊಟ್ಟಿರಬಹುದು. ವಿನಾ ಕಾರಣ ರಾಜಕಾರಣ ಮಾಡಬಾರದು’ ಎಂದು ಹೇಳಿದರು.

‘ಶೇಕಡ 95ರಷ್ಟು ಜನರಿಗೆ ಗಲಭೆ ಬೇಕಾಗಿಲ್ಲ. ಕೆಲವೇ ಕೆಲವು ಜನ ಮತ್ತು ಸಂಘಟನೆಗಳು ಇದಕ್ಕೆ ಪ್ರಚೋದನೆ ನೀಡುತ್ತಿವೆ. ಹಿಂದೂ, ಮುಸ್ಲಿಂ ಎಂದು ನಾನು ಹೇಳುವುದಿಲ್ಲ. ಕೋಮುದ್ವೇಷ ನಿಗ್ರಹಕ್ಕೆ ರಚಿಸಿರುವ ವಿಶೇಷ ಪಡೆ ಸದ್ಯದಲ್ಲೇ ಕೆಲಸ ಆರಂಭಿಸಲಿದೆ’ ಎಂದರು.

ಒಳಜಗಳ: ಕೆಪಿಎಸ್‌ಸಿಗೆ ಗ್ರಹಣ

ಒಂದನೇ ಪುಟದಿಂದ...

ಮೂವರು ಸದಸ್ಯರ ಟಿಪ್ಪಣಿಯನ್ನು ಪ್ರಸ್ತಾಪಿಸಿ, ವಿಜಯಕುಮಾರ್ ಅವರಿಗೆ ಏಪ್ರಿಲ್ 3ರಂದು ‘ಜ್ಞಾಪನ ಪತ್ರ’ ನೀಡಿದ ಅಧ್ಯಕ್ಷರು, ‘2024ರ ಜೂನ್ 27ರಂದು ಎಲ್ಲ ಸದಸ್ಯರನ್ನು ಉಲ್ಲೇಖಿಸಿ ತಾನು ಬರೆದಿದ್ದ ಪತ್ರವನ್ನು ಲಗತ್ತಿಸಿ-ದ್ದಾರೆ. ಅಲ್ಲದೆ, ‘ಬಹುತೇಕ ದಿನಗಳಲ್ಲಿ ಕೇಂದ್ರ ಸ್ಥಾನದಲ್ಲಿ ಲಭ್ಯರಾಗದೆ ಆಯ್ಕೆ ಪಟ್ಟಿ ಅನುಮೋದನೆಗೆ ಸಂಬಂಧಿಸಿದಂತೆ ಕಡತಗಳಿಗೆ ನೀವು ಸಹಿ ಮಾಡುವುದೇ ಇಲ್ಲ. ನೀವು ಸದಸ್ಯರಾಗಿ ನೇಮಕಗೊಂಡ ದಿನದಿಂದ ಆಯೋಗದ ಒಟ್ಟು 189 ಸಭೆಗಳು ನಡೆದಿದ್ದು, 57 ಸಭೆಗಳಿಗೆ ಮಾತ್ರ ಹಾಜರಾಗಿದ್ದೀರಿ. ಸಭೆಗೆ ಗೈರಾಗುವ ಪೂರ್ವದಲ್ಲಿ ಲಿಖಿತವಾಗಿ ಟಿಪ್ಪಣಿ ಸಲ್ಲಿಸಿದ್ದರೆ, ಕಚೇರಿಗೆ ಹಾಜರಾಗದ ದಿನಗಳಿಗೆ ರಜೆ, ಅನುಮತಿ ಪಡೆದಿದ್ದರೆ ಆ ಬಗ್ಗೆ ಮಾಹಿತಿ ನೀಡಬೇಕು’ ಎಂದೂ ಆ ಪತ್ರದಲ್ಲಿ ಸೂಚಿಸಿದ್ದಾರೆ. ಅಧ್ಯಕ್ಷರ ಈ ನಡೆಗೆ ಕೆರಳಿರುವ ವಿಜಯಕುಮಾರ್, ಈ ಜ್ಞಾಪನ ಪತ್ರವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದಾರೆ. ‘ಅಧ್ಯಕ್ಷರು ಆಯೋಗದ ಸಭೆಗಳನ್ನೇ ಕರೆಯುವುದಿಲ್ಲ. ಅದರ ಬದಲು ಈ ಜ್ಞಾಪನ ಪತ್ರ ನೀಡಿದ್ದಾರೆ’ ಎಂದು ದೂರುದಾರ ವಿಜಯಕುಮಾರ್ ಸಹಿತ ಎಲ್ಲ ಸದಸ್ಯರು ದೂರಿದ್ದಾರೆ. ಅಲ್ಲದೆ, ‘ದೂರುದಾರರಿಗೆ ಈ ರೀತಿ ಜ್ಞಾಪನ ಪತ್ರ ನೀಡಲು ಅಧ್ಯಕ್ಷರಿಗೆ ಅಧಿಕಾರವೇ ಇಲ್ಲ’ ಎಂದು ವಿಜಯಕುಮಾರ್ ಪರ ವಕೀಲರು ಹೈಕೋರ್ಟ್‌ನಲ್ಲಿ ವಾದ ಮಂಡಿಸಿದ್ದಾರೆ.

ಬಿಳಿಗಿರಿ ರಂಗನಬೆಟ್ಟದಲ್ಲಿ ಪ್ರಾಯೋಗಿಕ ಕಾರ್ಯಕ್ರಮ • ‘ನನ್ನ ಗುರುತು’ ಅಭಿಯಾನ ಅನುಷ್ಠಾನ

ಮನೆ ಬಾಗಿಲಿಗೆ ಬಂತು ಮೂಲ ದಾಖಲೆ

• ಬಾಲಚಂದ್ರ ಎಚ್.

ಚಾಮರಾಜನಗರ:ಮೂಲ ದಾಖಲೆ-ಗಳಿಲ್ಲದೆ ಸರ್ಕಾರದ ಸವಲತ್ತುಗಳಿಂದ ವಂಚಿತರಾಗಿದ್ದ ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರ ಮೊಗದಲ್ಲಿ ರಾಜ್ಯ ಸರ್ಕಾರದ ಪ್ರಾಯೋಗಿಕ ಯೋಜನೆ ‘ನನ್ನ ಗುರುತು’ ಅಭಿಯಾನವು ಮಂದಹಾಸ ಮೂಡಿಸಿದೆ.

ಬಡತನ, ಅನಕ್ಷರತೆ ಹಾಗೂ ಇತರೆ ಸಾಮಾಜಿಕ ಕಾರಣಗಳಿಂದ ಮೂಲ ದಾಖಲೆಗಳನ್ನು ಪಡೆಯಲಾಗದೆ ಅಸಹಾಯಕರಾಗಿದ್ದ ಆದಿವಾಸಿಗಳ ಮನೆಯ ಬಾಗಿಲಿಗೆ ಅಭಿಯಾನದಡಿ ಮೂಲ ದಾಖಲೆಗಳ ಸಹಿತ ಸರ್ಕಾರದ ಸೌಲಭ್ಯಗಳು ತಲುಪುತ್ತಿವೆ.

ಬಿಳಿಗಿರಿರಂಗನ ಬೆಟ್ಟ ಪಂಚಾಯಿತಿ ವ್ಯಾಪ್ತಿಯ 9 ಪೋಡುಗಳಲ್ಲಿ 624 ಪರಿಶಿಷ್ಟ ಕುಟುಂಬಗಳಿದ್ದು, 1,814 ಜನಸಂಖ್ಯೆ ಇದೆ. ಅವರ ಪೈಕಿ 53 ಮಂದಿಯ ಬಳಿ ಆಧಾರ್ ಕಾರ್ಡ್, ಪಡಿತರ ಚೀಟಿ, ಬ್ಯಾಂಕ್ ಖಾತೆ, ಚುನಾವಣಾ ಗುರುತಿನ ಚೀಟಿ ಸಹಿತ ಯಾವುದೇ ದಾಖಲೆಗಳಿರಲಿಲ್ಲ.

ಅಭಿಯಾನದಡಿ 22 ಮಂದಿಗೆ ಜನನ ಪ್ರಮಾಣ ಪತ್ರ ವಿತರಿಸಿ ಅಗತ್ಯ ದಾಖಲೆಗಳನ್ನು ನೀಡಲಾಗುತ್ತಿದೆ. ಉಳಿದ 31 ಮಂದಿಯ ಶಾಲಾ ದಾಖಲಾತಿಗಳನ್ನು ಸಂಗ್ರಹಿಸಿ ನ್ಯಾಯಾಲಯಕ್ಕೆ ಸಲ್ಲಿಸಿ ಜನನ ಪ್ರಮಾಣ ಪತ್ರ ಪಡೆಯುವ ಕಾರ್ಯ ಪ್ರಗತಿಯಲ್ಲಿದೆ.

‘ಅಭಿಯಾನದಡಿ ಗುರುತಿಸಿರುವ 13 ಸೇವೆಗಳ ಪೈಕಿ ಯುಡಿಐಡಿ ಕಾರ್ಡ್, ಭಾಗ್ಯಲಕ್ಷ್ಮೀ, ನರೇಗಾ ಉದ್ಯೋಗ ಚೀಟಿಗಳ ವಿತರಣೆಯಲ್ಲಿ ಶೇ 100 ಗುರಿ ಸಾಧಿಸಿದ್ದು, ಉಳಿಕೆ ಸೇವೆಗಳನ್ನು ತಲುಪಿಸುವ ಕಾರ್ಯ ಪ್ರಗತಿಯಲ್ಲಿದೆ’ ಎನ್ನುತ್ತಾರೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಮೋನಾ ರೋತ್.

ಏನಿದು ‘ನನ್ನ ಗುರುತು’: ‘ಪರಿಶಿಷ್ಟರ ಶ್ರೇಯೋಭಿವೃದ್ಧಿಗೆ ಜಾರಿಗೊಳಿಸಿರುವ ಕಾರ್ಯಕ್ರಮಗಳು ಅರ್ಹರಿಗೆ ಮುಟ್ಟಬೇಕು, ದಾಖಲಾತಿ ಇಲ್ಲವೆಂಬ ಕಾರಣಕ್ಕೆ ಸೌಲಭ್ಯ ವಂಚಿತರಾಗಬಾರದು’ ಎಂಬ ಉದ್ದೇಶದಿಂದ ಸರ್ಕಾರ ‘ನನ್ನ ಗುರುತು’ ಅಭಿಯಾನಕ್ಕೆ ಚಾಲನೆ ನೀಡಿದೆ.

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯು ಸಮಾಜ ಕಲ್ಯಾಣ ಇಲಾಖೆ ಸಹಭಾ-ಗಿತ್ವದಲ್ಲಿ ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕಿನ ಹುಸ್ಕೂರು ಹಾಗೂ ಬಿಳಿಗಿರಿ ರಂಗನಬೆಟ್ಟ ಪಂಚಾಯಿತಿಯಲ್ಲಿ ಯೋಜನೆ ಪ್ರಾಯೋಗಿಕವಾಗಿ ಜಾರಿಯಾಗಿದೆ. ಎರಡೂ ಪಂಚಾಯಿತಿ-ಗಳಲ್ಲಿ ದಾಖಲೆಗಳಿಲ್ಲದವರನ್ನು ಗುರುತಿಸಿ ದಾಖಲೆ ವಿತರಿಸಲಾಗುತ್ತಿದೆ.

ಎರಡೂ ಜಿಲ್ಲೆಗಳಲ್ಲಿ ಅಭಿಯಾನ ಯಶಸ್ವಿಯಾದರೆ ಕಲ್ಯಾಣ ಕರ್ನಾಟಕದ ಎಲ್ಲ ಗ್ರಾಮ ಪಂಚಾಯಿತಿಗಳಿಗೆ ವಿಸ್ತರಿಸುವುದು ಸರ್ಕಾರದ ಉದ್ದೇಶ. ಕಾರ್ಯಕ್ರಮದ ಅನುಷ್ಠಾನ ಜವಾ-ಬ್ದಾರಿಯನ್ನು ತಳಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಪಿಡಿಒಗಳಿಗೆ ವಹಿಸಿ, ಉಸ್ತುವಾರಿಯನ್ನು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ನೀಡಲಾಗಿದೆ.

‘ಹೊಸ ದಾಖಲಾತಿಗಳ ವಿತರಣೆಯ ಜೊತೆಗೆ ಹಳೆಯ ದಾಖಲಾತಿಗಳಲ್ಲಿ ಹೆಸರು ತಿದ್ದುಪಡಿ, ನವೀಕರಣ ಮಾಡಲಾಗುತ್ತಿದೆ. ಸೃಜಿಸಲಾದ ದಾಖಲೆಗಳನ್ನು ಡಿಜಿಟಲ್ ರೂಪದಲ್ಲಿ ಸಂರಕ್ಷಿಸಿಡಲು ಹಾಗೂ ಏಕೀಕೃತ ವ್ಯವಸ್ಥೆಯಲ್ಲಿ ಲಭ್ಯವಾಗುವಂತೆ ಡಿಜಿ ಲಾಕರ್ ಆ್ಯಪ್‌ಗೆ ಅಪ್‌ಲೋಡ್ ಮಾಡಲಾಗುತ್ತಿದೆ’ ಎನ್ನುತ್ತಾರೆ ಅಭಿಯಾನದ ಅನುಷ್ಠಾನದ ಹೊಣೆ ಹೊತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಶಶಿಕಲಾ.

ಮುಖ್ಯಾಂಶಗಳು

- ರಾಜ್ಯದ ಎರಡು ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಅನುಷ್ಠಾನ
- ಅಭಿಯಾನ ಯಶಸ್ವಿಯಾದರೆ ಕಲ್ಯಾಣ ಕರ್ನಾಟಕಕ್ಕೆ ವಿಸ್ತರಣೆ

‘ನನ್ನ ಗುರುತು’ ಸರ್ಕಾರದ ಮಹತ್ವಾಕಾಂಕ್ಷಿ ಅಭಿಯಾನವಾಗಿದ್ದು, ಜಿಲ್ಲೆಯಲ್ಲಿ ಪರಿಣಾಮಕಾರಿ ಅನುಷ್ಠಾನಕ್ಕೆ ಕ್ರಮ ವಹಿಸಲಾಗಿದೆ

ಮೋನಾ ರೋತ್ ಜಿಲ್ಲಾ ಪಂಚಾಯಿತಿ ಸಿಇಒ

ದಾಖಲಾತಿ ಮಾಡಿಸಿಕೊಳ್ಳಲು ಸರ್ಕಾರದ ಕಚೇರಿಗಳಿಗೆ ಅಲೆದು ಸಾಕಾಗಿತ್ತು. ‘ನನ್ನ ಗುರುತು’ ಅಭಿಯಾನದಡಿ ಮನೆ ಬಾಗಿಲಿಗೆ ಸರ್ಕಾರ ದಾಖಲೆ ವಿತರಿಸಿದ್ದು ಸಂತಸವಾಗಿದೆ

ಬಸವರಾಜ್, ಫಲಾನುಭವಿ

ಅಭಿಯಾನದ ಕಾರ್ಯವಿಧಾನ

ಅಭಿಯಾನದಡಿ ಮೊದಲಿಗೆ ಬಿ.ಆರ್. ಹಿಲ್ಸ್ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಶಿಷ್ಟ ಕುಟುಂಬಗಳ ಸಮೀಕ್ಷೆ ನಡೆಸಲಾಗಿದೆ. ದಾಖಲೆಗಳಿಲ್ಲದವರ ಮಾಹಿತಿ ಕಲೆ ಹಾಕಿ, ಕಂದಾಯ, ಆರೋಗ್ಯ, ಆಹಾರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ, ಕಾರ್ಮಿಕ, ಯುವ ಸಬಲೀಕರಣ ಇಲಾಖೆ ಅಧಿಕಾರಿಗಳ ಸಹಕಾರದೊಂದಿಗೆ ಗ್ರಾಮಗಳಲ್ಲಿ ವಿಶೇಷ ಶಿಬಿರ ಆಯೋಜಿಸಿ ದಾಖಲೆಗಳನ್ನು ವಿತರಿಸಲಾಗುತ್ತಿದೆ.

‘ಸವಾಲುಮಧ್ಯೆ ಸಾಧನೆಯ ತೃಪ್ತಿ’

ಬಿಆರ್ ಹಿಲ್ಸ್ ಪಂಚಾಯಿತಿಯಲ್ಲಿ ಆದಿವಾಸಿಗಳು ಹೆಚ್ಚಾಗಿ ಕಾಫಿ ತೋಟಗಳಲ್ಲಿ ಕೂಲಿ ಮಾಡುವುದರಿಂದ ಹಗಲಿನಲ್ಲಿ ಸಂಪರ್ಕ ಸವಾಲಾಗಿತ್ತು. ಕೂಲಿ ಮುಗಿಸಿ ಸಂಜೆ ಮನೆಗೆ ಬಂದ ಮೇಲೆ ಭೇಟಿಯಾಗಬೇಕಿತ್ತು. ಕಾಡಂಚಿನಲ್ಲಿ ಚದುರಿದಂತೆ ಮನೆಗಳು ಇರುವುದರಿಂದ ಹಾಗೂ ಕಾಡು ಪ್ರಾಣಿಗಳ ದಾಳಿ ಭೀತಿಯಿಂದ ಫಲಾನುಭವಿಗಳ ಸಂಪರ್ಕ ಕಷ್ಟವಾಗಿತ್ತು. ಸವಾಲುಗಳ ಮಧ್ಯೆಯೂ ‘ನನ್ನ ಗುರುತು’ ಅಭಿಯಾನ ಯಶಸ್ವಿಯಾಗಿ ನಡೆಯುತ್ತಿದ್ದು ನೂರಾರು ಮಂದಿಗೆ ದಾಖಲೆಗಳನ್ನು ವಿತರಿಸಲಾಗಿದೆ ಎನ್ನುತ್ತಾರೆ ಬಿ.ಆರ್ ಹಿಲ್ಸ್ ಪಿಡಿಒ ಶಶಿಕಲಾ.

ಅಭಿಯಾನದಡಿ ಲಭ್ಯ ಸೇವೆಗಳು

- ಆಧಾರ್ ಕಾರ್ಡ್
- ಜನನ–ಮರಣ, ಜಾತಿ, ಆದಾಯ ಪ್ರಮಾಣ ಪತ್ರ
- ಪಡಿತರ ಚೀಟಿ, ಗುರುತಿನ ಚೀಟಿ
- ಬ್ಯಾಂಕ್ ಖಾತೆ
- ಪಿಂಚಣಿ
- ಆಯುಷ್ಮಾನ್ ಭಾರತ್ ಕಾರ್ಡ್
- ಪಿಎಂಜೆಜೆಬಿವೈ, ಪಿಎಂಎಸ್‌ಬಿವೈ ವಿಮಾ ಸೌಲಭ್ಯ
- ಇ ಶ್ರಮ ಚೀಟಿ
- ಯುಡಿಐಡಿ ಕಾರ್ಡ್
- ಭಾಗ್ಯಲಕ್ಷ್ಮೀ ಯೋಜನೆ
- ನರೇಗಾ ಚೀಟಿ

‘ಗೃಹ ಆರೋಗ್ಯ’ ವಿಸ್ತರಣೆ ಇಂದು

ಬೆಂಗಳೂರು: ಆರೋಗ್ಯ ಇಲಾಖೆ ರೂಪಿಸಿರುವ ‘ಗೃಹ ಆರೋಗ್ಯ’ ಯೋಜನೆಯು ಸೋಮವಾರ ರಾಜ್ಯದಾದ್ಯಂತ ವಿಸ್ತರಣೆಯಾಗಲಿದೆ.

ಮನೆ ಬಾಗಿಲಲ್ಲಿಯೇ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಿ, ಔಷಧ ವಿತರಿಸುವ ಈ ಯೋಜನೆಯನ್ನು ಪ್ರಾಯೋಗಿಕವಾಗಿ ಕೋಲಾರದಲ್ಲಿ 2024ರ ಅಕ್ಟೋಬರ್‌ನಲ್ಲಿ ಪ್ರಾರಂಭಿಸಲಾಗಿತ್ತು. ಈಗ ಯೋಜನೆ ವಿಸ್ತರಿಸಲಾಗುತ್ತಿದ್ದು, ಸೋಮವಾರ ಬೆಳಿಗ್ಗೆ 11 ಗಂಟೆಗೆ ಇಲಾಖೆಯು ವಿಕಾಸಸೌಧದಲ್ಲಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣಕ್ಕಾಗಿ ಈ ಯೋಜನೆಯನ್ನು ವಿಸ್ತ-ರಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ 30 ವರ್ಷಗಳು ಮೇಲ್ಪಟ್ಟವರಿಗೆ 14 ಸಾಂಕ್ರಾಮಿಕವಲ್ಲದ ರೋಗಗಳ ಪತ್ತೆಗೆ ತಪಾಸಣೆ ಮಾಡಲಾಗುತ್ತದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಔಷಧ ಒದಗಿಸುವಿಕೆಯಿಂದ ರೋಗಗಳ ಅಡ್ಡ ಪರಿಣಾಮ ಹಾಗೂ ಅಕಾಲಿಕ ಮರಣ ತಡೆಯಲು ಸಾಧ್ಯ ಎಂದು ಇಲಾಖೆ ತಿಳಿಸಿದೆ.



ಯೋಗ ಧನುಷ್...

ಮೈಸೂರಿನ ಲಲಿತಮಹಲ್ ಹೋಟೆಲ್ ಆವರಣದಲ್ಲಿ ಆಯುಷ್ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ವಿವಿಧ ಸಂಸ್ಥೆಗಳ ಸಹಯೋಗದಲ್ಲಿ 11ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಭಾನುವಾರ ನಡೆದ ‘ಯೋಗ ಧನುಷ್’ ಕಾರ್ಯಕ್ರಮದ ಪೂರ್ವಾಭ್ಯಾಸದಲ್ಲಿ ಸಾರ್ವಜನಿಕರು ಪಾಲ್ಗೊಂಡರು ಚಿತ್ರ: ಅನೂಪ್‌ರಾಘ ಟಿ.

ಟ್ಯಾಂಕರ್ ಡಿಕ್ಕಿ: ಮೂವರು ಸಾವು

ಎಂ.ಕೆ.ಹುಬ್ಬಳ್ಳಿ (ಬೆಳಗಾವಿ ಜಿಲ್ಲೆ): ಸಮೀಪದ ದೇವರಶೀಗಿಹಳ್ಳಿ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಟಿಪ್ಪರ್‌ಗೆ ಟ್ಯಾಂಕರ್ ಡಿಕ್ಕಿ ಹೊಡೆದು ಮೂವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆರು ಮಂದಿ ಗಾಯಗೊಂಡಿದ್ದಾರೆ.

ಕಲಬುರಗಿಯ ವಡ್ಡರ ಗಲ್ಲಿಯ ರಾಮಚಂದ್ರ ಮಾರಗಪ್ಪ(45), ಅವರ ಪುತ್ರ ಮಹೇಶ(18), ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಶಿರೋಳದ ರಾಮಣ್ಣ(38) ಮೃತರು.

ಈ ಕಾರ್ಮಿಕರು ಹೆದ್ದಾರಿ-ಯಲ್ಲಿನ ವಿಭಜಕ ಸ್ವಚ್ಛಗೊಳಿಸಿ, ಹಿರೇಬಾಗೇವಾಡಿ ಟೋಲ್ ನಾಕಾ ಕಡೆ ಟಿಪ್ಪರ್‌ನಲ್ಲಿ ಸಾಗುತ್ತಿದ್ದರು. ಆಯಿಲ್ ಟ್ಯಾಂಕರ್ ಹಿಂದಿನಿಂದ ವೇಗವಾಗಿ ಬಂದು ಡಿಕ್ಕಿ ಹೊಡೆದಾಗ ದುರಂತ ಸಂಭವಿಸಿದೆ.

ಟ್ಯಾಂಕರ್ ಚಾಲಕ ಮಂಗಳೂರು ಮೂಲದ ದಿನೇಶ ಶೆಟ್ಟಿ ಸಹ ಗಾಯಗೊಂಡಿದ್ದಾರೆ..

‘10 ಸಾವಿರ ಹೊಸ ಬೋಗಿ ಸೇರ್ಪಡೆ’

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಸಾಮಾನ್ಯ ಪ್ರಯಾಣಿಕರ ಅಗತ್ಯಗಳನ್ನು ಪೂರೈಸಲು ಹಾಗೂ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಸರಿದೂಗಿಸಲು ಭಾರತೀಯ ರೈಲ್ವೆಯು ಶೀಘ್ರವೇ 10 ಸಾವಿರ ಜನರಲ್ ಬೋಗಿಗಳನ್ನು ಪ್ರಯಾಣಿಕರ ಸೇವೆಗೆ ಸೇರ್ಪಡೆ ಮಾಡಿಕೊಳ್ಳಲಿದೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದರು.

ನಗರದಲ್ಲಿ ಭಾನುವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ‘10 ಸಾವಿರ ಹೊಸ ಜನರಲ್ ಬೋಗಿಗಳು ಸಿದ್ಧವಾಗಿವೆ. ಹಂತ–ಹಂತವಾಗಿ ಹಳೇ ಬೋಗಿಗಳನ್ನು ತೆಗೆದು ಹೊಸ ಬೋಗಿಗಳನ್ನು ಅಳವಡಿಸಲಾಗುವುದು’ ಎಂದು ಹೇಳಿದರು.

‘ರಾಜ್ಯದಲ್ಲಿ 13 ಜಿಲ್ಲೆಗಳಲ್ಲಿ ವಂದೇ ಭಾರತ್ ರೈಲುಗಳು ಓಡುತ್ತಿವೆ. ಮಂಗಳೂರು–ಬೆಂಗಳೂರು, ಬೆಳಗಾವಿ–ಬೆಂಗಳೂರು ನಡುವೆ ವಂದೇ ಭಾರತ್ ರೈಲು ಓಡಿಸುವಂತೆ ಬೇಡಿಕೆ ಬರುತ್ತಿದ್ದು, ಶೀಘ್ರವೇ ಆ ರೈಲುಗಳಿಗೆ ಚಾಲನೆ ನೀಡಲಾಗುವುದು’ ಎಂದು ಹೇಳಿದರು.

‘ವಿದ್ಯುದ್ದೀಕರಣದಿಂದ ರೈಲ್ವೆಗೆ ಪ್ರತಿ ವರ್ಷ ಸುಮಾರು ₹ 18 ಸಾವಿರ ಕೋಟಿ ಉಳಿತಾಯ ಆಗುತ್ತಿದೆ. ಹೀಗಾಗಿ, ಪ್ರತಿಯೊಂದು ಹೊಸ ರೈಲು ಹಳಿಯನ್ನು ವಿದ್ಯುದ್ದೀಕರಣದ ಮೂಲಕ ಆರಂಭಿಸು-ತ್ತಿದ್ದೇವೆ’ ಎಂದರು.

‘ಸಿದ್ದರಾಮಯ್ಯ ಹಳಿ ತಪ್ಪಿದ ರೈಲಾಗಿದ್ದಾರೆ’



ವಿ. ಸೋಮಣ್ಣ

ಕಲಬುರಗಿ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಳ್ಳಿ ತಪ್ಪಿದ ರೈಲಿನಂತೆ ಆಗಿದ್ದಾರೆ. ಹಳೇ ಸಿದ್ದರಾಮಯ್ಯ ಕಳೆದು ಹೋಗಿದ್ದು, ಒಂದು ಸಾರಿ 10 ಮೆಟ್ಟಿಲು ಮುಂದಕ್ಕೆ ಬಂದು, ಯಾವುದಾದರು ಒತ್ತಡ ಬಂದರೆ 50 ಮೆಟ್ಟಿಲು ಹಿಂದಕ್ಕೆ ಹೋಗುತ್ತಿದ್ದಾರೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಟೀಕಿಸಿದರು.

ತುಮಕೂರಿನ ಹೇಮಾವತಿ ಲಿಂಕ್ ಕೆನಾಲ್ ಕಾಮಗಾರಿ ಕುರಿತು ನಗರದಲ್ಲಿ ಭಾನುವಾರ ಪ್ರತಿಕ್ರಿಯೆ ನೀಡಿದ ಅವರು, ‘ರಾಜ್ಯ ಸರ್ಕಾರ ನಿಂತ ನೀರಾಗಿ, ಯಾರನ್ನೋ ಓಲೈಕೆ ಮಾಡುತ್ತಿದೆ. ಇನ್ನೊಬ್ಬರ ಮೇಲೆ ಹಗೆಯನ್ನು ತೀರಿಸಿಕೊಂಡು ತೊಂದರೆ ಕೊಡುವುದನ್ನು ನಿಲ್ಲಿಸಬೇಕು. ಬಡಪಾಯಿ ರೈತರು ಏನು ತಪ್ಪು ಮಾಡಿದ್ದರೆಂದು ಅವರ ಮೇಲೆ ಪ್ರಕರಣ ದಾಖಲಿಸಿದ್ದೀರಿ’ ಎಂದು ಪ್ರಶ್ನಿಸಿದರು.

‘ಈ ಹಿಂದೆ ಕಾಮಗಾರಿ ಸಾಧ್ಯವಿಲ್ಲ ಎಂದ ಅಧಿಕಾರಿಗಳೇ ಇವತ್ತು ತಮ್ಮ ಕುರ್ಚಿಯನ್ನು ಉಳಿಸಿಕೊಳ್ಳಲು ಸಾಧ್ಯವಿದೆ ಎಂದು ವರದಿ ಕೊಟ್ಟಿದ್ದಾರೆ’ ಎಂದರು.

ತೇಗನಳ್ಳಿ: ಒಡ್ಡು, ಎತ್ತರದ ಜಾಳಿಗೆ ನಿರ್ಮಿಸಿದ ಗ್ರಾಮಸ್ಥರು

ನೀರು, ಮೀನು ಉಳಿವಿಗೆ ಶ್ರಮದಾನ

• ಸಂತೋಷಕುಮಾರ ಹಬ್ಬು

ಹಳಿಯಾಳ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಚಿಬ್ಬಲಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೇಗನಳ್ಳಿ ಗ್ರಾಮದಲ್ಲಿ ಕೆರೆಯಲ್ಲಿ ನೀರು ನಿಲ್ಲಲು ಒಡ್ಡು, ಮೀನು ಹೊರಹೋಗದಂತೆ ತಡೆಯಲು ಜಾಳಿಗೆ ನಿರ್ಮಿಸಲು ಗ್ರಾಮಸ್ಥರೇ ಶ್ರಮದಾನ ಕೈಗೊಂಡಿದ್ದಾರೆ.

ಸುಮಾರು ಏಳೂವರೆ ಎಕರೆ ವಿಸ್ತಾರವಾದ ಕೆರೆಯಲ್ಲಿ ಒಡ್ಡು ನಿರ್ಮಿಸುವ ಜೊತೆಗೆ ಮೀನುಗಳು ಕೆರೆಯಿಂದ ಹೊರ ಹೋಗದಂತೆ ತಡೆಯಲು 1 ರಿಂದ 12 ಅಡಿ ಎತ್ತರ ಜಾಳಿಗೆ ನಿರ್ಮಿಸುವ ಕೆಲಸ ಪ್ರಗತಿಯಲ್ಲಿದೆ. ತೇಗನಳ್ಳಿ ಗ್ರಾಮದ ಹತ್ತಾರು ಗ್ರಾಮಸ್ಥರು ಈ ಕೆಲಸದಲ್ಲಿ ನಿರತರಾಗಿದ್ದಾರೆ.

ಕಳೆದ ಕೆಲ ವರ್ಷಗಳ ಹಿಂದೆ ಕೆರೆಯಲ್ಲಿ ನೀರು ಬತ್ತುತ್ತಿದ್ದು, ನಂತರದ ದಿನಗಳಲ್ಲಿ ಮಳೆಯಾದರೂ ಕೂಡ ಕೆರೆಗಳಿಗೆ ಒಡ್ಡು ಇಲ್ಲದ ಕಾರಣ ನೀರು ನಿಲ್ಲದೆ ಹರಿದು, ಬರಿದಾಗುತ್ತಿತ್ತು. ಇದನ್ನು ಗಮನಿಸಿದ ಗ್ರಾಮಸ್ಥರು ಕೆಲ ವರ್ಷದ ಹಿಂದೆ ಶ್ರಮದಾನದ ಮೂಲಕ ಒಡ್ಡು ನಿರ್ಮಿಸಿದ್ದರು. ಕಳೆದ ವರ್ಷ ನರೇಗಾ ಯೋಜನೆಯಡಿ ಕೆರೆ ಅಭಿವೃದ್ಧಿ ಕೆಲಸವೂ ನಡೆದಿತ್ತು.

‘ಕೆರೆ ಅಭಿವೃದ್ಧಿಪಡಿಸಿದ ಬಳಿಕ ನೀರು ಸಂಗ್ರಹ ಉತ್ತಮವಾಗಿದೆ. ಕಳೆದ ವರ್ಷ ಹೊಸಪೇಟೆ, ಇನ್ನಿತರ ಕಡೆಗಳಿಂದ ಸುಮಾರು ₹80–90 ಸಾವಿರ ವೆಚ್ಚ ಮಾಡಿ ಮೀನು ಮರಿಗಳನ್ನು ತಂದು ಬಿಡಲಾಯಿತು. ಬೆಳವಣಿಗೆ ಹೊಂದಿದ ಮೀನುಗಳನ್ನು ಗ್ರಾಮಸ್ಥರೇ ಹಿಡಿದು ಮಾರಾಟ ಮಾಡಿ, ಬಂದ ಹಣವನ್ನು ಗ್ರಾಮದ ಅಭಿವೃದ್ಧಿಗೆ ಬಳಕೆ ಮಾಡುತ್ತಿದ್ದೇವೆ. ಈ ಮೊತ್ತದಲ್ಲಿ ಗ್ರಾಮ ಪಂಚಾಯಿತಿಗೂ ಶುಲ್ಕ ಭರಿಸ-ಲಾಗುತ್ತಿದೆ’ ಎಂದು ಗ್ರಾಮದ ಲಕ್ಷ್ಮಿದೇವಿ ದೇವಸ್ಥಾನ ಟ್ರಸ್ಟ್ ಸಮಿತಿ ಅಧ್ಯಕ್ಷ ನಾರಾಯಣ ಬಿಷ್ಟಪ್ಪ ಗೌಡ ಹೇಳಿದರು.

‘ಕಳೆದ ಒಂದು ವಾರದಿಂದ ತಾಲ್ಲೂಕಿನಲ್ಲಿ ಮಳೆ ಪ್ರಮಾಣ ಹೆಚ್ಚಾಗುತ್ತಿದ್ದಂತೆ ಕೆರೆಗಳಲ್ಲಿಯೂ ನೀರು ಭರ್ತಿ-ಯಾಗಲಾರಂಭಿಸಿದೆ. ಇದರಿಂದ ಕೆರೆಯಲ್ಲಿರುವ ನೀರಿನ ಜೊತೆ ಮೀನುಗಳು ಹರಿದು ಹೋಗುವ ಸಾಧ್ಯತೆ ಹಿನ್ನೆಲೆಯಲ್ಲಿ ಒಡ್ಡು ನಿರ್ಮಿಸಲಾಗುತ್ತಿದೆ. ಕೆರೆಯ ಕೋಡಿಗೆ ಹೊಂದಿಕೊಂಡು ಎತ್ತರದ ಜಾಳಿಗೆಯನ್ನು ನಿರ್ಮಿಸಿ ಮೀನುಗಳು ಹೊರ ಸಾಗದಂತೆ ವ್ಯವಸ್ಥೆ ಮಾಡಲಾಗುತ್ತಿದೆ’ ಎಂದು ವಿವರಿಸಿದರು.



ಹಳಿಯಾಳ ತಾಲ್ಲೂಕಿನ ತೇಗನಳ್ಳಿ ಗ್ರಾಮದ ದೊಡ್ಡ ಕೆರೆಗೆ ಗ್ರಾಮಸ್ಥರು ಶ್ರಮದಾನದ ಮೂಲಕ (ಒಡ್ಡು) ಕೋಡಿ ನಿರ್ಮಿಸಿ ಕೆರೆಯ ನೀರು ಹಾಗೂ ಮೀನು ಹೊರ ಹೋಗದಂತೆ ಜಾಳಿಗೆಯನ್ನು ಅಳವಡಿಸಲಾಗಿದೆ

ಕಳೆದ 3 ವರ್ಷಗಳಿಂದ ಗ್ರಾಮಸ್ಥರೆಲ್ಲರೂ ಸೇರಿ ಶ್ರಮದಾನ ನಡೆಸುತ್ತಿದ್ದೇವೆ. ಗ್ರಾಮಕ್ಕೆ ಮೂಲಸೌಲಭ್ಯ ಒದಗಿಸಲು ಸಾಧ್ಯವಾಗುತ್ತಿದೆ

ನಾರಾಯಣ ಬಿಷ್ಟಪ್ಪ ಗೌಡ, ಅಧ್ಯಕ್ಷ, ಲಕ್ಷ್ಮಿದೇವಿ ದೇವಸ್ಥಾನ ಟ್ರಸ್ಟ್ ಸಮಿತಿ

ಪ್ರತಿ ಮಂಗಳವಾರ ಗ್ರಾಮಸ್ಥರೆಲ್ಲ ಸೇರಿ ಶ್ರಮದಾನ ಮಾಡುತ್ತೇವೆ. ಗ್ರಾಮಕ್ಕೆ ಅಗತ್ಯವಿರುವ ಮೂಲಸೌಲಭ್ಯ ಒದಗಿಸಲು ಶ್ರಮಿಸುತ್ತೇವೆ.

ಅರ್ಜುನ ನಾರಾಯಣ ಸಾವಂತ, ಗ್ರಾಮಸ್ಥ

ಅಶ್ಲೀಲ ಸಂದೇಶ ಕಳಿಸಿದ ಆರೋಪ: ಕಂಬಕ್ಕೆ ಕಟ್ಟಿ ಬಾಲಕರಿಗೆ ಥಳಿತ

ಪ್ರಜಾವಾಣಿ ವಾರ್ತೆ

ನರಗುಂದ (ಗದಗ ಜಿಲ್ಲೆ): ಬಾಲಕಿಯರ ಮೊಬೈಲ್‌ಗೆ ಅಶ್ಲೀಲ ಸಂದೇಶ ಕಳಿಸಿದ್ದಾರೆ ಎಂದು ಆರೋಪಿಸಿ ಮೂವರು ಬಾಲಕರನ್ನು ಬನಹಟ್ಟಿ ಗ್ರಾಮ ಪಂಚಾಯಿತಿ ಕಚೇರಿ ಎದುರಿನ ಧ್ವಜ ಕಂಬಕ್ಕೆ ಕಟ್ಟಿ ಥಳಿಸಲಾಗಿದ್ದು ನರಗುಂದ ಪೊಲೀಸ್ ಠಾಣೆಯಲ್ಲಿ ಈ ಕುರಿತು ದೂರು, ಪ್ರತಿದೂರು ದಾಖಲಾಗಿದೆ.

‘ಮೇ 28ರಂದು ಈ ಘಟನೆ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಬಾಲಕರನ್ನು ಥಳಿಸಿದವರ ವಿರುದ್ಧ ಮಾಯಪ್ಪ ಕೊಳ್ಳಪ್ಪನವರ ಎಂಬುವವರು 55 ಜನರ ಮೇಲೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿದ್ದು, 55 ಜನರ ಪೈಕಿ 10 ಜನರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ನರಗುಂದ ಸಿಪಿಐ ಮಂಜುನಾಥ್ ನಡುವಿನಮನಿ ತಿಳಿಸಿದರು.

‘ಜೊತೆಗೆ, ಬಾಲಕಿಯರ ಮೊಬೈಲ್‌ಗೆ ಅಶ್ಲೀಲ ಮೆಸೇಜ್ ಕಳಿಸಿದವರ ವಿರುದ್ಧವೂ ಸಿದ್ದಪ್ಪ ಕುರಿ ಎಂಬುವರು ಪ್ರತಿದೂರು ದಾಖಲಿಸಿದ್ದಾರೆ. ಸಂದೇಶ ಕಳಿಸಿದವರ ಪೈಕಿ ಥಳಿತಕ್ಕೊಳಗಾಗಿ ಗಾಯಗೊಂಡ ಒಬ್ಬ ಬಾಲಕ ಹುಬ್ಬಳ್ಳಿ ಕಿಮ್ಸ್‌ನಲ್ಲಿ ಚಿಕಿತ್ಸೆ ಪಡೆಯುತ್ತಿ-ದ್ದಾನೆ. ಇನ್ನಿಬ್ಬರು ನಾಪತ್ತೆಯಾಗಿದ್ದು, ಅವರ ಪತ್ತೆಗೆ ಕ್ರಮವಹಿಸಲಾಗಿದೆ’ ಎಂದರು. ‘ಈ ಎರಡೂ ದೂರುಗಳನ್ನು ದೌರ್ಜನ್ಯ ಮತ್ತು ಪೋಕ್ಸೊ ಕಾಯ್ದೆಯಡಿ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ’ ಎಂದು ತಿಳಿಸಿದರು.

ಘಟನೆ ವಿವರ ಪಡೆದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್. ನೇಮಗೌಡ ಬನಹಟ್ಟಿ ಗ್ರಾಮಕ್ಕೆ ಭಾನುವಾರ ಭೇಟಿ ನೀಡಿದರು. ಬನಹಟ್ಟಿಯಲ್ಲಿ ಭದ್ರತೆಗಾಗಿ ಡಿಎಸ್‌ಪಿ, ಸಿಪಿಐ, ಪಿಎಸ್‌ಐ ಸೇರಿದಂತೆ ಮೀಸಲು ಪಡೆ, ಸಿವಿಲ್ ಪೊಲೀಸರನ್ನು ನಿಯೋಜಿಸಲಾಗಿದೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇಕಡ 95ಕ್ಕಿಂತ ಅಧಿಕ ಅಂಕ ಪಡೆದ ಜೈನ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ.

2024–25ನೇ ಸಾಲಿನಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಪುರಸ್ಕಾರವು ನಗದು ಬಹುಮಾನ ಹಾಗೂ ಅಭಿನಂದನಾ ಪತ್ರವನ್ನು ಒಳಗೊಂಡಿದೆ. ಅರ್ಹ ವಿದ್ಯಾರ್ಥಿಗಳು ಕೈಬರಹದ ಅರ್ಜಿಯಲ್ಲಿ ಸ್ವವಿವರದ ಜತೆಗೆ ಪ್ರಮಾಣೀಕರಿಸಿದ ಅಂಕಪಟ್ಟಿ, ಜಾತಿ ಪ್ರಮಾಣಪತ್ರವನ್ನು ಲಗತ್ತಿಸಿ, ಜುಲೈ 15ರೊಳಗೆ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್, ನಂ. 369, 42ನೇ ಅಡ್ಡರಸ್ತೆ, ಜಯನಗರ 8ನೇ ಬ್ಲಾಕ್, ಬೆಂಗಳೂರು–560070 ಈ ವಿಳಾಸಕ್ಕೆ ಕಳುಹಿಸಬೇಕು.

ಅಕ್ಟೋಬರ್ ತಿಂಗಳಲ್ಲಿ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗು-ವುದು. ವಿದ್ಯಾರ್ಥಿ ಮತ್ತು ಒಬ್ಬ ಪೋಷಕರ ಪ್ರಯಾಣ ವೆಚ್ಚವನ್ನು ಭರಿಸಲಾಗುವುದು ಎಂದು ವ್ಯವಸ್ಥಾಪಕ ಟ್ರಸ್ಟಿ ಡಿ. ನೇಮಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9845074331


ಬೆಂಗಳೂರು: ಕೆಲಸಕ್ಕಿದ್ದ ಮನೆಯಲ್ಲೇ ನೇಪಾಳ ದಂಪತಿ ಕೃತ್ಯ

2 ಕೆ.ಜಿ ಚಿನ್ನ, ನಗದು ದೋಚಿ ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲಸ ಮಾಡುತ್ತಿದ್ದ ಉದ್ಯಮಿಯ ಮನೆಯಲ್ಲಿಯೇ ನೇಪಾಳ ಮೂಲದ ದಂಪತಿ ಸುಮಾರು ₹1.90 ಕೋಟಿ ಮೌಲ್ಯದ 2 ಕೆ.ಜಿ ಚಿನ್ನ, ₹ 10 ಲಕ್ಷ ನಗದು, ಪಿಸ್ತೂಲ್ ದೋಚಿಕೊಂಡು ಪರಾರಿಯಾಗಿರುವ ಘಟನೆ ನಗರದಲ್ಲಿ ನಡೆದಿದೆ.

ಎಚ್‌ಎಎಲ್ ಠಾಣೆ ವ್ಯಾಪ್ತಿಯ ಶಾಸ್ತ್ರಿನಗರದಲ್ಲಿರುವ ರಮೇಶ್ ಬಾಬು ಅವರ ಮನೆಯಲ್ಲಿ ಘಟನೆ ನಡೆದಿದೆ. ರಾಜ್ ಹಾಗೂ ದೀಪಾ ದಂಪತಿ ಪರಾರಿಯಾದವರು.


ರಾಜ್


ದೀಪಾ

ಮೂರು ತಿಂಗಳ ಹಿಂದಷ್ಟೆ ರಮೇಶ್ ಬಾಬು ಅವರ ಮನೆಯ ಭದ್ರತಾ ಸಿಬ್ಬಂದಿಯಾಗಿ ಹಾಗೂ ಮನೆಗೆಲಸಕ್ಕೆಂದು ರಾಜ್ ಮತ್ತು ದೀಪಾ ದಂಪತಿಯನ್ನು ನೇಮಿಸಿಕೊಳ್ಳಲಾಗಿತ್ತು. ಮೇ 27ರಂದು ರಮೇಶ್ ಬಾಬು ಅವರು ರಾಜ್ ದಂಪತಿಯನ್ನು ಮನೆಯಲ್ಲಿ ಬಿಟ್ಟು ಕುಟುಂಬ ಸಮೇತ ತಿರುಪತಿಗೆ ತೆರಳಿದ್ದರು. ಮೇ 28ರಂದು ಬೆಳಗಿನ ಜಾವ ರಮೇಶ್ ಅವರು ತಮ್ಮ ಮೊಬೈಲ್ ಫೋನ್ ಮೂಲಕ ಪರಿಶೀಲಿಸಿದಾಗ ಮನೆಯ ಸಿಸಿಟಿವಿ ಕ್ಯಾಮೆರಾಗಳು ಆಫ್ ಆಗಿರುವುದು ಕಂಡು ಬಂದಿತ್ತು.

ವಿದ್ಯುತ್ ವ್ಯತ್ಯಯ ಆಗಿರಬಹುದು ಎಂದು ಭಾವಿಸಿದ್ದ ರಮೇಶ್ ಬಾಬು ಅವರು, ತಿರುಪತಿಯಲ್ಲಿಯೇ ಕುಟುಂಬದವರೊಂದಿಗೆ ದೇವರ ದರ್ಶನಕ್ಕೆ ತೆರಳಿದರು. ಬೆಳಿಗ್ಗೆ 11 ಗಂಟೆಗೆ ಪಕ್ಕದ ಮನೆ ನಿವಾಸಿಯೊಬ್ಬರು ರಮೇಶ್ ಅವರ ಪತ್ನಿಗೆ ಕರೆ ಮಾಡಿ, 'ನಿಮ್ಮ ಮನೆ ಗೇಟ್ ಮತ್ತು ಬಾಗಿಲು ತೆರೆದಿದ್ದು, ಕೂಗಿದರೂ ಯಾರೂ ಮಾತನಾಡಲಿಲ್ಲ' ಎಂದು ತಿಳಿಸಿದ್ದರು. ತಕ್ಷಣ ಎಚ್ಚೆತ್ತ ರಮೇಶ್, ತಮ್ಮ ಸ್ನೇಹಿತರನ್ನು ಮನೆ ಬಳಿ ಕಳುಹಿಸಿ ಪರಿಶೀಲಿಸಿದಾಗ ಮನೆಯ ಮುಖ್ಯದ್ವಾರ, ಬೆಡ್ ರೂಮ್ ಬಾಗಿಲುಗಳನ್ನು ಮುರಿದು ಕಳ್ಳತನ ಮಾಡಿರುವುದು ಗೊತ್ತಾಗಿದೆ.

ದಂಪತಿ ಸೇರಿ ಐವರು ಮನೆ ಬಳಿ ಬಂದ ಕಾರಿನಲ್ಲಿ ಚಿನ್ನಾಭರಣ, ಹಣದ ಬ್ಯಾಗ್‌ಗಳನ್ನು ತುಂಬಿಕೊಂಡು ಪರಾರಿಯಾಗಿದ್ದಾರೆ. ಈ ದೃಶ್ಯ ಮನೆಯ ಸುತ್ತ ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಈ ಬಗ್ಗೆ ರಮೇಶ್ ಬಾಬು ಎಚ್‌ಎಎಲ್ ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪಶ್ಚಿಮ ಘಟ್ಟದ ಧಾರಣಾ ಸಾಮರ್ಥ್ಯ: ವರದಿಗೆ ಸೂಚನೆ

ಬೆಂಗಳೂರು: ದಕ್ಷಿಣ ಕನ್ನಡ, ಕೊಡಗು ಭಾಗದಲ್ಲಿ ಮುಂಗಾರು ಪೂರ್ವ ಮಳೆಗೇ ಭೂಕುಸಿತಗಳು ಸಂಭವಿಸುತ್ತಿದ್ದು, ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯ ಅಧ್ಯಯನ ನಡೆಸಿ ಮೂರು ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಅರಣ್ಯ ಸಚಿವ ಈಶ್ವರ ಖಂಡ್ರೆ ಸೂಚನೆ ನೀಡಿದ್ದಾರೆ.

'ಪಶ್ಚಿಮ ಘಟ್ಟದಲ್ಲಿ ಹಲವು ರಸ್ತೆಗಳು, ಇತರ ಯೋಜನೆಗಳ ಕಾಮಗಾರಿಗಳು ನಡೆಯುತ್ತಿವೆ. ಇದರಿಂದಾಗಿ ಘಟ್ಟ ಪ್ರದೇಶ ಅಪಾಯಕ್ಕೆ ಸಿಲುಕಿದೆ. ಆಸ್ತಿ ಹಾನಿ, ಬೆಳೆ ಹಾನಿ, ಜೀವ ಹಾನಿಯ ಜೊತೆಗೆ ವನ್ಯಜೀವಿಗಳೂ ಸಂಕಷ್ಟ ಎದುರಿಸುವಂತಾಗಿದೆ. ಪಶ್ಚಿಮ ಘಟ್ಟ ಕ್ಷೀಣಿಸಿದರೆ ಮುಂದಿನ ದಿನಗಳಲ್ಲಿ ತೀವ್ರ ಜಲಕ್ಷಾಮ ಎದುರಾಗುವ ಭೀತಿ ಇದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಿ' ಎಂದು ಜೀವವೈವಿಧ್ಯ ಮಂಡಳಿಯ ಸದಸ್ಯ ಕಾರ್ಯದರ್ಶಿ, ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಮತ್ತು ತರಬೇತಿ ಹಾಗೂ ಅರಣ್ಯ ಸಂರಕ್ಷಣೆ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೂ ಸಚಿವರು ನಿರ್ದೇಶನ ನೀಡಿದ್ದಾರೆ.

ಕರ್ನಾಟಕದ ಅರಣ್ಯಗಳ ಪೈಕಿ ಶೇಕಡ 60ರಷ್ಟು ಭಾಗ ಜೀವವೈವಿಧ್ಯ ತಾಣವಾದ ಪಶ್ಚಿಮ ಘಟ್ಟದಲ್ಲಿದೆ. ಇದು ಸಸ್ಯ ಸಂಕುಲ, ಪ್ರಾಣಿ ಸಂಕುಲ, ಕೀಟ ಸಂಕುಲಗಳ ನೆಲೆ. ಪಶ್ಚಿಮ ಘಟ್ಟಗಳು ಮಳೆಯ ಮಾರುತ ತಡೆದು ಮಳೆ ಸುರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹೀಗಾಗಿ, ಪಶ್ಚಿಮ ಘಟ್ಟದ ಪ್ರಾಮುಖ್ಯ, ಸಂರಕ್ಷಣೆಯ ಕುರಿತಂತೆ ಸಮಗ್ರ ಮಾಹಿತಿ ನೀಡಬೇಕು ಎಂದೂ ಖಂಡ್ರೆ ಸೂಚಿಸಿದ್ದಾರೆ.

ಮಳೆ: ಇಬ್ಬರ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯಲ್ಲಿ ಭಾರಿ ಮಳೆಯಿಂದಾಗಿ ಇಬ್ಬರು ಸಾವಿಗೀಡಾಗಿದ್ದಾರೆ.

ಸಕಲೇಶಪುರ ತಾಲ್ಲೂಕಿನ ತಿನಗನಹಳ್ಳಿಯಲ್ಲಿ ನಂಜಯ್ಯ (56) ಕಾಲು ಜಾರಿ ಕೃಷಿ ಹೊಂಡಕ್ಕೆ ಬಿದ್ದು ಮೃತಪಟ್ಟಿದ್ದಾರೆ. ನಂಜಯ್ಯ ಮೇ 26ರಂದು ಜಮೀನಿಗೆ ತೆರಳಿ ಕಾಣೆಯಾಗಿದ್ದರು. ನಿರಂತರ ಮಳೆಯಿಂದ ಶೋಧಕ್ಕೆ ಅಡಚಣೆಯಾಗಿತ್ತು. ಮಳೆ ಕಡಿಮೆಯಾದ ಬಳಿಕ ಹುಡುಕಾಟ ನಡೆಸಿದ್ದು, ಶನಿವಾರ ಸಂಜೆ ತಿನಗನಹಳ್ಳಿಯಲ್ಲಿ ಅವರ ಶವ ಪತ್ತೆಯಾಗಿದೆ.

ನಂಜಯ್ಯನವರ ಹುಡುಕಾಟದ ವೇಳೆ ಚಿಕ್ಕಮಗಳೂರು ಜಿಲ್ಲೆಯ ಕಲ್ಲುದೊಡ್ಡಿ ಗ್ರಾಮದ ಕಾರ್ಮಿಕ ಮುರುಗೇಶ್ (65) ಶವವೂ ಪತ್ತೆಯಾಗಿದ್ದು, ಕಾಫಿ ತೋಟದಲ್ಲಿ ಕೆಲಸ ಮಾಡುವ ವೇಳೆ ಹೃದಯಾಘಾತದಿಂದ ಮೃತಪಟ್ಟಿರಬಹುದು ಎಂದು ಅಂದಾಜಿಸಲಾಗಿದೆ. ಈ ಎರಡೂ ಘಟನೆಗಳು ಸಕಲೇಶಪುರ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ನಡೆದಿವೆ.

(ಮಡಿಕೇರಿ)ಕೊಡಗಿನಲ್ಲಿ ಮಳೆ ಇಳಿಮುಖ: ಕೊಡಗು ಜಿಲ್ಲೆಯಲ್ಲಿ ಭಾನುವಾರ ಮಳೆ ತಗ್ಗಿದೆ. ರಸ್ತೆ, ತಡೆಗೋಡೆ ಕುಸಿತ ಮುಂದುವರಿದಿದೆ.

ತಾಲ್ಲೂಕಿನ ಪೆರಾಜೆ ಗ್ರಾಮದಲ್ಲಿ ಧಾರಾಕಾರ ಮಳೆಯಿಂದ ಅಮೆಚೂರು–ಕೋಟೆ ಪೆರಾಜೆ– ಕುಂಬಳಚೇರಿ ಕೂಡು ರಸ್ತೆಯ ತಡೆಗೋಡೆ ಕುಸಿದಿದೆ. ಇದೇ ರಸ್ತೆಯಲ್ಲಿ ಒಟ್ಟು 5 ಕಡೆ ಮಣ್ಣು ಕುಸಿದಿದೆ.

ನೀರುಪಾಲಾಗಿದ್ದ ವ್ಯಕ್ತಿ ಶವ ಪತ್ತೆ


ಗುರುಪ್ರಸಾದ್

ಮೂಡುಬಿದಿರೆ (ದಕ್ಷಿಣ ಕನ್ನಡ): ವಾಲ್ಪಾಡಿ ಗ್ರಾಮದ ಕಟ್ಟದಡಿ ಕಿಂಡಿ ಅಣೆಕಟ್ಟೆಯಿಂದ ಆಕಸ್ಮಿಕವಾಗಿ ಬಿದ್ದು ನೀರುಪಾಲಾಗಿದ್ದ ಗುರುಪ್ರಸಾದ್ ಭಟ್ (36) ಅವರ ಶವ ಭಾನುವಾರ ಸಂಜೆ ಶಿರ್ತಾಡಿ ಗೇಂದೊಟ್ಟು ಬಳಿ ಪತ್ತೆಯಾಗಿದೆ.

ಈಶ್ವರ್ ಮಲ್ಪೆ ತಂಡದ ಮುಳುಗು ತಜ್ಞರು ಶೋಧ ಕಾರ್ಯ ನಡೆಸಿ ಶವವನ್ನು ಪತ್ತೆ ಹಚ್ಚಿ ಮೇಲೆ ತಂದಿದ್ದಾರೆ. ಈ ಸ್ಥಳ ದುರಂತ ನಡೆದ ಕಟ್ಟದಡಿಯಿಂದ ಸುಮಾರು 7 ಕಿ.ಮೀ ದೂರದಲ್ಲಿದೆ. ಶುಕ್ರವಾರ ಸಂಜೆ ಗುರುಪ್ರಸಾದ್ ಅವರು ಕಿಂಡಿ ಅಣೆಕಟ್ಟೆಯ ಹಲಗೆ ತೆಗೆಯುವ ವೇಳೆ ನೀರಿಗೆ ಬಿದ್ದು ಕೊಚ್ಚಿಕೊಂಡು ಹೋಗಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦


ನಮ್ಮ ಆದರ್ಶ, ಗುರಿ ಮತ್ತು ತತ್ವಗಳನ್ನು ನಾವು ಮರೆತಾಗಷ್ಟೇ ನಮಗೆ ಸೋಲುಂಟಾಗುತ್ತದೆ.

– ಜವಾಹರಲಾಲ್ ನೆಹರೂ

ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ವಿಳಂಬವಿಲ್ಲದೆ ಭರವಸೆ ಈಡೇರಿಸಿ

ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಪುನಃ ನೀಡಬೇಕು ಎಂಬ ಬೇಡಿಕೆಯನ್ನು ಅಲ್ಲಿನ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರು ಮತ್ತೊಮ್ಮೆ ಪ್ರಸ್ತಾಪಿಸಿದ್ದಾರೆ. 'ರಾಜ್ಯದ ಸ್ಥಾನಮಾನ ಕುರಿತ ಚರ್ಚೆಯು ಕೊನೆಗೊಂಡಿಲ್ಲ' ಎಂದು ಅವರು ಹೇಳಿದ್ದಾರೆ. ನೀತಿ ಆಯೋಗದ ಈಚಿನ ಕಡತವೊಂದು ರಾಜ್ಯದ ಸ್ಥಾನಮಾನ ನೀಡುವ ಬಗ್ಗೆ ಸ್ಪಷ್ಟವಾಗಿ ಪ್ರಸ್ತಾಪ ಮಾಡಿದೆ ಎಂಬುದನ್ನು ಅವರು ತಿಳಿಸಿದ್ದಾರೆ. ಈ ಕಡತವನ್ನು ಪ್ರಧಾನಿಯವರ ಜೊತೆ ಹಾಗೂ ನೀತಿ ಆಯೋಗದ ಸದಸ್ಯರ ಜೊತೆ ಹಂಚಿಕೊಳ್ಳಲಾಗಿದೆ ಎಂದಿದ್ದಾರೆ. ಬೇಡಿಕೆಗೆ ಬಲ ನೀಡಲು ವಿಧಾನಸಭೆಯ ವಿಶೇಷ ಅಧಿವೇಶನ ಕರೆಯಬೇಕು ಎಂಬ ಸಲಹೆಗೆ ಅವರು ಒಪ್ಪಿಗೆ ಸೂಚಿಸಿಲ್ಲ. ಆದರೆ, ಅವರ ನಿಲುವು ಬಹಳ ಸ್ಪಷ್ಟವಾಗಿದೆ. ಅಬ್ದುಲ್ಲಾ ಅವರು ಮುಖ್ಯಮಂತ್ರಿ ಆದ ನಂತರದಲ್ಲಿ ಈ ಬೇಡಿಕೆಯನ್ನು ಹಲವು ಬಾರಿ ಮಂಡಿಸಿದ್ದಾರೆ.

ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಆದಷ್ಟು ಬೇಗ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ 2023ರಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ರಾಜ್ಯದ ಸ್ಥಾನವನ್ನು ಮತ್ತೆ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭರವಸೆ ಇತ್ತಿದ್ದಾರೆ. ಆದರೆ, ಅವರಿಬ್ಬರೂ ಇದನ್ನು ಕಾಲಮಿತಿಯಲ್ಲಿ ಮಾಡುವುದಾಗಿ ಹೇಳಿಲ್ಲ. ಭರವಸೆಗಳನ್ನು ನೀಡಲಾಗಿದ್ದರೂ ರಾಜ್ಯದ ಸ್ಥಾನವನ್ನು ಮತ್ತೆ ನೀಡುವ ಉದ್ದೇಶ ನಿಜವಾಗಿಯೂ ಇದೆಯೇ ಎಂಬುದರ ಬಗ್ಗೆ ಗಂಭೀರ ಅನುಮಾನಗಳು ಇವೆ.



ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಮತ್ತೆ ನೀಡಿದರೆ ಅಲ್ಲಿನ ಪ್ರಜಾತಂತ್ರವು ವಾಸ್ತವಕ್ಕೆ ಇನ್ನಷ್ಟು ಹತ್ತಿರವಾಗುತ್ತದೆ, ಅಲ್ಲಿನ ಆಡಳಿತವು ಇನ್ನಷ್ಟು ಜನಕೇಂದ್ರಿತವಾಗುತ್ತದೆ, ಜನರ ಭಾಗೀದಾರಿಕೆ ಹೆಚ್ಚಾಗುತ್ತದೆ

ಪಹಲ್ಗಾಮ್‌ನಲ್ಲಿ ಏಪ್ರಿಲ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯ ಕಾರಣಕ್ಕೆ ರಾಜ್ಯದ ಸ್ಥಾನಮಾನ ಕುರಿತ 'ಚರ್ಚೆ'ಯ ಬಗ್ಗೆ ಪ್ರಸ್ತಾಪ ಆಗಿದೆ. ಭಯೋತ್ಪಾದಕ ದಾಳಿಯು ಈ ಬೇಡಿಕೆ ಈಡೇರಿಸುವುದನ್ನು ಕಷ್ಟವಾಗಿಸಿದೆ ಎಂಬ ದೃಷ್ಟಿಕೋನವು ತಪ್ಪು. ದಾಳಿಯ ನಂತರದಲ್ಲಿ, ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಮತ್ತೆ ನೀಡುವ ಅಗತ್ಯವು ಮೊದಲಿಗಿಂತಲೂ ಹೆಚ್ಚಾಗಿದೆ. ಈಗಿನ ವ್ಯವಸ್ಥೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಚುನಾಯಿತ ಸರ್ಕಾರಕ್ಕೆ ಬಹಳ ಸೀಮಿತ ಅಧಿಕಾರ ಇದೆ. ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಅಧಿಕಾರ, ಅಂದರೆ ಹಿರಿಯ ಅಧಿಕಾರಿಗಳ ವರ್ಗಾವಣೆ ಹಾಗೂ ಅವರ ನಿಯೋಜನೆಗೆ ಸಂಬಂಧಿಸಿದ ಅಧಿಕಾರವು ಚುನಾಯಿತರಲ್ಲದ ಲೆಫ್ಟಿನೆಂಟ್ ಗವರ್ನರ್ ಬಳಿ ಇರುತ್ತದೆ. ಈ ವಿಚಾರಗಳಲ್ಲಿ ರಾಜ್ಯ ಸರ್ಕಾರಕ್ಕೆ ಪಾತ್ರವೇ ಇಲ್ಲವಾಗಿದೆ. ಭದ್ರತೆಯನ್ನು ಖಾತರಿಪಡಿಸುವಲ್ಲಿ ಅಗತ್ಯವಿರುವ ಒಂದು ಪ್ರಮುಖ ಹೆಜ್ಜೆ ಎಂದರೆ, ಆ ಪ್ರಕ್ರಿಯೆಯಲ್ಲಿ ಸ್ಥಳೀಯರನ್ನು ತೊಡಗಿಸಿಕೊಳ್ಳುವುದು. ಈಗಿನ ಆಡಳಿತದಲ್ಲಿ ರಾಜ್ಯದ ಜನರಿಗೆ ಭದ್ರತೆಗೆ ಸಂಬಂಧಿಸಿದ ವ್ಯವಸ್ಥೆಯಲ್ಲಿ ಪಾತ್ರವೇ ಇಲ್ಲ. ಜಮ್ಮು ಮತ್ತು ಕಾಶ್ಮೀರದ ಭದ್ರತೆಯ ವಿಚಾರದಲ್ಲಿ ಚುನಾಯಿತ ಸರ್ಕಾರವು ಹೊರಗಿನವರಂತೆ ಇರಬೇಕಾಗಿದೆ. ಪಹಲ್ಗಾಮ್ ದಾಳಿಯ ನಂತರ ನಡೆದ ಭದ್ರತೆಗೆ ಸಂಬಂಧಿಸಿದ ಸಂಪುಟ ಸಮಿತಿಯ ಸಭೆಗೆ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಅವರಿಗೆ ಆಹ್ವಾನ ಇರಲಿಲ್ಲ.

ಕಾಶ್ಮೀರದ ಭದ್ರತಾ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ, ಸಶಸ್ತ್ರ ಪಡೆಗಳು, ಗುಪ್ತಚರ ವ್ಯವಸ್ಥೆ ಹಾಗೂ ಲೆಫ್ಟಿನೆಂಟ್ ಗವರ್ನರ್ ಮಾತ್ರವೇ ಭಾಗೀದಾರರಾಗಿ ಇರಬಾರದು. ಈ ವ್ಯವಸ್ಥೆಯಲ್ಲಿ ಅಲ್ಲಿನ ಜನರನ್ನು ಪ್ರತಿನಿಧಿಸುವ ಸರ್ಕಾರ ಕೂಡ ಪ್ರಮುಖ ಭಾಗೀದಾರನಾಗಿ ಇರಬೇಕು. ಕೇಂದ್ರ ಸರ್ಕಾರ ಹಾಗೂ ಜನರ ನಡುವಿನ ವಿಶ್ವಾಸವು ಬಹಳ ಮುಖ್ಯವಾಗುತ್ತದೆ. ಚುನಾಯಿತ ಸರ್ಕಾರವೊಂದಕ್ಕೆ ಅದಕ್ಕೆ ಕೊಡಬೇಕಿರುವ ಅಧಿಕಾರವನ್ನು ಕೊಡದೇ ಇದ್ದಾಗ ಅವಿಶ್ವಾಸದ ಸಂದೇಶವೊಂದನ್ನು ರವಾನಿಸಿದಂತೆ ಆಗುತ್ತದೆ. ಭರವಸೆಗಳನ್ನು ಮಾತ್ರ ನೀಡಿ, ಅದಕ್ಕೆ ಅನುಗುಣವಾಗಿ ಕ್ರಮಗಳನ್ನು ಕೈಗೊಳ್ಳದೇ ಇದ್ದಾಗ ಆ ಅವಿಶ್ವಾಸವು ಹೆಚ್ಚಾಗುತ್ತದೆ. ಭಯೋತ್ಪಾದನೆಯು ರಾಜಕೀಯ ಸಮಸ್ಯೆಯೂ ಹೌದು. ಅದನ್ನು ರಾಜಕೀಯವಾಗಿಯೂ ನಿರ್ವಹಿಸುವ ಕೆಲಸ ಆಗಬೇಕು. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ಮತ್ತೆ ನೀಡಿದರೆ ಅಲ್ಲಿನ ಪ್ರಜಾತಂತ್ರವು ವಾಸ್ತವಕ್ಕೆ ಇನ್ನಷ್ಟು ಹತ್ತಿರವಾಗುತ್ತದೆ. ಅಲ್ಲಿನ ಆಡಳಿತವು ಇನ್ನಷ್ಟು ಜನಕೇಂದ್ರಿತವಾಗುತ್ತದೆ. ಜನರ ಭಾಗೀದಾರಿಕೆ ಹೆಚ್ಚಾಗುತ್ತದೆ. ರಾಜ್ಯದ ಸ್ಥಾನ ನೀಡುವುದನ್ನು ರಾಷ್ಟ್ರ ಮತ್ತು ಜನರ ನಡುವಿನ ಒಪ್ಪಂದದಂತೆ ಕಾಣಬೇಕು. ಕಾಶ್ಮೀರದ ಒಳಿತಿಗಾಗಿ, ದೇಶದ ಒಳಿತಿಗಾಗಿ ಅದನ್ನು ಗೌರವಿಸಬೇಕು.

ದಿನದ ಟ್ವೀಟ್

ನಮ್ಮಲ್ಲೂ ಹೀಗೇ ಇರಬಾರದೇ...



ಕೆಲ ವರ್ಷಗಳ ಹಿಂದೆ ಕೆಲಸದ ನಿಮಿತ್ತ ಜಪಾನ್‌ಗೆ ಭೇಟಿ ನೀಡಿದ್ದಾಗ, ಹೋಟೆಲ್‌ನ ಕೊಠಡಿಯಲ್ಲಿದ್ದ ನನ್ನ ಸೂಟ್‌ಕೇಸ್‌ಗೆ ಅಭ್ಯಾಸಬಲದಿಂದ ಬೀಗ ಹಾಕಲು ಮುಂದಾದೆ. ಅದನ್ನು ನೋಡಿ ನಕ್ಕ ನನ್ನ ಸ್ಥಳೀಯ ಸಹೋದ್ಯೋಗಿ, ಸೂಟ್‌ಕೇಸ್ ಮತ್ತು ಕೊಠಡಿ ಬಾಗಿಲು ಎರಡೂ ತೆರೆದಿದ್ದರೂ ಏನೂ ಕಳವಾಗದು ಎಂದರು. ಅದ್ಭುತವಾದ ಸಮಾಜ ಅದು. ಯಾರಾದರೂ ಕಸ ಎಸೆದಿದ್ದರೆ ಇನ್ಯಾರೋ ಅದನ್ನು ಎತ್ತಿ ಕಸದಬುಟ್ಟಿಗೆ ಹಾಕುತ್ತಾರೆ...

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ



ಮಂಗಳೂರಿನಲ್ಲಿ ಹಿಂದೂ– ಮುಸ್ಲಿಮರಷ್ಟೇ ಅಲ್ಲ, ಎಲ್ಲರೂ ಇದ್ದಾರೆ. ಅಲ್ಲಿನ ವಿಚಾರಗಳ ಬಗ್ಗೆ ರಾಜಕೀಯ ಮಾಡುವುದು ಬೇಡ. ಯಾರೇ ತಪ್ಪು ಮಾಡಲಿ, ಅವರನ್ನು ಒದ್ದು ಒಳಗೆ ಹಾಕಬೇಕು. ಇನ್ನೊಬ್ಬರ ಜೀವ ತೆಗೆಯುವ ಪಾಪದ ಕೆಲಸವನ್ನು ಯಾರೂ ಮಾಡಬಾರದು.

ವಿ. ಸೋಮಣ್ಣ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ 2–6–2000

• ಗೋವಾ: ಅಧಿಕೃತ ಭಾಷಾ ವಿವಾದಕ್ಕೆ ಹೊಸ ತಿರುವು

ಪಣಜಿ, ಜೂನ್ 1– ಗೋವಾ ರಾಜ್ಯದಲ್ಲಿ ಅಧಿಕೃತ ಭಾಷೆ ವಿವಾದ ಈಗ ಇನ್ನೊಂದು ತಿರುವು ಪಡೆದುಕೊಂಡಿದೆ. ರಾಜ್ಯದಲ್ಲಿ ನೆಲಸಿರುವ ಕನ್ನಡ ಭಾಷೆ ಮೂಲದವರು ಕನ್ನಡಕ್ಕೆ ರಾಜ್ಯದ ಅಧಿಕೃತ ಭಾಷೆಯಾಗಿ ಮನ್ನಣೆ ನೀಡಬೇಕೆಂದು ಒತ್ತಾಯ ಮಂಡಿಸಿರುವುದು ವಿವಾದ ಎಬ್ಬಿಸಿದೆ.

ಕನ್ನಡವನ್ನೇ ಅಧಿಕೃತ ಭಾಷೆಯನ್ನಾಗಿ ಮಾಡಬೇಕೆಂದು ಒತ್ತಾಯಿಸಿ ಇಲ್ಲಿಯ ಕನ್ನಡ ಅಕಾಡೆಮಿ ಇತ್ತೀಚೆಗೆ ಸಹಿ ಚಳವಳಿ ಪ್ರಾರಂಭಿಸಿದೆ. ಕನ್ನಡ ಭಾಷೆಗೆ ಬೆಂಬಲವಾಗಿ ಅಕಾಡೆಮಿಯು ಕನ್ನಡಿಗರೇ ಅತಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸುವ ಪ್ರದೇಶಗಳಲ್ಲಿ ಅಕಾಡೆಮಿಯ ಸ್ವಯಂ ಸೇವಕರು ಸಹಿ ಸಂಗ್ರಹಿಸುತ್ತಿದ್ದಾರೆ ಎಂದು ಅಕಾಡೆಮಿಯ ಅಧಿಕೃತ ಪ್ರಕಟಣೆ ತಿಳಿಸಿದೆ.

ಈ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಕಾಡೆಮಿಯು ರಾಜ್ಯ ಮಟ್ಟದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಿದೆ. ರಾಜ್ಯದಲ್ಲಿರುವ ಕನ್ನಡ ಸಂಘಗಳು ಈ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಅಕಾಡೆಮಿ ಮನವಿ ಮಾಡಿಕೊಂಡಿದೆ.

ಉಪವಾಸ ಸತ್ಯಾಗ್ರಹ, ಧರಣಿ, ಪ್ರತಿಭಟನಾ ಮೆರವಣಿಗೆ, ಮುಖ್ಯಮಂತ್ರಿಗೆ ಮನವಿ ಪತ್ರ ಸಲ್ಲಿಕೆ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

• ಕ್ರಿಕೆಟಿಗರ ಆಸ್ತಿ ಮೇಲೆ ಸಿಬಿಐ ಕಣ್ಣು

ನವದೆಹಲಿ, ಜೂನ್ 1 – ಕ್ರಿಕೆಟ್ 'ಮೋಸ-ದಾಟ'ದಲ್ಲಿ ಪಾಲ್ಗೊಂಡಿದ್ದಾರೆಂಬ ಆರೋಪಕ್ಕೆ ಒಳಗಾಗಿರುವ ಭಾರತದ ಹಲವು ಅಂತರ ರಾಷ್ಟ್ರೀಯ ಕ್ರಿಕೆಟ್ ಆಟಗಾರರ ಆದಾಯ ಮತ್ತು ಆಸ್ತಿಗಳ ವಿವರಗಳನ್ನು ನೀಡಬೇಕೆಂದು ಸಿಬಿಐ ಅಧಿಕಾರಿಗಳು ಆದಾಯ ತೆರಿಗೆ ಇಲಾಖೆಗೆ ಮನವಿ ಮಾಡಿದ್ದಾರೆ.

'ಕ್ರಿಕೆಟ್ ಮೋಸದಾಟದ ಬಗ್ಗೆ ಸಿಬಿಐ ನಡೆಸುತ್ತಿರುವ ತನಿಖೆಗೆ ಆದಾಯ ತೆರಿಗೆ ಇಲಾಖೆ ಸಹಕರಿಸುತ್ತಿದೆ' ಎಂದು ಸಿಬಿಐ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಸೋಮವಾರ 2–6–1975

• ದುರ್ಬಲ ವರ್ಗಕ್ಕೆ ಉದ್ಯೋಗ ಮನೆಗೆಲಸಕ್ಕೆ ವೇತನ ಶಾಸನ

ಬೆಂಗಳೂರು, ಜೂನ್ 1 – ದುಡಿಯುವ ಮಹಿಳೆಯರಿಗೆ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಶಾಸನ ರೀತ್ಯ ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಇಂದು ಮುಕ್ತಾಯಗೊಂಡ ಕರ್ನಾಟಕ ದುಡಿಯುವ ಮಹಿಳೆಯರ ಸಮ್ಮೇಳನ ಒತ್ತಾಯ ಮಾಡಿದೆ.

ಕರ್ನಾಟಕ ರಾಜ್ಯ ಮಹಿಳಾ ಸಂಘ ಏರ್ಪಡಿಸಿದ ಸಮ್ಮೇಳನದಲ್ಲಿ ಹೊರತಂದ ಪ್ರಣಾಳಿಕೆಯಲ್ಲಿ ದುರ್ಬಲ ವರ್ಗದ ಮಹಿಳೆಯರಿಗೆ ಉದ್ಯೋಗಾವಕಾಶ, ರಾಷ್ಟ್ರೀಯ ಅಗತ್ಯ ಆಧಾರಿತ ಕನಿಷ್ಠ ವೇತನ, ಉದ್ಯೋಗ ನೀಡಿಕೆಯಲ್ಲಿ ಮಹಿಳೆಯರಿಗೆ ಆಗುತ್ತಿರುವ ಶೋಷಣೆ ತಪ್ಪಿಸುವುದು, ಪ್ರತಿ ನಗರ, ಊರು ಮತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರ ವಸತಿ ಗೃಹಗಳ ಸ್ಥಾಪನೆ, ಹೆರಿಗೆ ಸೌಲಭ್ಯ ಕಾಯಿದೆಯ ತಿದ್ದುಪಡಿ ಮತ್ತು ಮನೆಗೆಲಸದ ಮಹಿಳೆಯರಿಗೆ ಕಾನೂನು ಮತ್ತು ಸಾಮಾಜಿಕ ರಕ್ಷಣೆ ಇತ್ಯಾದಿ ಬೇಡಿಕೆಗಳನ್ನು ಮುಂದಿಡಲಾಗಿದೆ. ಪ್ರಣಾಳಿಕೆಯನ್ನು ಡಾ. ಅನುಪಮಾ ನಿರಂಜನ ಅವರು ಓದಿದರು.

ಸ್ಥಳೀಯ ಸರ್ಕಾರಗಳ ಬಲವರ್ಧನೆಗೆ ತೋರಬೇಕಿದೆ ಇಚ್ಛಾಶಕ್ತಿ

ಸ್ಥಳೀಯ ಸಂಸ್ಥೆ ಚುನಾವಣೆ: ಅಸಡ್ಡೆ ಬೇಡ



ವಿಶ್ಲೇಷಣೆ

ಸಂತೋಷ ನರಗುಂದ

ಆಡಳಿತದ ವಿಕೇಂದ್ರೀಕರಣದಲ್ಲಿ ಕರ್ನಾಟಕವು ಬಹುಕಾಲದಿಂದ ಮುಂಚೂಣಿಯಲ್ಲಿದೆ. 1992ರಲ್ಲಿ ಸಂವಿಧಾನಕ್ಕೆ 73ನೇ ಮತ್ತು 74ನೇ ತಿದ್ದುಪಡಿ ತರುವ ಮೂಲಕ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಸಾಂವಿಧಾನಿಕ ಮಾನ್ಯತೆ ನೀಡುವುದಕ್ಕೂ ಮುನ್ನವೇ ರಾಜ್ಯವು 1977ರ ಅಶೋಕ್ ಮೆಹ್ತಾ ಸಮಿತಿಯ ಶಿಫಾರಸುಗಳ ಆಧಾರದ ಮೇಲೆ 3 ಹಂತಗಳ ಪಂಚಾಯತ್ ರಾಜ್ ಆಡಳಿತ ವ್ಯವಸ್ಥೆಯನ್ನು ಅಳವಡಿಸಿಕೊಂಡಿತ್ತು.

ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಜನರ ಬಳಿಗೆ ಆಡಳಿತವನ್ನು ಕೊಂಡೊಯ್ಯುವ ಅಧಿಕಾರದ ವಿಕೇಂದ್ರೀಕರಣ ಮತ್ತು ಸ್ಥಳೀಯ ಪ್ರಜಾಪ್ರಭುತ್ವದ ಸ್ಥಿತಿಗತಿಯನ್ನು ಪ್ರತಿಬಿಂಬಿಸುವ ಮುಖ್ಯ ಸೂಚಕಗಳಾಗಿವೆ. ಕರ್ನಾಟಕದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಸ್ಥಿತಿಗತಿಯ ವಿಶ್ಲೇಷಣೆ ಮಾಡಿದಾಗ, ರಾಜ್ಯದ ಸ್ಥಳೀಯ ಸ್ವಶಾಸನ ವ್ಯವಸ್ಥೆ ಕ್ಷೀಣಿಸುತ್ತಿರುವ ಚಿಂತಾಜನಕ ಚಿತ್ರಣ ಕಣ್ಣೆದುರು ಹಾದುಹೋಗುತ್ತದೆ.

2024ರ ಡಿಸೆಂಬರ್‌ನಲ್ಲಿ ಕರ್ನಾಟಕ ವಿಧಾನ ಮಂಡಲದಲ್ಲಿ ಮಂಡನೆಯಾದ ಮಹಾಲೇಖಪಾಲರ (ಸಿಎಜಿ) ವರದಿ ಪ್ರಕಾರ, 73ನೇ ತಿದ್ದುಪಡಿ ಜಾರಿಗೆ ಬಂದ ಬಳಿಕ ಎಂದಿಗೂ ವಿಳಂಬವಾಗಿರದ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ಇತ್ತೀಚೆಗೆ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲದಿಂದ ಚುನಾವಣೆ ನಡೆದಿಲ್ಲ. ಸರ್ಕಾರಕ್ಕೆ ಹೈಕೋರ್ಟ್ ₹5 ಲಕ್ಷ ದಂಡ ವಿಧಿಸಿದರೂ ಈವರೆಗೂ ಚುನಾವಣೆ ನಡೆಸದಿರುವುದು ವಿಷಾದಕರ.

2024ರ ಆಗಸ್ಟ್‌ನಲ್ಲಿ ಜನಾಗ್ರಹ ಸಂಸ್ಥೆ ನಡೆಸಿದ ಅಧ್ಯಯನದ ಪ್ರಕಾರ, ರಾಜ್ಯದ 11 ಮಹಾನಗರ ಪಾಲಿಕೆಗಳ ಚುನಾವಣೆಗಳಲ್ಲಿ ಸರಾಸರಿ 22 ತಿಂಗಳ ವಿಳಂಬ ಆಗಿರುವುದು ಕಂಡುಬಂದಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾಯಿತ ಅವಧಿ ಮುಗಿದು 55 ತಿಂಗಳಾದರೂ ಚುನಾವಣೆ ನಡೆದಿಲ್ಲ. ಮೈಸೂರು, ಶಿವಮೊಗ್ಗ, ತುಮಕೂರು ಪಾಲಿಕೆಗಳಲ್ಲಿ 18 ತಿಂಗಳಾದರೂ ಚುನಾವಣೆ ನಡೆದಿಲ್ಲ. ದಾವಣಗೆರೆ ಮತ್ತು ಮಂಗಳೂರು ಪಾಲಿಕೆಗಳ ಅವಧಿ ಪ್ರಸಕ್ತ ವರ್ಷದ ಫೆಬ್ರುವರಿಯಲ್ಲಿ ಮುಗಿದರೂ ಚುನಾವಣೆ ನಡೆದಿಲ್ಲ. ರಾಷ್ಟ್ರ ಮಟ್ಟದಲ್ಲಿ ನೋಡುವುದಾದರೆ, 74ನೇ ಸಂವಿಧಾನ ತಿದ್ದುಪಡಿ ಅನುಷ್ಠಾನ ಕುರಿತು ಮಹಾಲೇಖಪಾಲರು 2024ರ ನವೆಂಬರ್‌ನಲ್ಲಿ ಸಲ್ಲಿಸಿದ ವರದಿ ಪ್ರಕಾರ ಶೇ 60ಕ್ಕಿಂತ ಹೆಚ್ಚು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಚುನಾಯಿತ ಪರಿಷತ್‌ಗಳು ಇಲ್ಲದಿರುವುದು ಕಂಡುಬಂದಿದೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶ ಪ್ರಕಟವಾದ ನಂತರವೂ ಒಂದು ನಿರ್ದಿಷ್ಟ ಕಾಲಮಿತಿಯೊಳಗೆ ಸ್ಥಳೀಯ ಸರ್ಕಾರ ರಚನೆಯಾಗುವ ಖಾತರಿ ಇಲ್ಲ. ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ನೂತನ ಪರಿಷತ್ತು ರಚನೆ ಮತ್ತು ಮೇಯರ್ ಅಥವಾ ಅಧ್ಯಕ್ಷರ ಆಯ್ಕೆಯಲ್ಲೂ ವಿಳಂಬವಾಗುತ್ತಿದೆ.

ಸಣ್ಣ ಪಟ್ಟಣಗಳಲ್ಲಿ ಶೇ 89ರಷ್ಟು ಪ್ರಕರಣಗಳಲ್ಲಿ ಮೀಸಲಾತಿ ಪಟ್ಟಿ ಪ್ರಕಟ ಆಗದಿರುವುದರಿಂದ ಅಥವಾ ಪಾಲಿಕೆ ಪರಿಷತ್ತಿನ ಮೊದಲ ಸಭೆ ಕರೆಯದಿರುವುದರಿಂದ ಪರಿಷತ್ ರಚನೆ ಮತ್ತು ಅಧ್ಯಕ್ಷರ ಚುನಾವಣೆಯಲ್ಲಿ ವಿಳಂಬವಾಗಿದೆ. ಈ ರೀತಿಯ ವಿಳಂಬವು ಸ್ಥಳೀಯ ಸರ್ಕಾರಗಳ ಶಕ್ತಿಯನ್ನು ಕುಗ್ಗಿಸುತ್ತದೆ. ಇದರಿಂದ ನಾಗರಿಕರು ಈ ಮಹತ್ವದ ಪ್ರಜಾಸತ್ತಾತ್ಮಕ ಸಂಸ್ಥೆಗಳ ಮೇಲಿನ ನಂಬಿಕೆಯನ್ನೇ ಕಳೆದುಕೊಳ್ಳಲಿದ್ದಾರೆ.

ಮೇಯರ್ ಮತ್ತು ಅಧ್ಯಕ್ಷರಿಗೆ ಐದು ವರ್ಷಗಳಿಗಿಂತ ಕಡಿಮೆ ಅವಧಿ (ಒಂದು ವರ್ಷದಿಂದ ಎರಡೂವರೆ ವರ್ಷ) ನಿಗದಿಪಡಿಸಿರುವ ಕೆಲವೇ ರಾಜ್ಯಗಳ ಪೈಕಿ ಕರ್ನಾಟಕವೂ ಒಂದಾಗಿದೆ ಎಂದು 2024ರ ಸಿಎಜಿ ವರದಿ ಹೇಳಿದೆ. ನಗರಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ದೂರದೃಷ್ಟಿ ಹೊಂದಿ ಕೆಲಸ ಮಾಡಲು ಮೇಯರ್ ಮತ್ತು ಅಧ್ಯಕ್ಷರಿಗೆ 5 ವರ್ಷಗಳವರೆಗೆ ಆಡಳಿತ ನಡೆಸಲು ಅವಕಾಶ ಕಲ್ಪಿಸುವುದು ಅತ್ಯಗತ್ಯ.

2020ರಲ್ಲಿ ಕಾನೂನಿಗೆ ತಿದ್ದುಪಡಿ ತರುವ ಮೂಲಕ ಪಂಚಾಯಿತಿ ಅಧ್ಯಕ್ಷರ ಆಡಳಿತಾವಧಿಯನ್ನು ಐದು ವರ್ಷಗಳಿಂದ ಎರಡೂವರೆ ವರ್ಷಗಳಿಗೆ ಇಳಿಸಲಾಗಿದೆ. ಆಡಳಿತಾವಧಿ ಹೀಗೆ ಕಡಿಮೆ ನಿಗದಿಗೊಂಡರೆ ಸ್ಥಳೀಯ ಸರ್ಕಾರಗಳ ಮುಖ್ಯಸ್ಥರಿಗೆ ದೀರ್ಘಕಾಲಿಕ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು ಕಷ್ಟಸಾಧ್ಯವಾಗುತ್ತದೆ. ಪ್ರಜಾಪ್ರಭುತ್ವದ ಮೂರನೇ ಹಂತವನ್ನು ಬಲಪಡಿಸಲು ಸುಧಾರಣೆಗಳನ್ನು ಕೈಗೊಳ್ಳುವುದು ಅತ್ಯವಶ್ಯಕವಾಗಿದೆ. ಮೊದಲನೆಯದಾಗಿ, ರಾಜ್ಯ ಚುನಾವಣಾ ಆಯೋಗಗಳ ನೇಮಕಾತಿ ಪ್ರಕ್ರಿಯೆಯನ್ನು ಭಾರತ ಚುನಾವಣಾ ಆಯೋಗದ ಮಾದರಿಯಲ್ಲಿ ಬಲಪಡಿಸುವ ಅಗತ್ಯವಿದೆ.

ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಿಗೆ ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿಕೊಂಡು ಬರುತ್ತಿದೆ ಭಾರತದ ಚುನಾವಣಾ ಆಯೋಗ. ಇದೇ ವೇಳೆ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಬೇಕಾದ ಜವಾಬ್ದಾರಿ ಹೊಂದಿರುವ ರಾಜ್ಯ ಚುನಾವಣಾ ಆಯೋಗಗಳು ಬಹುತೇಕ ರಾಜ್ಯಗಳಲ್ಲಿ ರಾಜ್ಯ ಸರ್ಕಾರಗಳ ಹಸ್ತಕ್ಷೇಪಕ್ಕೆ ಮತ್ತು ವ್ಯವಸ್ಥಿತ ನಿರ್ಲಕ್ಷ್ಯಕ್ಕೆ ಒಳಗಾಗಿ ಸ್ವಾಯತ್ತತೆಯನ್ನು ಕಳೆದುಕೊಂಡಿವೆ.

ಸಂವಿಧಾನದ 243ಕೆ ಮತ್ತು 243ಝಡ್ಎ ವಿಧಿಗಳ ಅಡಿಯಲ್ಲಿ 73ನೇ ಮತ್ತು 74ನೇ ತಿದ್ದುಪಡಿಗಳ ಮೂಲಕ ರಾಜ್ಯ ಚುನಾವಣಾ ಆಯೋಗಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಈ ನಿಬಂಧನೆಗಳು ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಯ ನಿರ್ವಹಣೆ ಹಾಗೂ ಮೇಲ್ವಿಚಾರಣೆಯ ಹೊಣೆಯನ್ನು ರಾಜ್ಯ ಚುನಾವಣಾ ಆಯೋಗಗಳಿಗೆ ನೀಡುತ್ತವೆ.



2006ರಲ್ಲಿ ಕಿಶನ್ ಸಿಂಗ್ ತೋಮರ್ ವಿರುದ್ಧ ಅಹಮದಾಬಾದ್ ಮಹಾನಗರ ಪಾಲಿಕೆ ಪ್ರಕರಣದಲ್ಲಿ, ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದ ಚುನಾವಣೆಯಲ್ಲಿ ರಾಜ್ಯ ಚುನಾವಣಾ ಆಯೋಗಗಳಿಗೆ ಭಾರತ ಚುನಾವಣಾ ಆಯೋಗಕ್ಕೆ ಇರುವಷ್ಟೇ ಅಧಿಕಾರವಿದೆ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ.

ರಾಜ್ಯ ಚುನಾವಣಾ ಆಯೋಗಗಳ ಆಯುಕ್ತರನ್ನು ಪ್ರಸ್ತುತ ರಾಜ್ಯ ಸರ್ಕಾರವೇ ನೇರವಾಗಿ ನೇಮಿಸುತ್ತದೆ. ಇದರಿಂದ ಆಯೋಗದ ಸ್ವಾಯತ್ತತೆಗೆ ಧಕ್ಕೆ ಒದಗುತ್ತದೆ. ಇದಕ್ಕೆ ಪರ್ಯಾಯವಾಗಿ ಆಯುಕ್ತರ ಸಂಖ್ಯೆಯನ್ನು ಹೆಚ್ಚಿಸಬೇಕು. ಮುಖ್ಯಮಂತ್ರಿ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಹಾಗೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಅವರನ್ನೊಳಗೊಂಡ ಸಮಿತಿ ಮೂಲಕ ನೇಮಕ ಪ್ರಕ್ರಿಯೆ ನಡೆಯುವಂತಿರಬೇಕು. ಇಂತಹ ವ್ಯವಸ್ಥೆಯಿಂದ ಆಯೋಗವು ರಾಜಕೀಯ ಪ್ರಭಾವದಿಂದ ಮುಕ್ತವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ.

ಎರಡನೆಯದಾಗಿ, ವಾರ್ಡ್ ಮರುವಿಂಗಡಣೆ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಚುನಾವಣಾ ಆಯೋಗಗಳಿಗೆ ಹಸ್ತಾಂತರಿಸಬೇಕು. ಇದಕ್ಕೆ ಕಾನೂನಿಗೆ ಸೂಕ್ತ ತಿದ್ದುಪಡಿ ತರುವ ಅಗತ್ಯ ಇದೆ. ಈ ರೀತಿಯಲ್ಲಿ ಅಧಿಕಾರ ಬಳಕೆಗೆ ಸಾಂಸ್ಥಿಕ ಶಿಸ್ತಿನ ಕವಚ ತೊಡಿಸಿ, ಸ್ಥಳೀಯ ಚುನಾವಣೆ ಪ್ರಕ್ರಿಯೆಗೆ ಅಗತ್ಯವಾದ ಸ್ಥಿರತೆ ಒದಗಿಸಬಹುದು.

ಕೊನೆಯದಾಗಿ, ಎಲ್ಲ ಸ್ಥಳೀಯ ಸ್ವ-ಸರ್ಕಾರಗಳ ಮುಖ್ಯಸ್ಥರಿಗೆ 5 ವರ್ಷಗಳವರೆಗೆ ಅಧಿಕಾರದಲ್ಲಿ ಮುಂದುವರಿಯುವ ಅವಕಾಶ ಇರುವಂತೆ ಕಾನೂನಿಗೆ ಅಗತ್ಯ ತಿದ್ದುಪಡಿಗಳನ್ನು ತರಬೇಕು. ಜೊತೆಗೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ಫಲಿತಾಂಶ ಪ್ರಕಟವಾದ ನಂತರ ಒಂದು ತಿಂಗಳೊಳಗೆ ಪಾಲಿಕೆ ಪರಿಷತ್ತುಗಳನ್ನು ರಚಿಸಿ ಮೇಯರ್, ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಕಾಲಮಿತಿಯನ್ನು ಕಾನೂನಿನಲ್ಲಿ ನಿಗದಿಪಡಿಸಬೇಕಾಗಿದೆ. ಇದಕ್ಕಾಗಿ ಮಹಾನಗರ ಪಾಲಿಕೆ, ಪುರಸಭೆ ಮತ್ತು ಪಂಚಾಯತ್ ರಾಜ್ ಕಾಯ್ದೆಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಬೇಕಾಗಿದೆ.

ಅಧಿಕಾರ ವಿಕೇಂದ್ರೀಕರಣದ ವಿಚಾರದಲ್ಲಿ ಕರ್ನಾಟಕ ಮೇಲ್ಪಂಕ್ತಿ ಹಾಕಿಕೊಟ್ಟಿತ್ತು. ಅದನ್ನು ಕಾಯ್ದುಕೊಳ್ಳುವ ಇಚ್ಛಾಶಕ್ತಿಯನ್ನು ಈಗ ತೋರಬೇಕಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಸಮಯಕ್ಕೆ ಸರಿಯಾಗಿ ಮತ್ತು ರಾಜಕೀಯ ಪ್ರಭಾವದಿಂದ ದೂರವಿರಿಸಿ ನಡೆಸಲು ಅನುವು ಮಾಡಿಕೊಡುವ ಸುಧಾರಣೆಗಳನ್ನು ಜಾರಿಗೆ ತರಬೇಕು. ಒಕ್ಕೂಟ ವ್ಯವಸ್ಥೆಯಲ್ಲಿ ಸ್ಥಳೀಯ ಸಂಸ್ಥೆಗಳು ಕಿರಿಯ ಪಾಲುದಾರರಲ್ಲ– ಅವು ಪ್ರಜಾಪ್ರಭುತ್ವವನ್ನು ಬಲಪಡಿಸುವ ಹಾಗೂ ಪ್ರತಿಯೊಂದು ಗ್ರಾಮ ಮತ್ತು ನಗರದಲ್ಲಿಯೂ ಆಡಳಿತವನ್ನು ನಾಗರಿಕರ ಬಳಿ ತರುವ ಪ್ರಮುಖ ಘಟಕಗಳು.

ಲೇಖಕ: ಜನಾಗ್ರಹ ಸೆಂಟರ್ ಫಾರ್ ಸಿಟಿಜನ್‌ಷಿಪ್ ಆ್ಯಂಡ್ ಡೆಮಾಕ್ರಸಿ ಸಂಸ್ಥೆಯ 'ಭಾಗವಹಿಸುವಿಕೆಯ ಆಡಳಿತ' ವಿಭಾಗದ ಮುಖ್ಯಸ್ಥ

ಚುರುಮುರಿ



ನಿಜವಾದ ಕ್ಯಾಟ್‌ವಾಕ್

• ಸುಮಂಗಲಾ

ಬೆಕ್ಕಣ್ಣ ಘನ ಗಂಭೀರವಾಗಿ ಕೂತು ವಿಡಿಯೊ ವೀಕ್ಷಿಸುತ್ತಿತ್ತು.

'ಫ್ಯಾಷನ್ ಶೋ ವಿಡಿಯೊ, ಮೊನ್ನೆ ಹೈದರಾಬಾದಿನಲ್ಲಿ ಮುಕ್ತಾಯವಾಯಿತಲ್ಲ, ವಿಶ್ವಸುಂದರಿ ಸ್ಪರ್ಧೆ ಅವುಗಳ ವಿಡಿಯೊ ನೋಡಾಕೆ ಹತ್ತೀನಿ' ಎಂದಿತು.

'ಓಹೋ... ನೀನೂ ಕ್ಯಾಟ್ ಫ್ಯಾಷನ್ ಶೋಗಳಲ್ಲಿ, ಸೌಂದರ್ಯ ಸ್ಪರ್ಧೆಗಳಲ್ಲಿ ಭಾಗವಹಿಸತೀಯೇನು' ಎಂದು ನಕ್ಕೆ.

'ನನಗ ಅಂಥ ಭ್ರಮೆ ಏನಿಲ್ಲ. ಅದೆಲ್ಲ ನಿಮಗೆ' ಎಂದು ಗುರುಗುಟ್ಟಿದ ಬೆಕ್ಕಣ್ಣ.

'ಇಂಥಲ್ಲೆಲ್ಲ ಸುಂದರಿಯರು ಕ್ಯಾಟ್‌ವಾಕ್ ಮಾಡಿದ್ರು ಅಂತಾರಲ್ಲ... ಕ್ಯಾಟ್ ಅಂದ್ರ ನಾವು. ಬೆಕ್ಕುಗಳ ಹೆಸರಿನಲ್ಲಿ ಇವರೇನು ವಾಕ್ ಮಾಡ್ತಾರಪ್ಪ ಅಂತ ನೋಡತಿದ್ದೆ' ಎಂದಿತು.

'ಓ... ಅದಾ... ನೀವು ಬೆಕ್ಕುಗಳು ಒಂದು ಸಣ್ಣ ಜಾಗದಾಗೂ ಸದ್ದಿಲ್ಲದೆ, ಆರಾಮಾಗಿ ಘನತೆಯಿಂದ ತಲೆ ಎತ್ತಿ ನಡೀತೀರಿ. ಅದೇ ಥರಾ ಹಂಗೆ ಕಿರಿದಾದ ಪ್ಯಾಸೇಜಿನಲ್ಲಿ ಆ ಸುಂದರಿಯರು ಸೊಂಟ ಬಳುಕಿಸಿ ನಡೀತಾರಲ್ಲ, ಅದಕ್ಕೇ ಕ್ಯಾಟ್ ವಾಕ್ ಅನ್ನೂ ಹೆಸರು' ಎಂದು ನಾನು ವಿವರಿಸಿದೆ.

'ಈ ಫ್ಯಾಷನ್ ಶೋಗಳು ಶುರುವಾಗೋದ-ಕ್ಕಿಂತ ಮುಂಚೆನೇ ಥಿಯೇಟರು, ಸೇತುವೆ, ಹಡಗು ಇಂಥಲ್ಲಿ ಬೆಕ್ಕುಗಳು ಹೋಗೂ ಅಷ್ಟೇ ಸಣ್ಣ ಪ್ಯಾಸೇಜ್ ಇರತಾವೆ. ಅಂಥಲ್ಲಿ ಹೋಗೂದಕ್ಕೆ ಕ್ಯಾಟ್‌ವಾಕ್ ಅಂತ ಕರೀತಿದ್ದರಂತೆ. ನೀ ಜರಾ ಕ್ಯಾಟ್‌ವಾಕ್ ಪದದ ಮೂಲ ಎಲ್ಲೈತಂತ ಓದು!' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

'ನನ್ನ ಪ್ರಕಾರ ಈ ಸಲ ನಿಜವಾದ ಕ್ಯಾಟ್‌ವಾಕ್ ಮಾಡಿದ್ದು ಒಬ್ಬಾಕಿ ಮಾತ್ರ' ಎಂದು ಮುಗುಮ್ಮಾಗಿ ಹೇಳಿತು.

'ಹೌದಾ... ಯಾರಲೇ ಅದು?' ಎಂದೆ.

'ಹೈದರಾಬಾದಿಗೆ ಬಂದಿದ್ದ ಮಿಸ್ ಇಂಗ್ಲೆಂಡ್ ಮಿಲ್ಲಾ ಮ್ಯಾಗಿ ನಮ್ಮನ್ನು ಮಾರಾಟದ ವಸ್ತುಗಳ ಹಂಗೆ ಕೆಟ್ಟದಾಗಿ ನಡೆಸಿಕೊಂಡರು ಅಂತ ಸ್ಪರ್ಧೆಯಿಂದ ದಿಟ್ಟತನದಿಂದ ಹೊರನಡೆದಳಲ್ಲ... ಆಕಿಯದು ನಿಜವಾದ ಕ್ಯಾಟ್‌ವಾಕ್! ನಾವು ಬೆಕ್ಕುಗಳು ನಮ್ಮ ಘನತೆ, ಸ್ವಾಭಿಮಾನಕ್ಕೆ ಧಕ್ಕೆ ಬಂದ್ರೆ ಒದ್ದು ಹೊರಹೋಗತೀವಿ. ಹಂಗೆ ಅವಳೊಬ್ಬಳೇ ನಿಜವಾದ ಕ್ಯಾಟ್‌ವಾಕ್ ಮಾಡಿದಾಕಿ' ಎಂದು ಬಲು ಮೆಚ್ಚಿಗೆಯಿಂದ ನುಡಿಯಿತು!

ಸಂಗತ

ಬಹುತ್ವ ಭಾರತ: ನಿರೀಕ್ಷೆ ಹುಸಿಯಾಗದಿರಲಿ

ಬಹುತ್ವದ ಇಟ್ಟಿಗೆ ಇರಿಸಿ ಕಟ್ಟಿದ ದೇಶವೆಂಬ ಕನಸಿನ ಸೌಧದೊಳಗೆ ಯಾವೊಂದು ವರ್ಗ ಅನಾದರಕ್ಕೆ ಒಳಗಾದರೂ ಇಡೀ ಸೌಧಕ್ಕೆ ಹಾನಿ

• ಸತೀಶ್ ಜಿ.ಕೆ. ತೀರ್ಥಹಳ್ಳಿ

'ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ನಿನ್ನ ಒಡವೆ ಎಂಬುದು ಜ್ಞಾನರತ್ನ' ಎಂಬ ಅಲ್ಲಮನ ವಚನವು ನಾನು, ತಾನು ಎಂಬ ಅಹಂಕಾರ, ಒಣಪ್ರತಿಷ್ಠೆಯಲ್ಲಿ ಹೊಯ್ದಾಡುತ್ತಿರುವ ಅಜ್ಞಾನದ ಕಣ್ಣು ತೆರೆಸುತ್ತದೆ.

ಅಸಲಿಗೆ ಜಗತ್ತೇ ಒಂದು ಪ್ರವಾಸಿ ತಾಣ. ನಾವೆಲ್ಲರೂ ಪ್ರವಾಸಿಗರಾಗಿ ಕೆಲವು ದಿನಗಳ ಮಟ್ಟಿಗೆ ಬಂದು ಹೋಗುವವರು. ಮನುಷ್ಯ ಯಾವುದೋ ಭೂಭಾಗದಲ್ಲಿ ಉಗಮವಾಗಿ ಮತ್ತೆಲ್ಲಿಗೋ ವಲಸೆ ಹೋಗಿ ನೆಲೆ ಕಂಡುಕೊಳ್ಳುತ್ತಾನೆ. ಹಾಗಾಗಿ, ಜಗತ್ತಿನ ಬಹುತೇಕ ದೇಶಗಳು ವಾಸ್ತವದಲ್ಲಿ ವಲಸಿಗರ ದೇಶಗಳೇ. ಭರತ ಭೂಮಿಯೂ ವಲಸಿಗರ ನೆಲವೇ.

ಎಲ್ಲರನ್ನೂ ಒಳಗೊಂಡು ಸಮೃದ್ಧದಿಂದ ಬೆಳೆದ ವಿಶಿಷ್ಟ ಭೂಖಂಡವಿದು. ಸ್ವಾತಂತ್ರ್ಯ ಹೋರಾಟದಲ್ಲಿ ಭೇದ ಎಣಿಸದೆ ಎಲ್ಲರ ಬೆವರು- ನೆತ್ತರು ಹರಿದಿದೆ. ಬಹುಬಗೆಯ ಕಲೆ, ಸಾಹಿತ್ಯ, ಸಂಗೀತ, ವಾಸ್ತುಶಿಲ್ಪದಲ್ಲಿ ಮಿಳಿತಗೊಂಡ 'ಬಹುತ್ವ ಭಾರತ' ನಮ್ಮದು. ಬಹುಪದರದ ಜನಸಮುದಾಯದ ಕನಸು, ಆಶಯ, ನಿರೀಕ್ಷೆಗಳ ಮಿಳಿತದಲ್ಲಿಯೇ ಸರ್ವಶ್ರೇಷ್ಠ-ಸಂವೇದನಾಶೀಲ ಮತ್ತು ಜೀವಪರ ಸಂವಿಧಾನ ಇಲ್ಲಿ ರೂಪುಗೊಂಡಿದೆ. ಸಂವಿಧಾನ ಜಾರಿಗೆ ಬಂದು ಮುಕ್ಕಾಲು ಶತಮಾನ ಕಳೆಯುವಷ್ಟರಲ್ಲಿ ಅಭಿವೃದ್ಧಿಯೆಡೆಗೆ ಹೊರಳಿಕೊಂಡ ದೇಶವು ಹಲವಾರು ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದೆ.

ಅಭಿವೃದ್ಧಿಶೀಲ ದೇಶವು ಉನ್ನತ ಧ್ಯೇಯೋದ್ದೇಶಗಳೊಂದಿಗೆ ಮುನ್ನಡೆಯುವಾಗಲೂ ಬಡತನ, ನಿರುದ್ಯೋಗ, ಕೃಷಿ ಬಿಕ್ಕಟ್ಟು, ಕಾರ್ಮಿಕರ ಸಮಸ್ಯೆ, ಜಾತಿ ಪಿಡುಗು, ಸಾಮಾಜಿಕ ತಾರತಮ್ಯ, ದೌರ್ಜನ್ಯ, ಗಲಭೆಗಳಿಗೆ ಇಂದಿಗೂ ಶಾಶ್ವತ ಪರಿಹಾರ ಕಂಡುಕೊಳ್ಳಲಾಗಿಲ್ಲ. ಹಸಿವು, ಅಸ್ಪೃಶ್ಯತೆ, ಲಿಂಗತಾರತಮ್ಯ, ಸಾಮಾಜಿಕ– ಆರ್ಥಿಕ ಅಸಮಾನತೆಯನ್ನು ಮೀರಿ ನಿಲ್ಲಲು ಸಾಧ್ಯವಾಗಿಲ್ಲ.


ಸಮ ಸಮಾಜದ ಆಶಯ ಈಗಲೂ ಕನಸಾಗಿರುವ ಸಂದರ್ಭದಲ್ಲಿ ಹಿರಿಯರು ಹೇಳುವಂತೆ 'ದಮನಿತರು, ಶೋಷಿತರು ತಿರುಗಿಬಿದ್ದರೆ ಅಧಿಕಾರಸ್ಥರು ಉಳಿಯುವುದಿಲ್ಲ. ಹಾಗಾಗಿಯೇ, ಅಧಿಕಾರ ಕಬಳಿಸಲು, ಕೈಯಲ್ಲಿರುವ ಅಧಿಕಾರ ಉಳಿಸಿಕೊಳ್ಳಲು ಅಥವಾ ಮುಂದುವರಿಸಲು ಅಧಿಕಾರಸ್ಥರು ಕಂಡುಕೊಂಡ ಯಶಸ್ವಿ ಕಾರ್ಯತಂತ್ರವೆಂದರೆ ಜನರ ಗಮನವನ್ನು ಬೇರೆಡೆಗೆ ತಿರುಗಿಸುವುದು, ಮೈಮರೆಸುವುದಾಗಿದೆ'.

ಜಗತ್ತು ಮುನ್ನಡೆದಂತೆಲ್ಲ ಇಲ್ಲಿಯೂ ಸಂವಿಧಾನದ ಬಲದಲ್ಲಿ ಅವಕಾಶವಂಚಿತರು ಬೆಳಕಿನೆಡೆಗೆ ಮುಖ ಮಾಡುವಂತಾಗಿರುವುದು ಸತ್ಯ. ಆದರೆ, ಮುಖ್ಯವಾಹಿನಿಗೆ ಮರಳುವ ಸಂಜ್ಞೆ ಮೂಡುವಷ್ಟರಲ್ಲಿ ಸಂತ್ರಸ್ತರನ್ನು ವ್ಯವಸ್ಥಿತವಾಗಿ ದಿಕ್ಕು ತಪ್ಪಿಸಲಾಗುತ್ತದೆ. ಜಾತಿ, ಧರ್ಮವನ್ನು ಮುನ್ನೆಲೆಗೆ ತಂದು ಪರಸ್ಪರರಲ್ಲಿ ದ್ವೇಷ ಬಿತ್ತಲಾಗುತ್ತಿದೆ. ತಳವರ್ಗಗಳನ್ನು ವಾಸ್ತವದ ಅರಿವಿನಿಂದ ವಿಮುಖಗೊಳಿಸುವ ಸಂಚಿಗೆ ಅತಿಹೆಚ್ಚು ಬಲಿಯಾಗುತ್ತಿರುವುದು ಯುವಶಕ್ತಿಯೇ.

ದ್ವೇಷಕ್ಕಿಂತ ದೇಶದ ಹಿತಕ್ಕಾಗಿ ಎಲ್ಲ ವರ್ಗದ ವಿಶ್ವಾಸ ಗಳಿಸಿಕೊಳ್ಳುವುದು ಮತ್ತು ಭೇದವೆಣಿಸದೆ ಒಮ್ಮತದಿಂದ ಅಭಿವೃದ್ಧಿಯ ಭಾಗವಾಗಿಸಿಕೊಳ್ಳುವುದು ಆದ್ಯತೆಯಾಗಬೇಕು. ಸಮಾಜವು ಯಾವುದೋ ಒಬ್ಬಿಬ್ಬ ಕಿಡಿಗೇಡಿಗಳ ಪ್ರಮಾದಕ್ಕೆ ಕ್ಷೋಭೆಗೊಳ್ಳದಷ್ಟು ಪ್ರಬುದ್ಧವಾಗಬೇಕು. ಎಳೆಯರಿಗೆ ಚರಿತ್ರೆಯ ಅರಿವು, ಮೌಲ್ಯಯುತ ಶಿಕ್ಷಣ ಮತ್ತು ಜಗತ್ತಿನ ವಿಶಾಲ ದರ್ಶನ ದಕ್ಕಬೇಕು.

ಯಾವುದೇ ದೇಶವೊಂದರ ನಾಗರಿಕರಲ್ಲಿ ಒಡಮೂಡಬೇಕಾದ ಸೌಹಾರ್ದ, ಸಮಗ್ರತೆ, ಸಹಬಾಳ್ವೆಯ ಮಟ್ಟವೇ ಆ ದೇಶದ ಉನ್ನತಿ-ಅವನತಿಯ ಅಳತೆಗೋಲು.

'ವಿಕಾಸಗೊಳ್ಳದ ಮೆದುಳು ಜಾತಿ, ಧರ್ಮದಲ್ಲಿ ನರಳುತ್ತದೆ. ದೇಶದ ವಿನಾಶಕ್ಕೆ ಅಷ್ಟು ಸಾಕು. ಜಾತಿ- ಧರ್ಮಗಳ ಆಧಾರದಲ್ಲಿ ಜನಸ್ತೋಮವು ಭುಗಿಲೇಳುವ ದೇಶವನ್ನು ನಾಶ ಮಾಡಲು ಬೇರಾವ ಶಸ್ತ್ರಾಸ್ತ್ರಗಳೂ ಬೇಕಾಗುವುದಿಲ್ಲ' ಎಂಬ ದಾರ್ಶನಿಕ ಲಿಯೊ ಟಾಲ್‌ಸ್ಟಾಯ್ ನುಡಿಬೆಳಕಲ್ಲಿ ಜನಜಾಗೃತಿ ಮೂಡಬೇಕು.



ಆದರೆ, ಅಂತರರಾಷ್ಟ್ರೀಯ ಮಾಧ್ಯಮಗಳ ಪ್ರಕಾರ, ದೇಶದ ಬಹುತೇಕ ಹಗೆ–ದ್ವೇಷ, ಕೋಮುಗಲಭೆಗಳು ಉದ್ದೇಶಪೂರ್ವಕ ಮತ್ತು ಪೂರ್ವ ಯೋಜಿತವಾಗಿವೆ. ಇಲ್ಲಿ ಸುಳ್ಳುಸುದ್ದಿ ಸೃಷ್ಟಿಸುವ ಕಾರ್ಖಾನೆಗಳಿವೆ. ಪ್ರಸಾರಕ್ಕೆ ವಾಹಕಗಳಿವೆ. ಗಲಭೆ ಪ್ರಚೋದನೆಯ ದುಷ್ಟಕೂಟಗಳೂ ಕ್ರಿಯಾಶೀಲವಾಗಿವೆ. ಕಾಲಾಂತರದಿಂದ ಅಮಾಯಕರ ಮೇಲೆ ಹೇರಿಕೊಂಡು ಬರಲಾದ ಅಸಮಾನತೆ, ಜಾತೀಯತೆ, ವರ್ಗ ಸಂಘರ್ಷ, ರಾಗದ್ವೇಷಗಳನ್ನು ಕಿತ್ತೊಗೆದು ಮನುಷ್ಯ ಧರ್ಮವನ್ನು ಮರುಸ್ಥಾಪಿಸಲು ಪ್ರಯತ್ನಿಸಿದ ಸಂತರು-ಸದ್ಗುಣಿಗಳನ್ನು ದೇವರು ಮಾಡಿ ಪ್ರತಿಮೆ ಕೆತ್ತಿಟ್ಟು ಕತ್ತಲ ಕೋಣೆಯಲ್ಲಿ ಕೂಡಿಹಾಕಲಾಗಿದೆ. ಇಲ್ಲವೇ ಫೋಟೊ ಮಾಡಿ ಗೋಡೆಗೆ ನೇತು ಹಾಕಲಾಗಿದೆ.

ಭಾವೈಕ್ಯದ ಬದುಕು ಕಲಿಸಿಕೊಟ್ಟವರ ನೀತಿ–ತತ್ವಗಳು ಪೂಜೆಗಷ್ಟೇ, ಪಾಲನೆಗಲ್ಲ ಎಂಬುದೇ ಧೋರಣೆ. ಹಾಗೆ ಒಮ್ಮೆ ದೇವರಾದರೆ ಮುಗಿಯಿತು; ಅವರೆಲ್ಲಾ ವಿಮರ್ಶಾತೀತರು. ಅವರ ತತ್ವಾದರ್ಶಗಳನ್ನು ಪ್ರಶ್ನಿಸುವ ಹಕ್ಕನ್ನು ಜನಸಾಮಾನ್ಯರಿಂದ ಕಸಿದುಕೊಳ್ಳಲಾಗುತ್ತದೆ.

ಬಹುತ್ವದ ಇಟ್ಟಿಗೆಗಳನ್ನು ಇರಿಸಿ ಕಟ್ಟಿದ ದೇಶವೆಂಬ ಕನಸಿನ ಸೌಧದೊಳಗೆ ಯಾವೊಂದು ವರ್ಗ ಅನಾದರಕ್ಕೆ ಒಳಗಾದರೂ ಅದರಿಂದ ಹಾನಿಯಾಗುವುದು ಇಡೀ ಸೌಧಕ್ಕೆ. ಹಾಗಾಗಿ, ಎಲ್ಲರ ಮನಗೆದ್ದು ಉನ್ನತಿಯೆಡೆಗೆ ಕೊಂಡೊಯ್ಯುವ ತಾಯ್ತನದ ಆಡಳಿತ- ನಾಯಕತ್ವ ಎಲ್ಲ ಕಾಲದ ಅಗತ್ಯ. ಸಂತಸ–ಸಂಕಟಗಳ ಹಿನ್ನೆಲೆ ಯಾವುದೇ ಇದ್ದರೂ ದೇಶಕ್ಕೆ ಬೇಕಿರುವುದು ಸಂಘರ್ಷವಲ್ಲ; ಸಹನೆಯ ಮಾರ್ಗ.

ವಾಚಕರ ವಾಣಿ

ವಿವಾದವನ್ನು ಎಲ್ಲೆಲ್ಲಿಗೋ ಒಯ್ಯುವುದು ಬೇಡ

ಸಾಹಿತಿ ಹಂಪ ನಾಗರಾಜಯ್ಯ ಅವರು ಕನ್ನಡ, ತಮಿಳು ಭಾಷೆಯ ಮೂಲ ಕುರಿತಂತೆ ಬರೆದ ಲೇಖನದಲ್ಲಿ ಸಿ. ರಾಜಗೋಪಾಲಾಚಾರಿ ಅವರು ಕ್ಷಮೆ ಕೇಳಿದ ಪ್ರಸಂಗವನ್ನು ಮೆಲುಕು ಹಾಕಿದ್ದಾರೆ. ಈಗ ನಟ ಕಮಲ್ ಹಾಸನ್ ಕ್ಷಮೆ ಕೇಳುವುದಿಲ್ಲ ಎನ್ನುತ್ತಿದ್ದಾರೆ.

ವಿವಿಧ ಭಾಷೆಗಳ ಉಗಮ ಕುರಿತಂತೆ ಡಿ.ಎನ್. ಶಂಕರ ಬಟ್ ಅವರು ತಮ್ಮ ಕೃತಿಗಳಲ್ಲಿ ಬರೆದಿದ್ದಾರೆ. 'ಇಗೋ ಕನ್ನಡ'ದಲ್ಲಿ ಪ್ರೊ.ಜಿ. ವೆಂಕಟಸುಬ್ಬಯ್ಯ ಕೂಡ ಕೆಲವೆಡೆ ಪ್ರಸ್ತಾಪಿಸಿದ್ದಾರೆ. ಈಗ ಕನ್ನಡವು ತಮಿಳಿನ ಸೋದರಭಾಷೆ ಎಂದರೂ ತಮಿಳು 'ದೊಡ್ಡಣ್ಣ' ಅಲ್ಲ ಎಂದು ಕೆಲವರು ಆಕ್ಷೇಪಿಸಬಹುದು. ಒಟ್ಟಿನಲ್ಲಿ ಎರಡೂ ಕಡೆಯವರು ಇದನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ತೆಗೆದುಕೊಳ್ಳುವುದು ಸರಿಯಲ್ಲ.

'ಥಗ್ ಲೈಫ್' ಎಂಬ ಹೆಸರೇ ಹೋರಾಟದ ಬದುಕನ್ನು ಸೂಚಿಸುತ್ತದೆ. ಕಮಲ್ ನಟನೆಯ ಆ ಶೀರ್ಷಿಕೆಯ ಸಿನಿಮಾವು ಕರ್ನಾಟಕದಲ್ಲಿ ಈಗ ಬಿಡುಗಡೆಯ ಸಮಸ್ಯೆ ಎದುರಿಸುತ್ತಿದೆ. ಅವರು ಒಬ್ಬ ವ್ಯಕ್ತಿಯಾಗಿ ಆಡಿದ ಮಾತೊಂದು ಆ ಚಿತ್ರದ ಪ್ರದರ್ಶನಕ್ಕೆ ಅಡ್ಡಿ ತರದಿರಲಿ. ಎಲ್ಲ ಸಿನಿಮಾಗಳನ್ನೂ ನೋಡುವ ಸಂಸ್ಕೃತಿ ಕರ್ನಾಟಕದ್ದು ಎಂಬುದನ್ನು ಅವರು ಮರೆಯಬಾರದು. ಒಂದು ತಪ್ಪು ಮಾತು ಈ ವಿವಾದವನ್ನು ಎಲ್ಲೆಲ್ಲಿಗೋ ತೆಗೆದುಕೊಂಡು ಹೋಗಬಾರದು. ನಟ ಕಿಶೋರ್ ಹೇಳಿರುವಂತೆ 'ಭಾವುಕರಾಗುವ ಅಗತ್ಯ ಇಲ್ಲ'.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಬ್ಯಾಂಕ್ ಉದ್ಯೋಗಿಗಳಿಗೆ ಸ್ಥಳೀಯ ಭಾಷೆ ಕಲಿಕೆ ಅಗತ್ಯ

ಕನ್ನಡ– ತಮಿಳು ಭಾಷೆ ಕುರಿತಂತೆ ಕಮಲ್ ಹಾಸನ್ ನೀಡಿರುವ ಹೇಳಿಕೆ ಬಗ್ಗೆ ಈಗ ಎಲ್ಲೆಡೆ ಚರ್ಚೆಯಾಗುತ್ತಿದೆ. ಈ ವಿವಾದದ ಅಬ್ಬರದಲ್ಲಿ ಭಾಷೆ ಕಾರಣದಿಂದ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕನ್ನಡಿಗರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳು ಮೂಲೆಗೆ ಸರಿದಿವೆ. ಆನ್‌ಲೈನ್ ವ್ಯವಹಾರ ತಿಳಿಯದ ಬಡವರು, ಬೀದಿಬದಿ ವ್ಯಾಪಾರಿಗಳು, ಕೂಲಿಕಾರ್ಮಿಕರು ಹಾಗೂ ಹಿರಿಯ ನಾಗರಿಕರು ಬ್ಯಾಂಕ್‌ಗಳಿಗೆ ಹೋಗುತ್ತಾರೆ. ಸ್ಥಳೀಯ ಭಾಷೆ ಮಾತನಾಡಲು ಬಾರದ ಬ್ಯಾಂಕ್ ಸಿಬ್ಬಂದಿ, ಈ ವರ್ಗದ ಗ್ರಾಹಕರ ಅನುಮಾನ ಬಗೆಹರಿಸಿ, ಬ್ಯಾಂಕಿಂಗ್ ಸೌಲಭ್ಯದ ಬಗ್ಗೆ ವಿವರಿಸಲು ಸಾಧ್ಯವೇ? ಗ್ರಾಮೀಣ ಭಾಗದ ಶಾಖೆಗಳಲ್ಲಿ ಇಂತಹ ಸಮಸ್ಯೆ ತೀವ್ರವಾಗಿವೆ.

ಕರ್ನಾಟಕದ ಪ್ರತಿಭಾವಂತ ಯುವಪೀಳಿಗೆಯು ವೈದ್ಯಕೀಯ, ಎಂಜಿನಿಯರಿಂಗ್ ಅಧ್ಯಯನದ ಬಗ್ಗೆ ತೋರುವ ಆಸಕ್ತಿಯನ್ನು ಬ್ಯಾಂಕಿಂಗ್ ವಲಯದ ಉದ್ಯೋಗಗಳ ಬಗ್ಗೆ ತೋರುವುದಿಲ್ಲ. ರಾಷ್ಟ್ರಮಟ್ಟದ ಬ್ಯಾಂಕಿಂಗ್ ನೇಮಕಾತಿ ಪರೀಕ್ಷೆ ಬರೆಯುವ ಕನ್ನಡಿಗರ ಸಂಖ್ಯೆ ಕಡಿಮೆ. ಇದನ್ನು ಪರಿಹರಿಸಲು ಜಿಲ್ಲಾ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ಬ್ಯಾಂಕಿಂಗ್ ಪರೀಕ್ಷೆ ಕುರಿತು ತರಬೇತಿ ಕೇಂದ್ರ ತೆರೆಯಬೇಕಿದೆ. ಆ ಮೂಲಕ ರಾಜ್ಯದಿಂದ ಹೆಚ್ಚಿನ ಸಂಖ್ಯೆಯ ಯುವಕ–ಯುವತಿಯರು ಬ್ಯಾಂಕ್‌ಗಳಿಗೆ ನೇಮಕವಾಗಲು ಪ್ರೋತ್ಸಾಹಿಸಬೇಕು. ರಾಜ್ಯದ ಬ್ಯಾಂಕ್‌ಗಳಿಗೆ ನೇಮಕವಾಗುವ ಹೊರ ರಾಜ್ಯದವರಿಗೆ ಇಂತಿಷ್ಟು ಅವಧಿಯಲ್ಲಿ ಸ್ಥಳೀಯ ಭಾಷೆ ಕಲಿಕೆಯನ್ನು ಕಡ್ಡಾಯ ಮಾಡಬೇಕು. ಬ್ಯಾಂಕ್ ಉದ್ಯೋಗವು ಸೇವೆ ಎಂಬುದನ್ನು ಪರೀಕ್ಷೆಯಲ್ಲಿ ತೇರ್ಗಡೆ ಆದ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿಯೇ ಅರಿವು ಮೂಡಿಸಬೇಕು. ಇಲ್ಲವಾದಲ್ಲಿ ಬ್ಯಾಂಕ್ ಸ್ಥಾಪಿಸಿದ ಮೂಲ ಉದ್ದೇಶವು ಭಾಷೆ ಕಾರಣದಿಂದ ವಿಫಲವಾಗುತ್ತದೆ.

ಟಿ. ಜಯರಾಂ, ಕೋಲಾರ

'ಲೋಕಾ' ದಾಳಿ: ಹಳೆ ಪ್ರಕರಣದ ವಿವರ ಬಹಿರಂಗಪಡಿಸಿ

ಲೋಕಾಯುಕ್ತ ಅಧಿಕಾರಿಗಳು ದಾಳಿ ವೇಳೆ ಭ್ರಷ್ಟರಿಗೆ ಸೇರಿದ ಲಕ್ಷಾಂತರ ನಗದು ಮತ್ತು ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗುತ್ತದೆ. ಆದರೆ, ಅದರ ನಂತರ ಆ ಸಂಪತ್ತು ಮತ್ತು ದಾಳಿಗೆ ಒಳಗಾದ ವ್ಯಕ್ತಿಗಳ ಬಗ್ಗೆ ಮುಂದೇನಾಯಿತು ಎಂಬುದು ತಿಳಿಯುವುದಿಲ್ಲ. ದಾಳಿ ನಡೆದ ನಂತರ ಹಲವಾರು ವರ್ಷಗಳವರೆಗೆ ನ್ಯಾಯಾಲಯದಲ್ಲಿ ಆ ಪ್ರಕರಣದ ವಿಚಾರಣೆ ನಡೆಯುತ್ತದೆ. ಕೊನೆಗೆ ಆ ವ್ಯಕ್ತಿಗಳಿಗೆ ಅವರ ಸ್ವತ್ತು ಹಿಂದಿರುಗಿಸುತ್ತಾರೆ. ಸರ್ಕಾರಿ ಅಧಿಕಾರಿಯಾಗಿದ್ದರೆ ಬಹುಪಾಲು ಸಂದರ್ಭಗಳಲ್ಲಿ ಅವರ ಸೇವೆಯನ್ನೂ ಮುಂದುವರಿಸುತ್ತಾರೆ ಎಂಬ ಮಾತಿದೆ.

ಆದ್ದರಿಂದ ಲೋಕಾಯುಕ್ತ ಅಧಿಕಾರಿಗಳು ಕಳೆದ ಎರಡು– ಮೂರು ವರ್ಷಗಳಿಂದ ನಡೆದ ದಾಳಿ, ಆ ನಂತರ ಆದ ಬೆಳವಣಿಗೆಗಳನ್ನು ಸಾರ್ವಜನಿಕವಾಗಿ ಪ್ರಕಟಿಸುವುದು ಒಳ್ಳೆಯದು. ಈ ರೀತಿ ಮಾಡಿದರೆ ಸಾರ್ವಜನಿಕರಿಗೆ ಸಂಸ್ಥೆಯ ಮೇಲೆ ನಂಬಿಕೆ ಹೆಚ್ಚುತ್ತದೆ. ಅಲ್ಲದೆ, ಭ್ರಷ್ಟ ಅಧಿಕಾರಿಗಳಿಗೂ ಎಚ್ಚರಿಕೆ ನೀಡಿದಂತಾಗುತ್ತದೆ.

ಕಡೂರು ಫಣಿಶಂಕರ್, ಬೆಂಗಳೂರು

ಕಳಪೆ ಫಲಿತಾಂಶಕ್ಕೆ ಶಿಕ್ಷಕರ ಕೊರತೆ ಕಾರಣ

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ 25ರಿಂದ 30 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕ ಇರುತ್ತಾರೆ. ಆ ರಾಷ್ಟ್ರಗಳು ಶಿಕ್ಷಣಕ್ಕೆ ಒತ್ತು ಕೊಟ್ಟು ವಿಜ್ಞಾನ, ತಂತ್ರಜ್ಞಾನ ಮತ್ತು ಕ್ರೀಡೆಯಂತಹ ಹಲವು ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿ ಇರುವುದಕ್ಕೆ ಅಲ್ಲಿ ಶಿಕ್ಷಣಕ್ಕೆ ನೀಡುತ್ತಿರುವ ಆದ್ಯತೆಯೇ ಕಾರಣ.

ಹಾಗಾಗಿ, ನಾವು ಕೂಡ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರನ್ನು ನೇಮಕ ಮಾಡಿದರೆ ಅವರ ಸರ್ವತೋಮುಖ ಬೆಳವಣಿಗೆ ಆಗುವುದರಲ್ಲಿ ಸಂದೇಹವಿಲ್ಲ. ಅರ್ಹತೆ ಹೊಂದಿದ ಶಿಕ್ಷಕರನ್ನು ಸರ್ಕಾರ ನೇಮಕ ಮಾಡುವುದರಿಂದ ಕೌಶಲಯುತ, ಗುಣಮಟ್ಟದ ಶಿಕ್ಷಣವು ಮಕ್ಕಳಿಗೆ ದೊರೆಯುತ್ತದೆ.

10ನೇ ತರಗತಿಯಾಗಲೀ ಅಥವಾ 12ನೇ ತರಗತಿಯಾಗಲೀ ಅಲ್ಲಿನ ಫಲಿತಾಂಶ ಕುಸಿತಕ್ಕೆ ಮೂಲ ಕಾರಣ ಶಿಕ್ಷಕರ ಕೊರತೆಯಾಗಿದೆ ಎಂದರೆ ತಪ್ಪಾಗದು. ಈ ಕೊರತೆ ತುಂಬುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು.

ಶಿವರಾಜ ಕಾಂಬಳೆ, ಮೂಡಲಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

• ಗಿರೀಶ ದೊಡ್ಡಮನಿ

ಮೈದಾನದಿಂದ ಮನದಂಗಳಕ್ಕೆ ಆಟದ ಸೊಬಗು

ಕ್ರಿಕೆಟ್ ಲೈವ್ ಹೇಗೆ?



ಐಪಿಎಲ್ ಕ್ರಿಕೆಟ್ ಟೂರ್ನಿಯ 18ನೇ ಆವೃತ್ತಿ ಇನ್ನೆರಡು ದಿನಗಳಲ್ಲಿ ಮುಕ್ತಾಯಗೊಳ್ಳಲಿದೆ. ಈ ಟೂರ್ನಿಯ ಪಂದ್ಯಗಳನ್ನು ಕೋಟಿ ಕೋಟಿ ಅಭಿಮಾನಿಗಳು ಟಿ.ವಿ ಮತ್ತು ಮೊಬೈಲ್‌ಗಳ ಮೂಲಕ ಕಣ್ತುಂಬಿಕೊಂಡಿದ್ದಾರೆ. ಪ್ರತಿಯೊಂದು ಪಂದ್ಯದ ಎಲ್ಲ ಆಯಾಮಗಳ ನೇರಪ್ರಸಾರವನ್ನು ಆನಂದಿಸಿದ್ದಾರೆ. ತಮ್ಮ ನೆಚ್ಚಿನ ಕ್ರಿಕೆಟಿಗರ ಆಟದ ಸೊಬಗನ್ನು ಆಸ್ವಾದಿಸಿದ್ದಾರೆ. ಆದರೆ ಮೈದಾನದಲ್ಲಿ ನಡೆಯುವ ಪಂದ್ಯವನ್ನು ಟಿ.ವಿ ಅಥವಾ ಮೊಬೈಲ್ ಪರದೆಗೆ ತರುವ ಪ್ರಕ್ರಿಯೆ ಮಾತ್ರ ಅನೂಹ್ಯವಾದದ್ದು. ಮುಂಬೈನಲ್ಲಿರುವ ಜಿಯೊಸ್ಟಾರ್ ಸ್ಪೋರ್ಟ್ಸ್ ಸ್ಟುಡಿಯೊಗಳಲ್ಲಿ ಒಂದು ಸುತ್ತು ಹಾಕಿ ಬಂದಾಗ ವಿಭಿನ್ನ ಲೋಕವೇ ತೆರೆದುಕೊಂಡಿತು. ಆಹ್ವಾನದ ಮೇರೆಗೆ ಈ ಸ್ಟುಡಿಯೋಗಳಿಗೆ 'ಪ್ರಜಾವಾಣಿ' ಭೇಟಿ ನೀಡಿದಾಗ ಕಂಡ ನೋಟ ಇಲ್ಲಿದೆ

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಜಿತೇಶ್ ಶರ್ಮಾ ಲಖನೌ ಸೂಪರ್‌ಜೈಂಟ್ಸ್ ಎದುರಿನ ಪಂದ್ಯದಲ್ಲಿ ವಿಜಯದ ಸಿಕ್ಸರ್ ಹೊಡೆಯುತ್ತಿದ್ದಂತೆಯೇ ಟೆಲಿವಿಷನ್ ಮತ್ತು ಸ್ಮಾರ್ಟ್‌ಫೋನ್ ಪರದೆಗಳ ಮೇಲೆ ಹಲವು ಭಾವ, ಭಂಗಿ, ವಿಜಯೋತ್ಸವಗಳು ಪಟಪಟನೆ ಮೂಡಿಬಂದವು. ಒಂದೆಡೆ ಜಿತೇಶ್ ತಮ್ಮ ಹೆಲ್ಮೆಟ್ ತೆಗೆದು ಗಾಳಿಯಲ್ಲಿ ಒಂದು ಸುತ್ತು ತಿರುಗಿಸಿದರು. ಇನ್ನೊಂದಡೆ ಆರ್‌ಸಿಬಿ ಡಗ್‌ಔಟ್‌ನಲ್ಲಿ ವಿರಾಟ್ ಕೊಹ್ಲಿ ಮತ್ತು ಕೃಣಾಲ್ ಪಾಂಡ್ಯ ಅಪ್ಪಿಕೊಂಡು ನರ್ತಿಸಿದ ದೃಶ್ಯ. ರಜತ್ ಪಾಟೀದಾರ್ ಸಹ ಆಟಗಾರರ ಕೈಕುಲುಕುತ್ತ ಸಂಭ್ರಮಿಸಿದ್ದೂ ಕಂಡಿತು. ಇನ್ನೊಂದೆಡೆ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಯುವತಿಯೊಬ್ಬರ ಸಡಗರದ ದೃಶ್ಯ, ಮತ್ತೊಂದೆಡೆ ವಿರಾಟ್ ಪತ್ನಿ, ಬಾಲಿವುಡ್ ನಟಿ ಅನುಷ್ಕಾ ಶರ್ಮಾ ಅವರ ಖುಷಿ, ಸೋತ ಲಖನೌ ತಂಡದ ಆಟಗಾರರ ಬೇಸರ, ಅಭಿಮಾನಿಗಳ ಹತಾಶೆ...

ಹೀಗೆ ಅದೆಷ್ಟೋ ದೃಶ್ಯ ತುಣುಕುಗಳು ಕ್ಷಣಮಾತ್ರದಲ್ಲಿ ನೋಡುಗರ ಮನಃಪಟಲಕ್ಕೆ ದಾಂಗುಡಿ ಇಟ್ಟುಬಿಟ್ಟವು. ಕ್ರೀಡಾಂಗಣದ ಆಯಕಟ್ಟಿನ ಜಾಗಗಳಲ್ಲಿರುವ ಕ್ಯಾಮೆರಾಗಳು ಏಕಕಾಲಕ್ಕೆ ಸೆರೆಹಿಡಿಯುವ ಈ ದೃಶ್ಯಗಳ ವಿವಿಧ ಕೋನಗಳನ್ನು ಕತ್ತರಿಸಿ, ಜೋಡಿಸಿ ಟಿ.ವಿ ಪರದೆಯ ಮೇಲೆ ಪ್ರದರ್ಶಿಸುವ ಕೆಲಸ ಕ್ಷಣಗಳಲ್ಲಿ ನಡೆದುಹೋಗುತ್ತದೆ.

ಇವೆಲ್ಲವೂ ನವೀನ ತಂತ್ರಜ್ಞಾನದಿಂದ ಸಾಧ್ಯವಾಗಿರುವುದು ಸತ್ಯ. ಆದರೆ ಪಂದ್ಯ ನಡೆಯುವ 'ಮೈದಾನದಿಂದ ನೋಡುಗರ ಮನದಂಗಳ'ದವರೆಗೂ ಇಂತಹದೊಂದು ತಂತ್ರಜ್ಞಾನ ನಿರ್ವಹಿಸುವ ನೂರಾರು ಕೈಗಳು ಇವೆ. ಟಿ.ವಿಯಲ್ಲಿ ನೋಡುವವರಿಗೆ ಆಟ ಮತ್ತು ವೀಕ್ಷಕ ವಿವರಣೆ ನೀಡುವ 'ತಾರಾಮಣಿ'ಗಳಷ್ಟೇ ಕಾಣುತ್ತಾರೆ. ಆದರೆ ಅವರನ್ನು ಮನೆಯಂಗಳಕ್ಕೆ ತಂದು ನಿಲ್ಲಿಸುವ ದೊಡ್ಡ ಸೈನ್ಯವೇ ಪರದೆಯ ಹಿಂದೆ ಕಾರ್ಯೋನ್ಮುಖವಾಗಿರುತ್ತದೆ.

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಪಂದ್ಯಗಳ ನೇರಪ್ರಸಾರವಂತೂ ಯಾವುದೇ ಯುದ್ಧಕ್ಕಿಂತ ಕಮ್ಮಿಯಲ್ಲ. ಮುಂಬೈನ ಲೋಯರ್ ಪರೇಲ್‌ನಲ್ಲಿರುವ ಜಿಯೊಸ್ಟಾರ್ ಸ್ಟುಡಿಯೊಗಳಲ್ಲಿ ಇರುವವರೆಲ್ಲರೂ ಕಾಲದೊಂದಿಗೆ ಪೈಪೋಟಿ ನಡೆಸುತ್ತಾರೆ. ಅದೊಂದು ವಿಭಿನ್ನ ಲೋಕವೇ ಸರಿ. ಅಲ್ಲಿ ಕಂಪ್ಯೂಟರ್, ಮಾನಿಟರ್ ಮತ್ತು ಮೈಕ್‌ಗಳ ಮುಂದೆ ಕುಳಿತವರೆಲ್ಲರೂ ಮೈಯೆಲ್ಲಾ ಕಣ್ಣಾಗಿ, ಕಿವಿಯಾಗಿ ಕಾರ್ಯನಿರ್ವಹಿಸುತ್ತಾರೆ. ಒಂದು ಸೂಜಿಮೊನೆಯಷ್ಟು ವ್ಯತ್ಯಾಸವಾದರೂ ಕ್ರಿಕೆಟ್ ನೇರಪ್ರಸಾರ ತುಂಡಾಗಿಹೋಗುವಂತಹ ಸೂಕ್ಷ್ಮ ಕಸುಬುದಾರಿಕೆ ಕೆಲಸ.

ನೇರಪ್ರಸಾರದ ಹಾದಿ ಹೇಗೆ?: ಐಪಿಎಲ್ ಪಂದ್ಯ ನಡೆಯುವ ಕ್ರೀಡಾಂಗಣದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) 30ಕ್ಕೂ ಹೆಚ್ಚು ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತವೆ. ಅದರೊಂದಿಗೆ ಅಧಿಕೃತ ಪ್ರಸಾರಕರಾದ ಸ್ಟಾರ್ ಸಂಸ್ಥೆಯ 4 ಕ್ಯಾಮೆರಾಗಳೂ ಇರುತ್ತವೆ. ಈ ಎಲ್ಲ ಕ್ಯಾಮೆರಾಗಳಲ್ಲಿ ಸೆರೆಯಾಗುವ ವಿವಿಧ ಆಯಾಮಗಳ ಪ್ರತಿಯೊಂದು ದೃಶ್ಯವೂ ಸ್ಟುಡಿಯೊದಲ್ಲಿರುವ ಬೃಹತ್ ಪರದೆಯ ಮೇಲೆ ಏಕಕಾಲಕ್ಕೆ ಮೂಡಿಬರುತ್ತವೆ. ಅಲ್ಲಿರುವ ಡೈರೆಕ್ಟರ್ ಮತ್ತು ಪ್ರೊಡ್ಯೂಸರ್ ಕ್ಷಣಮಾತ್ರದಲ್ಲಿ ದೃಶ್ಯಗಳನ್ನು ಆಯ್ಕೆ ಮಾಡಿಕೊಂಡು ತಮ್ಮ ಸಹೋದ್ಯೋಗಿಗಳಿಗೆ ಎಡಿಟ್ ಮತ್ತು ಪ್ರಸಾರಕ್ಕೆ ಸೂಚಿಸುತ್ತಾರೆ.

ಅಷ್ಟೇ ಚಾಕಚಕ್ಯತೆಯಿಂದ ತಂತ್ರಜ್ಞರು ಆ ದೃಶ್ಯಗಳನ್ನು ಆಯ್ಕೆ ಮಾಡಿಕೊಂಡು ಪ್ಯಾಕೇಜ್ ಮಾಡಿಕೊಡುತ್ತಾರೆ. ಇಷ್ಟೆಲ್ಲವೂ ಕಣ್ಣೆವೆ ಇಕ್ಕುವುದರಲ್ಲಿ ಆಗಿಹೋಗುತ್ತವೆ. ಬೌಂಡರಿ, ಸಿಕ್ಸರ್, ವಿಕೆಟ್, ಕ್ಯಾಚ್, ಸೆಲಬ್ರೇಷನ್, ಪ್ರೇಕ್ಷಕರ ಗ್ಯಾಲರಿಯ ವಿಶೇಷಗಳ ಗುಚ್ಛಗಳನ್ನು ಸಿದ್ಧಪಡಿಸಲೆಂದೇ ಪ್ರತ್ಯೇಕವಾದ ಸಿಬ್ಬಂದಿ ನಿರಂತರವಾಗಿ ಕಾರ್ಯನಿರ್ವಹಿಸುತ್ತಾರೆ. ಇವೆಲ್ಲದರ ಜೊತೆಗೆ ಪಂದ್ಯದ ಸ್ಕೋರ್‌ಕಾರ್ಡ್, ಅಂಕಿ ಸಂಖ್ಯೆಗಳ ಗ್ರಾಫಿಕ್ಸ್, ಚಾರ್ಟ್, ಆ್ಯನಿಮೇಷನ್ ಇತ್ಯಾದಿಗಳನ್ನು ಸಿದ್ಧಪಡಿಸುವ ಕಾರ್ಯ ಕೂಡ ಭರದಿಂದಲೇ ಸಾಗುತ್ತಿರುತ್ತದೆ. ಹಳೆ ದಾಖಲೆಗಳ ವಿಡಿಯೊ ತುಣುಕುಗಳು, ಅಂಕಿಸಂಖ್ಯೆಗಳನ್ನು ಒದಗಿಸುವ ಸಿಬ್ಬಂದಿಯೂ ಇಲ್ಲಿ ಪ್ರಸ್ತುತ. ಟೆಲಿವಿಷನ್ ಮತ್ತು ಆ್ಯಪ್ ಮೂಲಕ ಏಕಕಾಲದಲ್ಲಿ ಕ್ರಿಕೆಟ್ ನೇರಪ್ರಸಾರವಾಗುತ್ತದೆ. ಅಷ್ಟೇ ಅಲ್ಲ; ವೀಕ್ಷಕ ವಿವರಣೆಗಾರರು ಪಂದ್ಯಪೂರ್ವ, ಪಂದ್ಯ ನಡೆಯುವಾಗ ಮತ್ತು ನಂತರ ನೀಡಬೇಕಾದ ವಿವರಗಳು, ಕಾಮನ್ ಸ್ಕ್ರಿಪ್ಟ್‌ಗಳನ್ನೂ ಪ್ರೊಡಕ್ಷನ್ ಸಿಬ್ಬಂದಿಯು ಸಿದ್ಧಗೊಳಿಸುತ್ತದೆ.

ಮತ್ತೊಂದು ಹಂತದಲ್ಲಿ ಪಂದ್ಯದ ಪ್ರತಿಯೊಂದು ಎಸೆತ, ಆಯಾಮಗಳ ದೃಶ್ಯಾವಳಿಗಳು, ಆಡಿಯೊ ಮತ್ತು ದಾಖಲೆಗಳನ್ನು ಸಂಗ್ರಹಿಸಿಡುವ ಪ್ರಕ್ರಿಯೆ ನಡೆಯುತ್ತದೆ. ಅಧಿಕೃತ ಪ್ರಸಾರಕರಿಗೆ ಈ ಕಾಪಿಟ್ಟ ದಾಖಲೆಗಳು ಸ್ಥಿರಾಸ್ತಿಗಳಿದ್ದಂತೆ. ❖

ಬಹುಕೋಟಿ ಮೌಲ್ಯದ ವ್ಯವಹಾರ

ಬಿಸಿಸಿಐ ಇವತ್ತು ಶ್ರೀಮಂತ ಕ್ರೀಡಾ ಸಂಸ್ಥೆಗಳ ಸಾಲಿನಲ್ಲಿ ನಿಂತಿದೆ. ಅದಕ್ಕೆ ಪ್ರಮುಖ ಕಾರಣ ಕ್ರಿಕೆಟ್ ಮತ್ತು ಮಾಧ್ಯಮದ ಜೊತೆಯಾಟ. ಅದರಲ್ಲೂ ಐಪಿಎಲ್ ಶುರುವಾದ ಮೇಲೆ ಮಂಡಳಿಗೆ ಹಣದ ಪ್ರವಾಹವೇ ಹರಿದುಬರುತ್ತಿದೆ. 2022ರಲ್ಲಿ ಐದು ವರ್ಷಗಳಿಗೆ ಐಪಿಎಲ್ ಪ್ರಸಾರ ಹಕ್ಕನ್ನು ಬಿಸಿಸಿಐ ₹48,390 ಕೋಟಿ ಮೌಲ್ಯಕ್ಕೆ ನೀಡಿತ್ತು. ಅದರಲ್ಲಿ ಟೆಲಿವಿಷನ್ ಹಕ್ಕು ಸ್ಟಾರ್ ಇಂಡಿಯಾ ಹಾಗೂ ಡಿಜಿಟಲ್ ಪ್ರಸಾರದ ಹಕ್ಕುಗಳನ್ನು ವಯಕಾಮ್ 18 (ಜಿಯೋ) ಸಂಸ್ಥೆಗಳು ಬಿಡ್‌ನಲ್ಲಿ ಖರೀದಿಸಿದ್ದವು. ಹೋದ ವರ್ಷ ಉಭಯ ಸಂಸ್ಥೆಗಳು ವಿಲೀನಗೊಂಡಿವೆ.

ವೀಕ್ಷಕರ ಸಂಖ್ಯೆ
(ಟೂರ್ನಿಯ ಮೊದಲ ವಾರ)

137 ಕೋಟಿ ಡಿಜಿಟಲ್ ವೀಕ್ಷಣೆಗಳು | **35%** ಹೋದ ವರ್ಷಕ್ಕಿಂತ ವೀಕ್ಷಣೆ ಹೆಚ್ಚಳ ಪ್ರಮಾಣ

25.3 ಕೋಟಿ ಟಿವಿ ವೀಕ್ಷಕರು | **14%** ಹೋದ ಸಲಕ್ಕಿಂತ ವೀಕ್ಷಣೆ ಹೆಚ್ಚಳ ಪ್ರಮಾಣ


ಮುಂಬೈನಲ್ಲಿರುವ ಸ್ಟಾರ್ ಸ್ಪೋರ್ಟ್ಸ್ ವಾಹಿನಿಯ ಸ್ಟುಡಿಯೊ

'10 ತಿಂಗಳ ಪೂರ್ವಸಿದ್ಧತೆ'

'ಐಪಿಎಲ್ ಪ್ರಸಾರದ ಕಾರ್ಯ ಬಹಳ ಸೂಕ್ಷ್ಮವಾದ ಮತ್ತು ಕ್ಲಿಷ್ಟಕರ ಕಾರ್ಯ. ಅದಕ್ಕಾಗಿ ಹಲವಾರು ಪರಿಣತರು ಕಾರ್ಯನಿರ್ವಹಿಸುತ್ತಾರೆ. ಟೂರ್ನಿ ನಡೆಯುವುದು ಎರಡೇ ತಿಂಗಳಿರಬಹುದು. ಆದರೆ ಅದರ ಹಿನ್ನೆಲೆಯಲ್ಲಿ ನಾವು ಹತ್ತು ತಿಂಗಳು ಕಾರ್ಯನಿರ್ವಹಿಸುತ್ತೇವೆ'' ಎಂದು ಜಿಯೊಸ್ಟಾರ್ ಸ್ಪೋರ್ಟ್ಸ್ ಕಂಟೆಂಟ್ ಹೆಡ್ ಸಿದ್ಧಾರ್ಥ್ ಶರ್ಮಾ ವಿವರಿಸುತ್ತಾರೆ.

'ವರ್ಷದಿಂದ ವರ್ಷಕ್ಕೆ ನೋಡುಗರ ಸಂಖ್ಯೆ ಅಪಾರ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಅದರೊಂದಿಗೆ ಅವರ ನಿರೀಕ್ಷೆಗಳಿಗೆ ತಕ್ಕಂತೆ ಹೊಸತನ್ನು ನೀಡುವ ಪ್ರಯತ್ನ ನಮ್ಮದಾಗಿರುತ್ತದೆ. ಅದಕ್ಕಾಗಿ ಹೊಸ ಕಾನ್ಸೆಪ್ಟ್, ನವೀನ ತಂತ್ರಜ್ಞಾನ, ವೀಕ್ಷಕ ವಿವರಣೆಗಾರರ ಸಮೂಹ ಸಿದ್ಧಪಡಿಸುವುದು, ಪ್ರಾಯೋಜಕರು ಮತ್ತು ತಂತ್ರಜ್ಞರನ್ನು ಒಳಗೊಳ್ಳುವಿಕೆಯ ಪ್ರಕ್ರಿಯೆ ನಡೆಯುತ್ತದೆ. ಹರಾಜು ಪ್ರಕ್ರಿಯೆಯಲ್ಲಿ ಆಯ್ಕೆಯಾಗುವ ಹೊಸ ಪ್ರತಿಭೆಗಳನ್ನು ಪರಿಚಯಿಸುವ ಒಳನೋಟಗಳು ಇತ್ಯಾದಿ ಇರುತ್ತವೆ. ಕ್ರಿಕೆಟ್, ಐಪಿಎಲ್ ಮತ್ತು ಆಟಗಾರರ ವೃತ್ತಿ–ಜೀವನದ ಕತೆಗಳನ್ನು ಮನೆ, ಮನಗಳಿಗೆ ಮುಟ್ಟಿಸುವ ಕೆಲಸ ರೋಚಕವೂ ಹೌದು. ಕ್ಲಿಷ್ಟವೂ ಹೌದು' ಎಂದು ಸಿದ್ಧಾರ್ಥ್ ಹೇಳುತ್ತಾರೆ.

'ಪ್ರತಿ ವರ್ಷವೂ ಟೂರ್ನಿಯಲ್ಲಿ ಹೊಸ ತಾರೆಗಳು ಉದಯಿಸುತ್ತಾರೆ. ಉದಾಹರಣೆಗೆ ಈ ಬಾರಿ 14 ವರ್ಷದ ವೈಭವ್ ಸೂರ್ಯವಂಶಿ. ಅವರ ಸುತ್ತ ಅದೆಷ್ಟು ಕುತೂಹಲದ ನೋಟಗಳಿದ್ದವು. ಆ ಎಲ್ಲ ಕುತೂಹಲಭರಿತ ಪ್ರಶ್ನೆಗಳಿಗೆ ಉತ್ತರ ಕೊಡುವುದೇ ನಮ್ಮ ಕೆಲಸ. ಜನರ ಮನಸ್ಸಿನಲ್ಲಿ ವೈಭವ್ ಕುರಿತ ಪ್ರತಿಯೊಂದು ಭಾವನೆ, ಪ್ರಶ್ನೆಗಳಿಗೆ ತಕ್ಕಂತೆ ಮಾಹಿತಿಗಳನ್ನು ನೀಡುವುದು ದೊಡ್ಡ ಕೆಲಸ. ನಮಗೆ ಪ್ರೇಕ್ಷಕರೇ ಆಸ್ತಿ. ಅವರಿಲ್ಲದಿದ್ದರೆ ಆಟವಿಲ್ಲ. ಹಾಗಾಗಿ ಅವರಿಗೆ ನಮ್ಮ ಸಂಪೂರ್ಣ ಬದ್ಧತೆ' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಕನ್ನಡ ಕಾಮೆಂಟ್ರಿಯತ್ತ ಒಲವು

ದಶಕಗಳಿಂದಲೂ ಕ್ರಿಕೆಟ್ ಬೆಳೆಯುತ್ತಿರುವುದರ ಹಿಂದೆ ವೀಕ್ಷಕ ವಿವರಣೆಯ ಪಾತ್ರ ದೊಡ್ಡದು. ಇಂಗ್ಲಿಷರು ಶುರು ಮಾಡಿದ ಕ್ರಿಕೆಟ್ ವೀಕ್ಷಕ ವಿವರಣೆ ಪರಂಪರೆ ಈಗ ವೃತ್ತಿಯಾಗಿ ಬೆಳೆದುನಿಂತಿದೆ. ದಶಕಗಳ ಹಿಂದೆ ಬಾನುಲಿಯ ಮೂಲಕ ಪಂದ್ಯಗಳ ಕಾಮೆಂಟ್ರಿ ಕೇಳುವುದು ಒಂದು ಹವ್ಯಾಸವೇ ಆಗಿತ್ತು. ಆಕಾಶವಾಣಿ ವೀಕ್ಷಕ ವಿವರಣೆಯಲ್ಲಿ ನೆಚ್ಚಿನ ಆಟಗಾರರ ಸಾಧನೆಯನ್ನು ಆಸ್ವಾದಿಸಿ, ಮರುದಿನದ ಪತ್ರಿಕೆಗಳಲ್ಲಿ ಆ ಕ್ರಿಕೆಟಿಗರ ಚಿತ್ರಗಳನ್ನು ನೋಡಿ ಕತ್ತರಿಸಿ ತಮ್ಮ ಪುಸ್ತಕ, ಕೋಣೆಯ ಗೋಡೆಗಳಿಗೆ ಅಂಟಿಸಿಕೊಳ್ಳುತ್ತಿದ್ದ ಹಲವಾರು ಜನರಿದ್ದರು.

ಟೆಲಿವಿಷನ್ ಕ್ರಾಂತಿಯಾದಾಗ ಪಂದ್ಯಗಳ ನೇರಪ್ರಸಾರ ನೋಡುವ ಅವಕಾಶ ದೊರೆಯಿತು. ಆದರೆ ಟಿ.ವಿ ಮತ್ತು ಈಗ ಡಿಜಿಟಲ್ ಯುಗದಲ್ಲಿ ಕ್ರಿಕೆಟ್ ಕಾಮೆಂಟ್ರಿಯ ಮಹತ್ವ ಮಾತ್ರ ಮಾಸಿಲ್ಲ. ಬದಲಿಗೆ ಮತ್ತಷ್ಟು ಹೆಚ್ಚಾಗಿದೆ. ಮಾಜಿ ಕ್ರಿಕೆಟಿಗರಿಗೆ ಉದ್ಯೋಗ ನೀಡುವ ಕ್ಷೇತ್ರವೂ ಆಗಿದೆ.

ಐಪಿಎಲ್ ಕಾಮೆಂಟ್ರಿಯಂತೂ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದೆ. ಐಪಿಎಲ್ ಟೂರ್ನಿ 12 ಭಾಷೆಗಳಲ್ಲಿ ಪ್ರಸಾರವಾಗುತ್ತಿದೆ. ಅಷ್ಟೂ ಭಾಷೆಗಳಲ್ಲಿ ವೀಕ್ಷಕ ವಿವರಣೆ ನಡೆಯುತ್ತಿದೆ. ಟಿವಿಯಲ್ಲಿ ಇಂಗ್ಲಿಷ್, ಹಿಂದಿ ಜೊತೆಗೆ ಕನ್ನಡ, ತಮಿಳು, ತೆಲುಗು, ಮಲಯಾಳ, ಬಂಗಾಳಿ, ಮರಾಠಿ, ಗುಜರಾತಿ, ಹರ್ಯಾಣ್ವಿ, ಪಂಜಾಬಿ ಮತ್ತು ಭೋಜಪುರಿ ಭಾಷೆಗಳ ವೀಕ್ಷಕ ವಿವರಣೆ ಜನಪ್ರಿಯವಾಗಿವೆ.

150ಕ್ಕೂ ಹೆಚ್ಚು ವೀಕ್ಷಕ ವಿವರಣೆಗಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಅದರಲ್ಲಿ ಬಹುತೇಕರು ಮಾಜಿ ಕ್ರಿಕೆಟಿಗರು. ವೀಕ್ಷಕ ವಿವರಣೆಗಾರ ಒಂದು ತಂಡವು ಪಂದ್ಯ ನಡೆಯುವ ಕ್ರೀಡಾಂಗಣದ ಮೂಲಕ ಕಾರ್ಯನಿರ್ವಹಿಸುತ್ತದೆ. ಉಳಿದವರು ಸ್ಟುಡಿಯೊದಿಂದ ಕೆಲಸ ಮಾಡುತ್ತಾರೆ. ಕೆಲವು ಕ್ರಿಕೆಟಿಗರಂತೂ ತಮ್ಮ ಆಡುವ ದಿನಗಳಿಗಿಂತಲೂ ವೀಕ್ಷಕ ವಿವರಣೆ ಮೂಲಕ ಅಭಿಮಾನಿಗಳಿಗೆ ಹೆಚ್ಚು ಹತ್ತಿರವಾಗಿದ್ದಾರೆ.


ವೀಕ್ಷಕ ವಿವರಣೆಗಾರರಾದ ವಿಜಯ್ ಭಾರದ್ವಾಜ್ ಮತ್ತು ಅಖಿಲ್

ಸ್ಟಾರ್ ಸ್ಟುಡಿಯೊ ಪ್ರವಾಸದ ಸಂದರ್ಭದಲ್ಲಿ ಭೇಟಿಯಾದ ಕನ್ನಡದ ವೀಕ್ಷಕ ವಿವರಣೆಗಾರರಾದ ಜಿ.ಕೆ.ಅನಿಲ್ ಕುಮಾರ್, ಶ್ರೀನಿವಾಸಮೂರ್ತಿ, ಭರತ್ ಚಿಪ್ಲಿ ಮತ್ತು ವೇದಾ ಕೃಷ್ಣಮೂರ್ತಿ ತಮ್ಮ ಸಿದ್ಧತೆ ಮತ್ತು ಕೆಲಸದ ಕುರಿತು ಮಾಹಿತಿ ನೀಡಿದರು.

'ಪ್ರತಿ ಪಂದ್ಯಕ್ಕೂ ಮುನ್ನ ಬಹಳಷ್ಟು ಪೂರ್ವಸಿದ್ಧತೆ ಇರುತ್ತದೆ. ಸಂಸ್ಥೆಯವರು ಒದಗಿಸುವ ಮಾಹಿತಿಯ ಜತೆ ನಮ್ಮ ಶೈಲಿಯನ್ನೂ ಸೇರಿಸಿ ಸಿದ್ಧತೆ ನಡೆಸುತ್ತೇವೆ. ಈ ವೇಳೆ ಬೇರೆ ಬೇರೆ ರಾಜ್ಯಗಳ ತಂಡಗಳೊಂದಿಗೆ ಕೆಲಸ ಮಾಡುವುದರಿಂದ ಅಲ್ಲಿಯ ಆಟಗಾರರ ಬಗ್ಗೆ ಸ್ವಾರಸ್ಯಕರ ಮಾಹಿತಿಗಳು ಲಭಿಸುತ್ತವೆ. ಉದಯೋನ್ಮುಖ ಆಟಗಾರರ ಕುರಿತು ಮಾತನಾಡುವಾಗ ಈ ಮಾಹಿತಿಗಳು ಉಪಯುಕ್ತವಾಗುತ್ತದೆ. ಕೇಳುಗರ ಜ್ಞಾನಾರ್ಜನೆಯ ಹಸಿವು ಎಂದೂ ಮುಗಿಯುವುದಿಲ್ಲ. ಆದ್ದರಿಂದ ಕೇಳುಗರ ಹಸಿವನ್ನು ನೀಗಿಸಲು ನಾವು ಕೂಡ ಹೊಸದನ್ನು ಪ್ರಯತ್ನಿಸುತ್ತೇವೆ. ಮಾಹಿತಿ, ಮಾತಿನ ಶೈಲಿ, ಸೊಗಡು ಮತ್ತು ಹಾಸ್ಯಭರಿತ ಸಂಭಾಷಣೆಗಳಿಗೆ ಒತ್ತು ಕೊಡುತ್ತೇವೆ. ಧ್ವನಿಯ ಏರಿಳಿತಗಳು ಪಂದ್ಯದ ಸ್ಥಿತಿ–ಗತಿಗೆ ತಕ್ಕಂತೆ ಇರುವುದು ಮುಖ್ಯ. ನಮ್ಮ ಕಾಮೆಂಟ್ರಿಯನ್ನು ಕನ್ನಡದ ಕೇಳುಗರು ಸ್ವೀಕರಿಸಿದ್ದಾರೆ ಎಂಬುದೇ ಹೆಮ್ಮೆಯ ಸಂಗತಿ' ಎಂದರು.

ರಾಷ್ಟ್ರೀಯ

ಸ್ತನ ಕ್ಯಾನ್ಸರ್ ವಿರುದ್ಧವೂ ಗೆದ್ದಿರುವ 'ವಿಶ್ವ ಸುಂದರಿ'

ಪ್ರಜಾವಾಣಿ ವಾರ್ತೆ



ಕಾಳಜಿ ಕೊರತೆ ಅಥವಾ ಭಯದ ಕಾರಣದಿಂದಾಗಿ ಯಾವ ಮಹಿಳೆಯೂ ನಿರ್ಲಕ್ಷ್ಯಕ್ಕೆ ಒಳಗಾಗುವುದಿಲ್ಲ ಎಂಬುದನ್ನು ಖಾತ್ರಿಪಡಿಸುವುದು ನನ್ನ ಗುರಿ
ಒಪಾಲ್ ಸುಚಾತಾ ಚೌಂಗಶ್ರೀ

ಹೈದರಾಬಾದ್: ಪ್ರಸಕ್ತ ಸಾಲಿನ ವಿಶ್ವ ಸುಂದರಿ ಕಿರೀಟವನ್ನು ಮುಡಿಗೇರಿಸಿಕೊಂಡಿರುವ ಥಾಯ್ಲೆಂಡಿನ ಒಪಾಲ್ ಸುಚಾತಾ ಚೌಂಗಶ್ರೀ, ಈ ಹಿಂದೆ ಸ್ತನ ಕ್ಯಾನ್ಸರ್ ವಿರುದ್ಧವೂ ಹೋರಾಡಿದ್ದರು.

'ಅವರಿಗಿದ್ದ ಕ್ಯಾನ್ಸರ್ ಜೀವಕ್ಕೆ ಹಾನಿಕಾರಕವಾಗಿರದಿದ್ದರೂ ಕಾಯಿಲೆ ಪತ್ತೆಯಾದಾಗ ಸುಚಾತಾ ಭಾವನಾತ್ಮಕವಾಗಿ ಕುಗ್ಗಿ ಹೋಗಿದ್ದರು. ಆತಂಕ ಮನೆ ಮಾಡಿತ್ತು. ಭವಿಷ್ಯದ ದಿನಗಳ ಬಗ್ಗೆ ಅವರಲ್ಲಿ ಅನಿಶ್ಚಿತತೆಯ ಕಾರ್ಮೋಡ ಆವರಿಸಿತ್ತು' ಎಂದು ವಿಶ್ವ ಸುಂದರಿ ಸ್ಪರ್ಧೆ ಸಂಘಟಕರು ಹೇಳುತ್ತಾರೆ.

ಕ್ಯಾನ್ಸರ್ ವಿರುದ್ಧ ನಡೆಸಿದ ಹೋರಾಟ, ಅನುಭವಿಸಿದ ಯಾತನೆ, ಕಹಿ ಅನುಭವಗಳು ಅವರನ್ನು ಈ ಪ್ರತಿಷ್ಠಿತ ಸ್ಪರ್ಧೆಯ ಭಾಗವಾಗುವಂತೆ ಮಾಡಿತ್ತು. ಅಲ್ಲದೇ, ಸ್ತನ ಕ್ಯಾನ್ಸರ್ ಕುರಿತು ದೇಶದಾದ್ಯಂತ ಜಾಗೃತಿ ಮೂಡಿಸುವ ಆಂದೋಲನ 'ಒಪಾಲ್ ಫಾರ್ ಹರ್' ಕಾರ್ಯಕ್ರಮದ ಭಾಗವಾಗಲು ಪ್ರೇರಣೆ ನೀಡಿದೆ.

ಸ್ತನ ಕ್ಯಾನ್ಸರ್ ಕುರಿತು ಶಿಕ್ಷಣ ನೀಡುವುದು, ಪ್ರಾರಂಭಿಕ ಹಂತದಲ್ಲಿಯೇ ಪತ್ತೆ ಮಾಡಿ, ಚಿಕಿತ್ಸೆ ಪಡೆಯುವುದು ಹಾಗೂ ಕಾಯಿಲೆಯಿಂದ ಗುಣಮುಖರಾದವರ ಸಬಲೀಕರಣದಂತಹ ಕಾರ್ಯಗಳನ್ನು 'ಒಪಾಲ್ ಫಾರ್ ಹರ್'ನ ಅಡಿಯಲ್ಲಿ ಕೈಗೊಳ್ಳಲಾಗುತ್ತದೆ.

'ತಮಗೆ ಕ್ಯಾನ್ಸರ್ ಇರುವುದು ಪತ್ತೆಯಾದ ನಂತರ ಎಷ್ಟೊ ಮಹಿಳೆಯರು ಮೌನವಾಗಿಯೇ ನೋವು ಅನುಭವಿಸುತ್ತಾರೆ. ಕಾಯಿಲೆ ಬಗ್ಗೆ ಸಮಾಜದಲ್ಲಿರುವ ಕಳಂಕ, ಅರಿವಿನ ಕೊರತೆ ಅಥವಾ ಚಿಕಿತ್ಸೆ ಪಡೆಯಲು ಅಗತ್ಯವಿರುವಷ್ಟು ಆರ್ಥಿಕ ಶಕ್ತಿ ಇಲ್ಲದೇ ಇರುವುದು ಕಾಯಿಲೆ ಪೀಡಿತರು ನೋವು ಅನುಭವಿಸುವಂತೆ ಮಾಡುತ್ತದೆ ಎಂಬುದನ್ನು ಸುಚಾತಾ ಅರ್ಥ ಮಾಡಿಕೊಂಡಿದ್ದರು' ಎಂದೂ ಸಂಘಟಕರು ಹೇಳುತ್ತಾರೆ.

ಸ್ತನ ಕ್ಯಾನ್ಸರ್ ಯಾರಿಗೂ ಮತ್ತು ಯಾವ ವಯಸ್ಸಿನವರಿಗೂ ಬರಬಹುದು. ಇದು ಕಟು ವಾಸ್ತವ. ಹೀಗಾಗಿ, ಯುವತಿಯರು ಇದರ ಬಗ್ಗೆ ಅರಿವು ಹೊಂದಿರಬೇಕು ಎಂದು ಸುಚಾತಾ ಪ್ರತಿಪಾದಿಸುತ್ತಾರೆ.

'ಪಾಡ್‌ಕಾಸ್ಟ್‌ಗಳ ಮೂಲಕ ಕ್ಯಾನ್ಸರ್ ಕುರಿತು ಅರಿವು ಮೂಡಿಸುವುದು, ವಿವಿಧ ಆಸ್ಪತ್ರೆಗಳ ಸಹಕಾರದೊಂದಿಗೆ ಉಚಿತ ಸ್ತನ ಕ್ಯಾನ್ಸರ್ ಪತ್ತೆ ಶಿಬಿರಗಳ ಆಯೋಜನೆ, ಥಾಯ್ಲೆಂಡ್‌ನ ಆರೋಗ್ಯ ಸಚಿವರು, ಆರೋಗ್ಯ ಇಲಾಖೆಯ ಉನ್ನತ ಅಧಿಕಾರಿಗಳು ಹಾಗೂ ನ್ಯಾಷನಲ್ ಕ್ಯಾನ್ಸರ್ ಇನ್‌ಸ್ಟಿಟ್ಯೂಟ್‌ನ ವೈದ್ಯರನ್ನು ಭೇಟಿ ಮಾಡಿ, ನೀತಿ ನಿರೂಪಣೆಗೆ ಪ್ರಯತ್ನಿಸುವುದು 'ಒಪಾಲ್ ಫಾರ್ ಹರ್' ಕಾರ್ಯಕ್ರಮದ ಭಾಗವಾಗಿವೆ. ಈ ಉದ್ದೇಶಕ್ಕಾಗಿ ಅಗತ್ಯವಿರುವಷ್ಟು ನಿಧಿ ಸಂಗ್ರಹಿಸಲು ಕೂಡ ಅವರು ಶಕ್ತರಾಗಿದ್ದಾರೆ' ಎಂದು ಹೇಳುತ್ತಾರೆ.

'ಮುಸ್ಲಿಂ ವೋಟ್ ಬ್ಯಾಂಕ್‌ಗಾಗಿ 'ಸಿಂಧೂರ'ಕ್ಕೆ ಮಮತಾ ವಿರೋಧ'

ಕೋಲ್ಕತ್ತ (ಪಿಟಿಐ): 'ಮುಸ್ಲಿಮರ ವೋಟ್ ಬ್ಯಾಂಕ್‌ಗಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಆಪರೇಷನ್ ಸಿಂಧೂರ ಹಾಗೂ ವಕ್ಫ್ (ತಿದ್ದುಪಡಿ) ಕಾಯ್ದೆ ವಿರೋಧಿಸುತ್ತಿದ್ದಾರೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆರೋಪಿಸಿದರು.

ಪಕ್ಷದ ನಾಯಕರು ಹಾಗೂ ಕಾರ್ಯಕರ್ತರನ್ನು ಉದ್ದೇಶಿಸಿ ಭಾನುವಾರ ಮಾತನಾಡಿದ ಅವರು, 'ಇತ್ತೀಚೆಗೆ ಸಂಭವಿಸಿದ ಮುರ್ಷಿದಾಬಾದ್ ಗಲಭೆಯು ರಾಜ್ಯ ಸರ್ಕಾರಿ ಪ್ರಾಯೋಜಿತ ಕೃತ್ಯ' ಎಂದೂ ಆರೋಪಿಸಿದರು.

'ಆಪರೇಷನ್ ಸಿಂಧೂರ ವಿರೋಧಿಸುವ ಮೂಲಕ ಮಮತಾ ಅವರು ದೇಶದ ತಾಯಂದಿರು, ಸಹೋದರಿಯರನ್ನು ಅವಮಾನಿಸಿದ್ದಾರೆ. ಹೀಗಾಗಿ, 2026ರಲ್ಲಿ ನಡೆಯುವ ವಿಧಾನಸಭಾ ಚುನಾವಣೆಯಲ್ಲಿ ಮಮತಾ ಬ್ಯಾನರ್ಜಿ ಅವರಿಗೆ ಹಾಗೂ ತೃಣಮೂಲ ಕಾಂಗ್ರೆಸ್‌ಗೆ (ಟಿಎಂಸಿ) ತಾಯಂದಿರು, ಸಹೋದರಿಯರು ತಕ್ಕ ಪಾಠ ಕಲಿಸಲಿದ್ದಾರೆ' ಎಂದರು.

'ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ನಾಯಕರು ರಾಜಕೀಯ ಲಾಭಕ್ಕಾಗಿ ಆಪರೇಷನ್ ಸಿಂಧೂರ ಬಳಸಿಕೊಳ್ಳುತ್ತಿದ್ದಾರೆ' ಎಂದು ಮಮತಾ ಅವರು ಇತ್ತೀಚೆಗೆ ಆರೋಪಿಸಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ಭಾರತೀಯ ರೈಲ್ವೆಯು ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ರಿಯಾಯಿತಿ ನೀಡುವ ಸೌಲಭ್ಯವನ್ನು ಮತ್ತೆ ಆರಂಭಿಸಿದೆ ಎಂಬ ಪೋಸ್ಟ್ ಅನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಮೇ 21ರಿಂದ ಈ ಸವಲತ್ತು ಆರಂಭವಾಗಿದೆ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು.

✓ ಈ ಬಗ್ಗೆ ಹುಡುಕಾಡಿದಾಗ, ವಿಶ್ವಾಸಾರ್ಹವಲ್ಲದ ಕೆಲವು ವೆಬ್‌ಸೈಟ್‌ಗಳಲ್ಲೂ ಈ ವಿವರಗಳಿರುವುದು ಕಂಡುಬಂತು. ಆದರೆ, ಮಾಧ್ಯಮಗಳಲ್ಲಿ ಈ ಬಗ್ಗೆ ವರದಿಗಳಿರಲಿಲ್ಲ. ಕೇಂದ್ರ ಸರ್ಕಾರದ 2025–26ನೇ ಸಾಲಿನ ಬಜೆಟ್ ಪರಿಶೀಲಿಸಿದಾಗಲೂ ಯಾವುದೇ ವಿವರ ಸಿಗಲಿಲ್ಲ. ರೈಲ್ವೆ ಸಚಿವಾಲಯವು ಈ ಬಗ್ಗೆ ಘೋಷಣೆ ಮಾಡಿದೆಯೇ ಎಂದು ಪರಿಶೀಲಿಸಿದಾಗ 2020ರ ಮಾರ್ಚ್‌ನಲ್ಲಿ ಸಚಿವಾಲಯ ಬಿಡುಗಡೆ ಮಾಡಿದ್ದ ಪ್ರಕಟಣೆ ಸಿಕ್ಕಿತು. ಕೋವಿಡ್ ಹರಡುವುದನ್ನು ತಡೆಯುವುದಕ್ಕಾಗಿ ಹಿರಿಯ ನಾಗರಿಕರ ಪ್ರಯಾಣ ದರ ರಿಯಾಯಿತಿ ಸೇರಿದಂತೆ ಇನ್ನಿತರ ಕೆಲವು ರಿಯಾಯಿತಿಗಳನ್ನು ವಾಪಸ್ ಪಡೆಯುತ್ತಿರುವ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಆ ಬಳಿಕ ಐಆರ್‌ಸಿಟಿಸಿ ಪೋರ್ಟಲ್‌ನಲ್ಲಿ ಹಿರಿಯ ನಾಗರಿಕರಿಗೆ ಟಿಕೆಟ್ ಕಾಯ್ದಿರಿಸಲು ಮುಂದಾದಾಗ, ಸಾಮಾನ್ಯ ವರ್ಗದ ಪ್ರಯಾಣಿಕರಿಗೆ ಇದ್ದಷ್ಟೇ ಪ್ರಯಾಣ ದರವನ್ನು ತೋರಿಸಿತು. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಲೋಕಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗಿತ್ತು. ಆಗ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಪ್ರತಿಕ್ರಿಯಿಸುವಾಗ ಹಿರಿಯ ನಾಗರಿಕರ ರಿಯಾಯಿತಿ ಬಗ್ಗೆ ಮಾತನಾಡಿರಲಿಲ್ಲ. ಹಾಗಾಗಿ, ರಿಯಾಯಿತಿ ಸೌಲಭ್ಯವನ್ನು ಭಾರತೀಯ ರೈಲ್ವೆಯು ಮತ್ತೆ ಆರಂಭಿಸಲಿದೆ ಎಂಬುದು ಸುಳ್ಳು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಸಾರ್ಥಕವಾಗಿ ಬದುಕುವುದು ಹೇಗೆ?

ನುಡಿ ಬೆಳಗು



ದಾದಾಪೀರ್ ನವಿಲೇಹಾಳ್
ದಾವಣಗೆರೆ

ಹತ್ತು ಎಕರೆ ನೀರಾವರಿ ಜಮೀನಿನ ಮಾಲೀಕ, ಏಳು ಗಂಡು ಮಕ್ಕಳ ತಂದೆ ಕಡೆಗಾಲದಲ್ಲಿ ಯಾರಿಗೂ ಬೇಡವಾದ. ಸೊಪ್ಪು, ನಿಂಬೆ ಹಣ್ಣನ್ನು ಮಾರಿ ತನ್ನಷ್ಟೇ ವಯಸ್ಸಾದ ಹೆಂಡತಿಯೊಂದಿಗೆ ಬದುಕುವ ಸ್ವಾಭಿಮಾನದ ನಿರ್ಧಾರ ತಳೆದ. ಗಂಡ ಹೆಂಡತಿ ಪರಸ್ಪರ ದೂರುವುದು ನಿಂದಿಸುವುದು ತಪ್ಪಿದ ದಿನವಿಲ್ಲ. ಅಕ್ಕಪಕ್ಕದವರು ಏನಂದುಕೊಳ್ಳುತ್ತಾರೆ ಎಂಬ ಅಳುಕಿಲ್ಲ. ಜಗಳ ಜಗಳ ಜಗಳ. ಒಂದು ದಿನ ಅತಿರೇಕಕ್ಕೆ ತಲುಪಿ ಮುದುಕ 'ನೀನು ನಿನ್ನ ಸಂಸಾರ ಸಾಕಾಗಿದೆ' ಎಂದು ಹೆಂಡತಿಗೆ ಹೇಳಿ ಹೊರಟವನು ಮುಸ್ಸಂಜೆಯಾದರೂ ಮನೆಗೆ ಹಿಂತಿರುಗಲಿಲ್ಲ. ಎಷ್ಟು ಕಿತ್ತಾಡಿದರೂ ಸಂಜೆ ಮನೆಗೆ ಬಂದೇ ತೀರುತ್ತಿದ್ದ. ಬರುವಾಗ ಮರೆಯದೇ ಮಂಡಕ್ಕಿ ಮಿರ್ಚಿ ತಂದು ಎದುರು ಬದುರು ಕುಳಿತು ತಿನ್ನಲು ಹೇಳಿ ತಾನೂ ತಿನ್ನುತ್ತಿದ್ದ. ಇವತ್ತ್ಯಾಕೆ ಹೀಗೆ? ಚಿಂತಿತಳಾದ ಅಜ್ಜಿ ಎದುರು ಮನೆಯ ಹುಡುಗನಿಗೆ ಎಲ್ಲೋ ಹೋಗಿದ್ದ ಆ ಮುದುಕನನ್ನು ಕರೆದು ತರಲು ಹೇಳುತ್ತಾಳೆ.

ನಿತ್ಯವೂ ಇವರ ಕೋಳಿ ಜಗಳ ನೋಡುತ್ತಿದ್ದ ಹುಡುಗ 'ಅಯ್ಯೋ, ಹೋದ್ರೆ ಹೋದ ಬಿಡಜ್ಜಿ, ಕರ್ಕೊಂಡು ಬಂದ್ರೆ ಮತ್ತೆ ಕಿತ್ತಾಡ್ತೀರಾ' ಅಂದ. ಅಜ್ಜಿ ಹುಡುಗನ ಮುಖಕ್ಕೆ ತಿವಿದು, 'ಅವನು ಕಿತ್ತಾಡೋಕೇ ಬೇಕು ಕಣಲೇ, ಹುಡುಕಿ ಕರ್ಕೊಂಬಾ' ಅಂದಳು.

ಹುಡುಕುತ್ತಾ ಹೋದ ಹುಡುಗನಿಗೆ ಆ ಮುದುಕ ಖಬರಸ್ತಾನದಲ್ಲಿ ಕುಳಿತಿರುವ ಸುದ್ದಿ ತಿಳಿಯಿತು. ಗೋರಿಗಳ ನಡುವೆ ಹೆದರುತ್ತಾ ಹೆಜ್ಜೆಯಿಡುತ್ತಿದ್ದ ಹುಡುಗನಿಗೆ ಮೊನ್ನೆ ತಾನೇ ಮಣ್ಣು ಮಾಡಿದ್ದ ಗೋರಿ ಮೇಲೆ ನಿರುಮ್ಮಳವಾಗಿ ಖಾರ ಮಂಡಕ್ಕಿ ಮೇಯುತ್ತಾ ಕುಳಿತ ಮುದುಕ ಕಂಡ. 'ಅಜ್ಜಿ ಕರೀತಾಳೆ, ಮನೀಗೆ ಬರಾಕಂತೆ' ಅಜ್ಜನಿಗೆ ಅಂದ. 'ಯಾವುದಲೇ ಮನೆ? ಇದೇ ಕಣೋ ನನ್ ನಿಜವಾದ ಮನೆ' ಅಂದು ಹುಡುಗನನ್ನು ಹೋಗಲು ಹೇಳಿದ. ಏನನ್ನಿಸಿತೋ ಏನೋ ಹುಡುಗ ಮನೆ ಮುಟ್ಟುವ ಮೊದಲು ಅಜ್ಜ ಮನೆ ಸೇರಿದ್ದ. ಇದು ಜೀವನದ ಸೊಗಸು.

ಪ್ರೀತಿ ಕಲಹಗಳು ಏನಿದ್ದರೂ ಇಲ್ಲಿನ ಬದುಕನ್ನು ಪೂರ್ಣಗೊಳಿಸಬೇಕು. ನಾವು ಯಾಕಾಗಿ, ಎಲ್ಲಿಂದ ಬಂದಿದ್ದೇವೆ? ಕಡೆಗೆ ಎಲ್ಲಿಗೆ ಹೋಗುತ್ತೇವೆ... ಇಂಥ ಯಾವ ಪ್ರಶ್ನೆಗಳ ತಾಕಲಾಟವಿಲ್ಲದ ಅಮಾಯಕ ಜೀವಗಳಿಗೆ ಇಲ್ಲಿನ ಬಂಧನವೂ ಬೇಕು, ಇಲ್ಲಿಂದ ಬಿಡುಗಡೆಯೂ ಬೇಕು. ಅವೆಲ್ಲವೂ ತಾನಾಗಿ ಆಗಬೇಕು, ಆಗುವುದಕ್ಕೆ ಬಿಡಬೇಕು. ಡೊಂಕು ಡೊಂಕಾದ ಬದುಕಿನ ಹಾದಿಯನ್ನು ನೆಟ್ಟಗೆ ಮಾಡುವ ಪ್ರಯತ್ನವೇ ಅನೇಕ ಸಲ ಆತಂಕಕ್ಕೆ ದೂಡಬಹುದು. ಕೆಲವೊಮ್ಮೆ ಏನೂ ಮಾಡದೆಯೇ ಬಾಳು ಸಲೀಸಾಗಬಹುದು.

ಇಲ್ಲಿನ ಬದುಕನ್ನು ಸಾರ್ಥಕವಾಗಿ ಬದುಕಬೇಕು. ಅದು ಸಾಧ್ಯವಾಗುವುದು ಹಣದಿಂದಲ್ಲ, ಅಂತಸ್ತಿನಿಂದಲ್ಲ, ಅಧಿಕಾರದಿಂದಲ್ಲ, ಹಿರಿತನದಿಂದಲ್ಲ, ಜ್ಞಾನದಿಂದಲೂ ಅಲ್ಲ. ಅವೆಲ್ಲವುಗಳನ್ನು ಬಳಸಿ ಸಹಜೀವಿಗಳ ಸಂಕಟವನ್ನು ಕುಗ್ಗಿಸುವುದರಿಂದ; ನೆರೆಹೊರೆಯವರ ಹಿಗ್ಗನ್ನು ಎತ್ತರಿಸುವುದರಿಂದ. ಇದು ಇಲ್ಲಿ ಸಲ್ಲುವ ಬಗೆ. ನಮ್ಮ ಬದುಕು, ನಡವಳಿಕೆ ಬಯಲ ಗಾಳಿಯಂತೆ ನಮ್ಮನ್ನೂ ಇತರರನ್ನೂ ಕಾಪಾಡುವ ಪ್ರಾಣವಾಯುವಿನಂತಿರಬೇಕು. ಕಾಡ ಮೂಲಕವೇ ಪಥ ಆಗಸಕ್ಕೆ ಅನ್ನುವ ಹಾಗೆ ಕಷ್ಟನಿಷ್ಠುರಗಳನ್ನು ದಾಟಿಯೇ ಅನಂತ ಸುಖದ ಮೂಲವನ್ನು ಆತುಕೊಳ್ಳಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಸೋಮವಾರ ಜೂನ್ 2, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಸಪ್ತಮಿ ಗಂ. 20-36 ನಕ್ಷತ್ರ: ಮಘಾ ಗಂ. 22-56 ಯೋಗ: ವ್ಯಾಘಾತ ಗಂ. 8-20 ಕರಣ: ಗರ ಗಂ. 08-12, ವೃಷಭ ಮಾಸದ 19 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-06 **ಸೂರ್ಯಾಸ್ತ:** 06-51
ಮುಸ್ಲಿಂ ದಿನಾಂಕ: 05 ಜುಲ್‌ಹಿಜಾ
ಅದೃಷ್ಟ ಸಂಖ್ಯೆ: 1, 6

ಮೇಷ: ಯಾವುದೇ ರೀತಿಯ ಒಪ್ಪಂದಗಳನ್ನು ಮಾಡಿಕೊಳ್ಳದಿರಲು ತೀರ್ಮಾನಿಸುವುದು ಲೇಸು. ದೇವರಲ್ಲಿನ ಶ್ರದ್ಧಾ ಭಕ್ತಿ ಅಧಿಕಗೊಳ್ಳಲಿದೆ. ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಳ್ಳುವಿರಿ.

ವೃಷಭ: ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ. ಕೌಶಲವನ್ನು ತೋರಲು ಹೆಚ್ಚಿನ ಅವಕಾಶಗಳು ಸಿಗಲಿವೆ. ತೆರಿಗೆಗೆ ಸಂಬಂಧಿತ ಕೆಲಸಗಳೆಲ್ಲವನ್ನೂ ಪೂರ್ಣಗೊಳಿಸಲು ಪ್ರಯತ್ನಿಸಿ.

ಮಿಥುನ: ಆಫೀಸಿನಲ್ಲಿಂದು ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವಿರಿ. ಸಮಯ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳುವಿರಿ. ಉತ್ಸಾಹದಿಂದ ಕಾರ್ಯ ಪ್ರವೃತ್ತರಾಗುವಿರಿ.

ಕರ್ಕಾಟಕ: ಸುಗಂಧ ದ್ರವ್ಯಗಳ ವ್ಯಾಪಾರದಿಂದ ಲಾಭ ಪಡೆಯುವಿರಿ. ಧೈರ್ಯದಿಂದ ಮುನ್ನಡೆದಲ್ಲಿ ಕಾರ್ಯಸಾಧನೆಯಾಗುತ್ತದೆ. ರಾಜಕೀಯದಲ್ಲಿರುವ ಮಹಿಳೆಯರು ಬಲಾಢ್ಯರಾಗಿ ಅಧಿಕಾರ ಪಡೆಯುವಂತಾಗಲಿದೆ.

ಸಿಂಹ: ಧಾರ್ಮಿಕವಾಗಿ ಇರುವವರಿಗೆ, ವೇದಾಧ್ಯಯನದಲ್ಲಿ ತೊಡಗಿರುವವರಿಗೆ ಇಂದು ಮಂತ್ರಸಿದ್ಧಿ ಆಗಬಹುದು. ಬೆಳ್ಳಿ ವಸ್ತುಗಳ ಮಾರಾಟಗಾರರು ಹೆಚ್ಚಿನ ಆದಾಯ ಗಳಿಸುವಿರಿ. ಮಕ್ಕಳಿಂದ ಅನಾವಶ್ಯಕ ಖರ್ಚು ಸಂಭವಿಸಲಿದೆ.

ಕನ್ಯಾ: ಮನೆಯಲ್ಲಿ ಸಂತೋಷ ತರುವಂತಹ ಶುಭ ಸಮಾರಂಭಗಳು ನಡೆಯುವುದು. ಎಲ್ಲವನ್ನೂ ಕಷ್ಟಪಟ್ಟು ಅಥವಾ ಇತರರ ಸಹಾಯದಿಂದ ಸಂಪಾದಿಸಿಕೊಳ್ಳಬೇಕಾಗುತ್ತದೆ. ಮಾನಸಿಕ ಖಿನ್ನತೆಯನ್ನು ದೂರಮಾಡಿ.

ತುಲಾ: ಹೊರ ದೇಶದಲ್ಲಿ ಉದ್ಯೋಗದ ಅನ್ವೇಷಣೆ ಮಾಡುವುದಕ್ಕೆ ಒಳ್ಳೆಯ ದಿನ. ರಾಜಕೀಯ ವ್ಯಕ್ತಿಗಳು ಇಂದು ಸಾಮಾಜಿಕ ಕಾರ್ಯಕ್ರಮದಿಂದ ಮತ್ತು ಮಾಧ್ಯಮದಿಂದ ದೂರ ಉಳಿಯುವ ಬಗ್ಗೆ ತೀರ್ಮಾನಿಸುವುದು ಒಳ್ಳೆಯದು.

ವೃಶ್ಚಿಕ: ಪ್ರಯಾಣ ಅಂದುಕೊಂಡಂತೆ ಸುಗಮವಾಗಿರುವುದಿಲ್ಲ, ಜೋಪಾನವಾಗಿರಿ. ಹಿಡಿತಕ್ಕೆ ಸಿಕ್ಕದೆ ಇರುವ ಕೆಲಸಗಳನ್ನು ಸಮರ್ಥವಾಗಿ ಅರ್ಥೈಸಿಕೊಂಡು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗುವಿರಿ.

ಧನು: ಯಾವುದೇ ಕಾರಣಕ್ಕೂ ಸಾಲದ ರೂಪದಲ್ಲಿ ಹಣ ತೆಗೆದುಕೊಳ್ಳುವುದು ಸರಿಯಲ್ಲ. ಕಾರ್ಯದೊತ್ತಡ ಸದ್ಯಕ್ಕೆ ಕಡಿಮೆಯಾಗಿರುವಂತೆ ತೋರಿ ಮನಸ್ಸಿಗೆ ನಿರಾಳ. ರೈತರು ತಮ್ಮ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವಿರಿ.

ಮಕರ: ಸ್ವಂತ ಪ್ರಯತ್ನದಿಂದ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಕಾರ್ಯ ನಿರ್ವಹಿಸುವ ಸದವಕಾಶ ಈ ದಿನ ಪ್ರಾಪ್ತಿಯಾಗಲಿದೆ. ಸದಾ ಕಾಲ ನಿಮ್ಮ ಸಕಾರಾತ್ಮಕ ನಡವಳಿಕೆಗಳಿಂದಾಗಿ ಲಾಭ ಕಂಡುಕೊಳ್ಳಲಿದ್ದೀರಿ.

ಕುಂಭ: ನಿಮ್ಮ ಅಭಿವೃದ್ಧಿಯನ್ನು ಸಹಿಸಲಾಗದ ಜನರ ಮಧ್ಯದಲ್ಲಿ ಜೀವನ ನಡೆಸಬೇಕಾಗುತ್ತದೆ. ಕೃಷಿಗೆ ಹೆಚ್ಚಿನ ಬಂಡವಾಳ ಹೂಡುವಂತೆ ಮಗನಿಂದ ಒತ್ತಾಯ ಹೆಚ್ಚಲಿದೆ. ನಿಮ್ಮ ದಾಂಪತ್ಯ ಜೀವನ ಸುಖಮಯವಾಗಿರುತ್ತದೆ.


ಮೀನ: ಹೊಸ ಕಟ್ಟಡ ನಿರ್ಮಾಣ ಕಾರ್ಯಗಳ ಒಪ್ಪಂದ ಏರ್ಪಟ್ಟು ಬಹಳ ಸಂತೋಷವಾಗುವುದು. ಮಾರ್ಗದರ್ಶನಕ್ಕೆ ಕೊರತೆ ಇರುವುದಿಲ್ಲ. ಮನೆಯಲ್ಲಿ ಹಣಕಾಸಿನ ವಿಷಯದಲ್ಲಿ ಚರ್ಚೆ ನಡೆಸಿ ತೀರ್ಮಾನ ತೆಗೆದುಕೊಳ್ಳಿರಿ.

ಪದಬಂಧ 6061

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉತ್ಪಾದಕನಿಗೆ ಬೇಕಾದ ನೀರು (3)
3.ಇದು ವಾಸ್ತವವಲ್ಲ!ನಸುಕಿನಲ್ಲಿ ಬಿದ್ದ ಸ್ವಪ್ನ (3)
4.ಮಡಿವಂತನಿಗೆ ಬೇಕಾದ ಮಣ್ಣಿನ ಪಾತ್ರೆ (3)
6.ಆತ ವಿಚಾರಿಸಿದ್ದು ರಾಮನ ಹಿರಿ ಮಗನ ಕ್ಷೇಮ! (3)
7.ಕವಾಡಿಗನದ್ದೂ ಇದೇ ಸಂಪ್ರದಾಯವಂತೆ (3)
9.ಪಾಪ! ಇನ್ನೂ ಕರುವಲ್ಲವೇ ಅದಕ್ಕೇ ಈ ದಯೆ (3)
11.ಸೂಕ್ಷ್ಮವಾದುದನ್ನು ಹೀಗೆ ಹೇಳಿ (3)
13.ಹೇಳಿದ ದಿನದೊಳಗೇ ಬಂದನಲ್ಲ, ಈ ಮಂತ್ರಿ! (3)
15.ಪ್ರವಾಸದಲ್ಲಿ ಸಿಕ್ಕಿದವರು ತತ್ವಜ್ಞಾನಿಯಂತೆ! (3)
17.ಲವಂಗ ತರದೇ ಸತಾಯಿಸಿಬಿಟ್ಟನಲ್ಲ ಈ ದುರಾಚಾರಿ! (3)
18. ವರ್ತಮಾನವನ್ನು ತಿಳಿಸುವ ವ್ಯಾಪಾರಿ (3)
19.ವಸತಿಹತ್ತಿರ ಬಂದಾಗ ಮುನಿದು ತಿರುಗಿಬಿಟ್ಟಳಲ್ಲಾ ಈ ಉಪಪತ್ನಿ (3)

ಮೇಲಿಂದ ಕೆಳಕ್ಕೆ
1.ಆ ಕೂಸು ಕುಳಿತಿದ್ದು ಈ ಮರಳ ಮೇಲೆಯೇ (3)
2.ಕಮಂಡಲ ಹಿಡಿದವ ನೀಡಿದ ತಾವರೆ (3)
3.ಕರವನ್ನು ಕಡಿಯಲು ಬಂದಿದೆಯಲ್ಲಾ ಈ ಭಲ್ಲೂಕ! (3)
5.ಹೆಸರು ಹೇಳದೇ ಸಿಡಿಸಿ ಬಿಟ್ಟನಲ್ಲಾ ಈ ರಾಡಿಯನ್ನು! (3)
7.ವಾಗುದ್ಧವೆಲ್ಲಾ ಮುಗಿದ ಮೇಲೆ ನೀಡಿದ ವಚನ (3)
8.ಕೆನ್ನೆ ಮೇಲೇ ನೆತ್ತರು ಕಾಣುತ್ತಿದೆಯಲ್ಲ! (3)
9. ಮುಸಲ್ಮಾನರ ಪ್ರಾರ್ಥನಾ ಸ್ಥಳ (3)
10.ದನಕ್ಕಾಗಿಯೇ ನಡೆದ ಯುದ್ಧ! (3)
12.ಅಧಿಕಕ್ಕೊಂದು ಪರ್ಯಾಯ ಪದ (3)
14.ವಾದ್ಯ ನುಡಿಸುವವನು ಇಲ್ಲಿದ್ದಾನೆ (3)
15.ಪ್ರತಿಯೊಳಗೆ ಕಾಣಿಸಿದ ಏಳಿಗೆ (3)
16.ದವಸವನ್ನೆಲ್ಲಾ ತಂದ ದಿನ (3)



6060ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮತಿಹೀನ 3.ವರಮಾನ 5.ಗಗನ 7.ವಿರಹ 9.ಬಾಲಕ 10.ಪ್ರಭವ 11.ಬಯಕೆ 12.ನಯನ 14.ಕಲಭ 16.ಮಾನ್ಯತೆ 18.ಕಳೆಬರ 19.ನೆರೆಮನೆ

ಮೇಲಿಂದ ಕೆಳಕ್ಕೆ:
1.ಮನವಿ 2.ನಗ 3.ವನ 4.ನಡುಕ 6.ಗಹ್ವರ 8.ಹಯವದನ 9.ಬಾಲಬಡುಕ 12.ಅನನ್ಯ 13.ನರ್ತಕ 15.ಭಜನೆ 16.ಮಾರ 17.ತೆನೆ

ಸುಡೊಕು 6445

9		7						
	6		4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8				
6		4		9		1		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6444 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಎಫ್‌ಪಿಐ: ಮೇನಲ್ಲಿ ₹19 ಸಾವಿರ ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ವಿದೇಶಿ ಹೂಡಿಕೆದಾರರು ದೇಶದ ಷೇರುಪೇಟೆಯಲ್ಲಿ ಮೇ ತಿಂಗಳಲ್ಲಿ ಒಟ್ಟು ₹19,860 ಕೋಟಿ ಹೂಡಿಕೆ ಮಾಡಿದ್ದಾರೆ.

ದೇಶದ ಆರ್ಥಿಕತೆಯ ಮೂಲಭೂತ ಅಂಶಗಳು ಚೆನ್ನಾಗಿರುವುದು ಇದಕ್ಕೆ ಒಂದು ಕಾರಣ ಎಂದು ತಜ್ಞರು ಹೇಳಿದ್ದಾರೆ. ವಿದೇಶಿ ಹೂಡಿಕೆದಾರರು ಏಪ್ರಿಲ್‌ನಲ್ಲಿ ₹4,223 ಕೋಟಿ ಹಣ ತೊಡಗಿಸಿದ್ದರು. ಇದಕ್ಕೂ ಮೊದಲು ಅವರು ಮಾರ್ಚ್‌ನಲ್ಲಿ ₹3,973 ಕೋಟಿ, ಫೆಬ್ರುವರಿಯಲ್ಲಿ ₹34,574 ಕೋಟಿ ಹಾಗೂ ಜನವರಿಯಲ್ಲಿ ₹78,027 ಕೋಟಿ ಹಿಂಪಡೆದಿದ್ದರು.

ವಿದೇಶಿ ಹೂಡಿಕೆದಾರರು ಮುಂದಿನ ದಿನಗಳಲ್ಲಿಯೂ ಭಾರತದಲ್ಲಿ ಹಣತೊಡಗಿಸುವುದನ್ನು ಮುಂದುವರಿಸುವ ಸಾಧ್ಯತೆ ಇದೆ. ಆದರೆ, ಮಾರುಕಟ್ಟೆ ಸೂಚ್ಯಂಕಗಳು ಹೆಚ್ಚಿನ ಮಟ್ಟವನ್ನು ತಲುಪಿದಂತೆಲ್ಲ ಅವರು ಒಂದಿಷ್ಟು ಷೇರುಗಳ ಮಾರಾಟಕ್ಕೆ ಮುಂದಾಗಬಹುದು ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಎಟಿಎಫ್, ಎಲ್‌ಪಿಜಿ ದರ ಇಳಿಕೆ



ನವದೆಹಲಿ (ಪಿಟಿಐ): ವಿಮಾನಗಳಲ್ಲಿ ಬಳಸುವ ಇಂಧನ (ಎಟಿಎಫ್) ದರವನ್ನು ಶೇಕಡ 3ರಷ್ಟು ಕಡಿಮೆ ಮಾಡಲಾಗಿದೆ. ಅಲ್ಲದೆ, 19 ಕೆ.ಜಿ. ತೂಕದ ವಾಣಿಜ್ಯ ಬಳಕೆ ಅಡುಗೆ ಅನಿಲ ಸಿಲಿಂಡರ್ ದರವನ್ನು ₹24ರಷ್ಟು ತಗ್ಗಿಸಲಾಗಿದೆ.

ದೆಹಲಿಯಲ್ಲಿ ಎಟಿಎಫ್ ದರವನ್ನು ಪ್ರತಿ ಕಿಲೋ ಲೀಟರ್‌ಗೆ ₹2,414ರಷ್ಟು ಕಡಿತ ಮಾಡಲಾಗಿದೆ. ಏಪ್ರಿಲ್ 1ರಂದು ಹಾಗೂ ಮೇ 1ರಂದು ಕೂಡ ಎಟಿಎಫ್ ದರವನ್ನು ಇಳಿಕೆ ಮಾಡಲಾಗಿತ್ತು. ಭಾನುವಾರ ಆಗಿರುವ ಇಳಿಕೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ, ಸತತ ಮೂರು ತಿಂಗಳು ದರ ಇಳಿಕೆ ಆದಂತಾಗಿದೆ.

ಎಟಿಎಫ್ ದರ ಇಳಿಕೆಯ ಪರಿಣಾಮವಾಗಿ ವಿಮಾನಯಾನ ಕಂಪನಿಗಳ ಮೇಲಿನ ಹೊರೆ ತಗ್ಗಲಿದೆ.

ದರ ಇಳಿಕೆಯ ನಂತರ ವಾಣಿಜ್ಯ ಬಳಕೆ ಅನಿಲ ಸಿಲಿಂಡರ್ ದರವು ದೆಹಲಿಯಲ್ಲಿ ₹1,723.50 ಆಗಿದೆ.


ರಾಜೀವ್ ಮೆಮಾನಿ ಸಿಐಐ ಅಧ್ಯಕ್ಷ

ನವದೆಹಲಿ (ಪಿಟಿಐ): ಅರ್ನ್ಸ್ಟ್ ಆ್ಯಂಡ್ ಯಂಗ್ (ಇವೈ) ಇಂಡಿಯಾ ಸಂಸ್ಥೆಯ ಅಧ್ಯಕ್ಷ ರಾಜೀವ್ ಮೆಮಾನಿ ಅವರು ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) 2025–26ನೆಯ ಅವಧಿಯ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಟಾಟಾ ಕೆಮಿಕಲ್ಸ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಆಗಿರುವ ಆರ್. ಮುಕುಂದನ್ ಅವರು ಸಿಐಐ ನಿಯೋಜಿತ ಅಧ್ಯಕ್ಷರಾಗಿ (2025–26ನೇ ಅವಧಿ) ಅಧಿಕಾರ ವಹಿಸಿಕೊಂಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭಾರತ್ ಬಯೋಟೆಕ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸಹಸಂಸ್ಥಾಪಕಿ, ವ್ಯವಸ್ಥಾಪಕ ನಿರ್ದೇಶಕಿ ಸುಚಿತ್ರಾ ಕೆ. ಎಲಾ ಅವರು ಸಿಐಐ ಉಪಾಧ್ಯಕ್ಷೆ ಆಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹235-555
ದ್ವಿತಳಿ (ಬಿ.ವಿ)	₹402-701

ಬರೀ ₹456ಕ್ಕೆ ₹4 ಲಕ್ಷದ ವಿಮಾ ರಕ್ಷೆ



ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಹಲವು ಅಧ್ಯಯನಗಳ ಪ್ರಕಾರ ಭಾರತದಲ್ಲಿ ಪ್ರತಿ 100 ಜನರ ಪೈಕಿ 30 ಜನರ ಬಳಿ ಮಾತ್ರ ಒಂದಲ್ಲ ಒಂದು ಬಗೆಯ ಜೀವ ವಿಮೆ ಇದೆ. ಅಂದರೆ ದೇಶದ ಶೇಕಡ 70ರಷ್ಟು ಜನರ ಬಳಿ ಯಾವುದೇ ಜೀವ ವಿಮೆ ಇಲ್ಲ. ತಿಳಿವಳಿಕೆಯ ಕೊರತೆಯಿಂದ ವಿಮೆ ಪಡೆದುಕೊಳ್ಳದವರು ಒಂದಷ್ಟು ಮಂದಿಯಾದರೆ, ಹಣಕಾಸಿನ ಪರಿಸ್ಥಿತಿ ಚೆನ್ನಾಗಿಲ್ಲ ಎನ್ನುವ ಕಾರಣಕ್ಕೆ ವಿಮೆ ಮಾಡಿಸಿಕೊಳ್ಳದವರು ಮತ್ತೊಂದಷ್ಟು ಮಂದಿ.

ಈ ಸಮಸ್ಯೆಯನ್ನು ಹೋಗಲಾಡಿಸಲು ಕೇಂದ್ರ ಸರ್ಕಾರವು ಅತ್ಯಂತ ಕಡಿಮೆ ದರದಲ್ಲಿ ಎರಡು ಮಹತ್ವದ ವಿಮಾ ಪಾಲಿಸಿಗಳನ್ನು ಪರಿಚಯಿಸಿದೆ. ಒಂದನೆಯದ್ದು, ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ (ಪಿಎಂಜೆಜೆಬಿವೈ) ಮತ್ತು ಎರಡನೆಯದ್ದು, ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ (ಪಿಎಂಎಸ್‌ಬಿವೈ). ಈ ಎರಡೂ ವಿಮಾ ಪಾಲಿಸಿಗಳಿಗೆ ವರ್ಷಕ್ಕೆ ಒಟ್ಟು ₹ 456 ಖರ್ಚು ಮಾಡಿದರೆ ನಿಮಗೆ ಒಟ್ಟು ₹ 4 ಲಕ್ಷದ ವಿಮಾ ರಕ್ಷೆ ಸಿಗುತ್ತದೆ. ಬನ್ನಿ, ಆ ಎರಡು ಮಹತ್ವದ ವಿಮಾ ಪಾಲಿಸಿಗಳ ಬಗ್ಗೆ ವಿವರವಾಗಿ ತಿಳಿಯೋಣ.

₹436ಕ್ಕೆ ₹2 ಲಕ್ಷದ ವಿಮೆ: ಕುಟುಂಬಗಳಿಗೆ ಆರ್ಥಿಕ ಭದ್ರತೆ ಒದಗಿಸುವ ದೃಷ್ಟಿಯಿಂದ ಕೇಂದ್ರ ಸರ್ಕಾರವು 2015ರ ಮೇ 9ರಿಂದ ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆ (ಪಿಎಂಜೆಜೆಬಿವೈ) ಜಾರಿಗೆ ತಂದಿತು. ಈ ಯೋಜನೆ ಅತ್ಯಂತ ಕಡಿಮೆ ಪ್ರೀಮಿಯಂ ಮೊತ್ತಕ್ಕೆ ವ್ಯಕ್ತಿಗೆ ಜೀವ ವಿಮೆ ನೀಡುತ್ತದೆ. ಹೌದು, ಒಂದು ವರ್ಷಕ್ಕೆ ಬರೀ ₹436 ಪಾವತಿಸಿದರೆ ₹ 2 ಲಕ್ಷದ ರಕ್ಷೆ ಇರುವ ಈ ವಿಮೆಯನ್ನು ಪಡೆದುಕೊಳ್ಳಬಹುದು. ಸ್ವಯಂ ಚಾಲಿತವಾಗಿ ಪಾವತಿ (ಆಟೋ ಡೆಬಿಟ್) ಮೂಲಕ ಈ ವಿಮೆಯನ್ನು ನವೀಕರಿಸಿಕೊಳ್ಳಬಹುದು. ಬ್ಯಾಂಕ್ ಅಥವಾ ಅಂಚೆ ಕಚೇರಿ ಖಾತೆ ಹೊಂದಿರುವ 18 ವರ್ಷ ಮೇಲ್ಪಟ್ಟ 50 ವರ್ಷದ ಒಳಗಿನ ವ್ಯಕ್ತಿಗಳು ಪ್ರಧಾನಮಂತ್ರಿ ಜೀವನ್ ಜ್ಯೋತಿ ವಿಮಾ ಯೋಜನೆಗೆ ಅರ್ಹರು. ವ್ಯಕ್ತಿಗೆ 55 ವರ್ಷ ಆಗುವವರೆಗೆ ಪ್ರೀಮಿಯಂ ಪಾವತಿಸುತ್ತ ಯೋಜನೆಯ ಅನುಕೂಲ ಪಡೆಯಬಹುದು.

ಈ ವಿಮೆ ಪಡೆದಿರುವ ವ್ಯಕ್ತಿ ಸಾವನ್ನಪ್ಪಿದರೆ ಅವರ ಕುಟುಂಬಕ್ಕೆ ₹ 2 ಲಕ್ಷ ಪರಿಹಾರ ಸಿಗುತ್ತದೆ. ಆದರೆ ಈ ವಿಮೆಯಲ್ಲಿ ಅವಧಿ ಪೂರ್ಣಗೊಂಡ ನಂತರದ ಸೌಲಭ್ಯಗಳು ಅಥವಾ ಬೋನಸ್ ಲಭ್ಯವಿಲ್ಲ. ವಿಮೆ ಪ್ರೀಮಿಯಂ ಪಡೆದ 30 ದಿನಗಳ ನಂತರ ವಿಮಾ ರಕ್ಷೆಯು ಚಾಲ್ತಿಗೆ ಬರುತ್ತದೆ. ಕ್ಲೇಮ್ ಸಂದರ್ಭದಲ್ಲಿ ನಿರ್ದಿಷ್ಟ ಬ್ಯಾಂಕ್ ಸಂಪರ್ಕಿಸಿ, ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

₹20ಕ್ಕೆ ಅಪಘಾತ ವಿಮೆ: ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆ (ಪಿಎಂಎಸ್‌ಬಿವೈ) ಅಪಘಾತದಿಂದ ಉಂಟಾಗುವ ಸಾವು ಅಥವಾ ಅಂಗವೈಕಲ್ಯಕ್ಕೆ ಪರಿಹಾರ ಒದಗಿಸುತ್ತದೆ. 2015ರ ಮೇ 9ರಂದು ಕೇಂದ್ರ ಸರ್ಕಾರ ಈ ಯೋಜನೆ ಪರಿಚಯಿಸಿದೆ. ಬ್ಯಾಂಕ್ ಅಥವಾ ಅಂಚೆ ಕಚೇರಿ ಖಾತೆ ಹೊಂದಿರುವ 18 ವರ್ಷ ಮೇಲ್ಪಟ್ಟ ಹಾಗೂ 70 ವರ್ಷದ ಒಳಗಿನ ವ್ಯಕ್ತಿಗಳು ಈ ಯೋಜನೆಯ ಲಾಭ ಪಡೆಯಬಹುದು. ಪ್ರತಿ ವರ್ಷ ನಿಮ್ಮ ಬ್ಯಾಂಕ್ ಖಾತೆಯಿಂದ ಸ್ವಯಂ ಚಾಲಿತವಾಗಿ ಬರೀ ₹20 ಪಾವತಿಸಿದರೆ ಪ್ರಧಾನಮಂತ್ರಿ ಸುರಕ್ಷಾ ವಿಮಾ ಯೋಜನೆಯಲ್ಲಿ ₹2 ಲಕ್ಷದವರೆಗೆ ಅಪಘಾತ ವಿಮೆಯ ಸೌಲಭ್ಯ ದಕ್ಕುತ್ತದೆ.

ಈ ವಿಮೆ ಪಡೆದಿರುವ ವ್ಯಕ್ತಿ ಮೃತಪಟ್ಟರೆ ಆ ಕುಟುಂಬಕ್ಕೆ ₹2 ಲಕ್ಷದ ವಿಮಾ ಪರಿಹಾರ ಸಿಗುತ್ತದೆ. ಒಂದೊಮ್ಮೆ ವ್ಯಕ್ತಿ ಅಪಘಾತದಿಂದ ಶಾಶ್ವತ ಅಂಗವೈಕಲ್ಯಕ್ಕೆ ಒಳಗಾದರೆ ಅಥವಾ ಭಾಗಶಃ ಅಂಗವೈಕಲ್ಯಕ್ಕೆ ಒಳಗಾದರೆ ₹1 ಲಕ್ಷ ಪರಿಹಾರ ಲಭ್ಯ. ಕ್ಲೇಮ್ ಸಂದರ್ಭದಲ್ಲಿ, ಪಾಲಿಸಿ ಪಡೆದಿರುವ ನಿರ್ದಿಷ್ಟ ಬ್ಯಾಂಕ್ ಸಂಪರ್ಕಿಸಿ, ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು.

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಸತತ ಎರಡನೇ ವಾರವೂ ಕುಸಿತ

ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ದಾಖಲಿಸಿವೆ. ಮೇ 30ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಅಲ್ಪ ಪ್ರಮಾಣದಲ್ಲಿ ಕುಸಿದಿವೆ. 81,451 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.33ರಷ್ಟು ತಗ್ಗಿದೆ. 24,750 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 0.41ರಷ್ಟು ಇಳಿಕೆ ಕಂಡಿದೆ.

ಆದರೆ ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.29ರಷ್ಟು ಗಳಿಸಿಕೊಂಡಿದ್ದರೆ , ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 1.36ರಷ್ಟು ಜಿಗಿದಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇರಿದ್ದ ಸುಂಕಗಳಿಗೆ ಅಂತಾರಾಷ್ಟ್ರೀಯ ವಾಣಿಜ್ಯ ನ್ಯಾಯಾಲಯ ತಡೆ ನೀಡಿದ್ದ ಬೆನ್ನಲ್ಲೇ ಟ್ರಂಪ್ ನೇತೃತ್ವದ ಆಡಳಿತ ಮೇಲ್ಮನವಿ ಹೋಗಿರುವುದು ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಾರದ ಅಂದಾಜಿನಲ್ಲಿ ನಿಫ್ಟಿ ವಲಯವಾರು ಪ್ರಗತಿ ನೋಡಿದಾಗ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 4.08ರಷ್ಟು, ಮಾಧ್ಯಮ ಶೇ 1.67ರಷ್ಟು, ನಿಫ್ಟಿ ರಿಯಲ್ ಎಸ್ಟೇಟ್ ಶೇ 1.33ರಷ್ಟು, ಎನರ್ಜಿ ಶೇ 0.68ರಷ್ಟು, ನಿಫ್ಟಿ ಬ್ಯಾಂಕ್ ಶೇ 0.63ರಷ್ಟು, ಫೈನಾನ್ಸ್ ಶೇ 0.05ರಷ್ಟು ಮತ್ತು ಫಾರ್ಮಾ ಶೇ 0.04ರಷ್ಟು ಗಳಿಸಿಕೊಂಡಿವೆ.

ಎಫ್‌ಎಂಸಿಜಿ ಶೇ -2.16ರಷ್ಟು, ಆಟೊ ಶೇ -0.81ರಷ್ಟು ಲೋಹ ಶೇ -0.61ರಷ್ಟು, ಸರ್ವೀಸ್ ಶೇ – 0.26ರಷ್ಟು ಮತ್ತು ಐ.ಟಿ ಶೇ – 0.22ರಷ್ಟು ಕುಸಿದಿವೆ.

ಇಳಿಕೆ – ಏರಿಕೆ: ‘ನಿಫ್ಟಿ–50’ಯಲ್ಲಿ ವಾರದ ಲೆಕ್ಕಾಚಾರ ನೋಡಿದಾಗ ಅಲ್ಟ್ರಾ ಟೆಕ್ ಸಿಮೆಂಟ್ ಶೇ -4.69ರಷ್ಟು, ಗ್ರಾಸಿಮ್ ಇಂಡಸ್ಟ್ರೀಸ್ ಶೇ -4.43ರಷ್ಟು, ಐಟಿಸಿ ಶೇ – 4.11ರಷ್ಟು, ಟಾಟಾ ಕನ್ಸ್ಯೂಮರ್ ಶೇ – 3.09ರಷ್ಟು, ಶ್ರೀರಾಮ್ ಫೈನಾನ್ಸ್ ಶೇ – 3.03ರಷ್ಟು, ಎನ್‌ಟಿಪಿಸಿ ಶೇ – 3.02ರಷ್ಟು, ಪವರ್ ಗ್ರಿಡ್ ಕಾರ್ಪೊರೇಷನ್ ಶೇ -2.75ರಷ್ಟು, ಹಿಂಡಾಲ್ಕೊ ಇಂಡಸ್ಟ್ರೀಸ್ ಶೇ –2.75ರಷ್ಟು, ಅಪೋಲೊ ಹಾಸ್ಪಿಟಲ್ಸ್ ಶೇ –2.36ರಷ್ಟು, ಏಷ್ಯನ್ ಪೇಂಟ್ಸ್ ಶೇ -2.27ರಷ್ಟು, ಟಿಸಿಎಸ್ ಶೇ -1.59ರಷ್ಟು ಮತ್ತು ಒಎನ್‌ಜಿಸಿ ಶೇ –1.58ರಷ್ಟು ಕುಸಿದಿವೆ.

ಟ್ರೆಂಟ್ ಶೇ 3.43ರಷ್ಟು, ಇಂಡಸ್ ಇಂಡ್ ಬ್ಯಾಂಕ್ ಶೇ 3.23ರಷ್ಟು, ಎಬಿಐ ಶೇ 2.87ರಷ್ಟು, ಅದಾನಿ ಪೋರ್ಟ್ಸ್ ೯ಶೇ 2.61ರಷ್ಟು, ಎಲ್ ಆ್ಯಂಡ್ ಟಿ ಶೇ 2.18ರಷ್ಟು, ಡಾ ರೆಡ್ಡೀಸ್ ಲ್ಯಾಬ್ಸ್ ಶೇ 1.81ರಷ್ಟು, ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಶೇ 1.67ರಷ್ಟು, ಏರ್‌ಟೆಲ್ ಶೇ 1.41ರಷ್ಟು, ಎಸ್‌ಬಿಐ ಲೈಫ್ ಇನ್ಶೂರೆನ್ಸ್ ಶೇ 0.91ರಷ್ಟು, ಎಟರ್ನಲ್ ಲಿಮಿಟೆಡ್ ಶೇ 0.91ರಷ್ಟು, ವಿಪ್ರೊ ಶೇ 0.89ರಷ್ಟು, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 0.43ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಜೂನ್ 4ರಿಂದ 6ರವರೆಗೆ ಆರ್‌ಬಿಐ ಹಣಕಾಸು ನೀತಿ ಸಮಿತಿಯ ಸಭೆ ನಡೆಯಲಿದ್ದು ರೆಪೊ ದರವನ್ನು 25 ಮೂಲಾಂಶಗಳಷ್ಟು ಕಡಿತಗೊಳಿಸುವ ನಿರೀಕ್ಷೆಯಿದೆ. ಬಡ್ಡಿ ದರ ಇಳಿಕೆಯು ಷೇರುಪೇಟೆ ಮೇಲೆ ಪರಿಣಾಮ ಬೀರಲಿದೆ.

ಉಳಿದಂತೆ ಭಾರತದ ಜಿಡಿಪಿ ಬೆಳವಣಿಗೆ ದರ, ಅಮೆರಿಕ ಹಣದುಬ್ಬರ ಅಂಕಿ-ಅಂಶ ಸೇರಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಇಸ್ರೇಲ್ ದಾಳಿ; 31 ನಾಗರಿಕರು ಸಾವು

ರಫಾ (ಪಿಟಿಐ): ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಸೇನೆಯು ನಡೆಸಿದ ದಾಳಿಯಲ್ಲಿ ನಡೆಸಿದ್ದು, 31 ಜನರು ಮೃತ ಪಟ್ಟಿದ್ದಾರೆ ಹಾಗೂ ಹಲವರು ಗಾಯಗೊಂಡಿದ್ದಾರೆ.

ಆಹಾರ ಸ್ವೀಕರಿಸಲು ತೆರಳುತ್ತಿದ್ದ ಜನರ ಗುಂಪಿನ ಮೇಲೆ ದಾಳಿ ನಡೆದಿದೆ ಎಂದು ಗಾಜಾದ ಆರೋಗ್ಯ ಸಚಿವಾಲಯ ಭಾನುವಾರ ತಿಳಿಸಿದೆ.

ಮಾನವೀಯ ನೆರವು ವಿತರಣಾ ಕೇಂದ್ರದ ಬಳಿ ಗುಂಡಿನ ದಾಳಿ ನಡೆದಿರುವ ಬಗ್ಗೆ ಮಾಹಿತಿ ಇಲ್ಲ ಎಂದು ಇಸ್ರೇಲ್ ಸೇನೆ ತಿಳಿಸಿದೆ. ಅಲ್ಲದೇ ನಾಗರಿಕರ ಮೇಲೆ ಇಸ್ರೇಲ್ ಸೇನೆ ದಾಳಿ ನಡೆಸಿದೆ ಎನ್ನುವುದನ್ನು ತಳ್ಳಿ ಹಾಕಿದೆ.

ಸ್ಥಳದಲ್ಲಿ ಯಾವುದೇ ಗುಂಡಿನ ದಾಳಿ ಭಾನುವಾರ ನಡೆದಿಲ್ಲ ಎಂದು ಆಹಾರ ವಿತರಿಸುತ್ತಿದ್ದ ಸಂಸ್ಥೆಯು ಹೇಳಿದೆ. ಇದು ಇಸ್ರೇಲ್ ಬೆಂಬಲಿತ ಸಂಸ್ಥೆಯಾಗಿದೆ.

ತೆರಿಗೆ ಸಂಗ್ರಹ ಪ್ರಮಾಣ ಮೇ ತಿಂಗಳಲ್ಲಿ ಶೇಕಡ 16ರಷ್ಟು ಹೆಚ್ಚಳ


ಜಿಎಸ್‌ಟಿ ಸಂಗ್ರಹ ₹2 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆ ಮೂಲಕ ಸಂಗ್ರಹ ಆಗುವ ವರಮಾನವು ಮೇ ತಿಂಗಳಲ್ಲಿ ಶೇಕಡ 16.4ರಷ್ಟು ಹೆಚ್ಚಳ ಆಗಿದ್ದು, ₹2.01 ಲಕ್ಷ ಕೋಟಿಯಷ್ಟು ಆಗಿದೆ. ಜಿಎಸ್‌ಟಿ ವರಮಾನ ಸಂಗ್ರಹವು ಸತತ ಎರಡನೆಯ ತಿಂಗಳಲ್ಲಿಯೂ ₹2 ಲಕ್ಷ ಕೋಟಿಗಿಂತ ಹೆಚ್ಚಾಗಿದೆ.

ಜಿಎಸ್‌ಟಿ ಮೂಲಕ ಸಂಗ್ರಹವಾದ ವರಮಾನದ ಮೊತ್ತವು ಏಪ್ರಿಲ್‌ನಲ್ಲಿ ದಾಖಲೆಯ ₹2.37 ಲಕ್ಷ ಕೋಟಿ ಆಗಿತ್ತು. ಕಳೆದ ವರ್ಷದ ಮೇ ತಿಂಗಳಲ್ಲಿ ಸಂಗ್ರಹವು ₹1.72 ಲಕ್ಷ ಕೋಟಿ ಆಗಿತ್ತು.

ಈ ವರ್ಷದ ಮೇ ತಿಂಗಳಲ್ಲಿ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 13.7ರಷ್ಟು ಏರಿಕೆ ಕಂಡಿದ್ದು, ಅಂದಾಜು ₹1.50 ಲಕ್ಷ ಕೋಟಿಗೆ ತಲುಪಿದೆ. ಆಮದು ಮೂಲಕ ಬರುವ ಜಿಎಸ್‌ಟಿ ವರಮಾನವು ಶೇ 25.2ರಷ್ಟು ಹೆಚ್ಚಳ ಕಂಡು ₹51 ಸಾವಿರ ಕೋಟಿಗೆ ತಲುಪಿದೆ.

ದೊಡ್ಡ ರಾಜ್ಯಗಳಾದ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿನ ಏರಿಕೆಯು ಶೇ 17ರಿಂದ ಶೇ 25ರವರೆಗೆ ಇದೆ. ಆದರೆ ಈ ರಾಜ್ಯಗಳಂತೆಯೇ ದೊಡ್ಡದಾಗಿರುವ ಗುಜರಾತ್, ಆಂಧ್ರಪ್ರದೇಶ, ತೆಲಂಗಾಣದಲ್ಲಿ ಜಿಎಸ್‌ಟಿ ವರಮಾನ ಸಂಗ್ರಹದಲ್ಲಿನ ಹೆಚ್ಚಳವು ಶೇ 6ರವರೆಗೆ ಮಾತ್ರ ಇದೆ.



ಬೇರೆ ಬೇರೆ ರಾಜ್ಯಗಳ ಜಿಎಸ್‌ಟಿ ವರಮಾನ ಸಂಗ್ರಹದ ಏರಿಕೆ ಪ್ರಮಾಣದಲ್ಲಿನ ವ್ಯತ್ಯಾಸದ ವಿಚಾರವಾಗಿ, ಆಯಾ ರಾಜ್ಯಗಳಿಗೆ ಮುಖ್ಯವಾದ ವಲಯಗಳನ್ನು ಗಮನದಲ್ಲಿ ಇರಿಸಿಕೊಂಡು ಆಳವಾದ ಪರಿಶೀಲನೆ ಆಗಬೇಕಿದೆ ಎಂದು ಡೆಲಾಯ್ಟ್ ಇಂಡಿಯಾ ಪಾಲುದಾರ ಎಂ.ಎಸ್. ಮಣಿ ಹೇಳಿದ್ದಾರೆ.

ಮಧ್ಯಪ್ರದೇಶ, ಹರಿಯಾಣ, ಪಂಜಾಬ್, ರಾಜಸ್ಥಾನದಲ್ಲಿ ವರಮಾನ ಸಂಗ್ರಹದ ಏರಿಕೆ ಪ್ರಮಾಣವು ಶೇ 10ರಷ್ಟು ಇದೆ.

ಜಿಎಸ್‌ಟಿ ವರಮಾನ ಸಂಗ್ರಹದ ಪ್ರಮಾಣವು ಇದೇ ಮಟ್ಟದಲ್ಲಿ ಇನ್ನೂ ಒಂದೆರಡು ತಿಂಗಳು ಮುಂದುವರಿದರೆ, ಜಿಎಸ್‌ಟಿ ದರಗಳನ್ನು ಇನ್ನಷ್ಟು ಸರಳಗೊಳಿಸಲು ಸರ್ಕಾರಕ್ಕೆ ಅನುವಾಗಬಹುದು ಎಂದು ಪಿಡಬ್ಲ್ಯುಸಿ ಎಲ್‌ಎಲ್‌ಪಿ ಪಾಲುದಾರ ಪ್ರತೀಕ್ ಜೈನ್ ಹೇಳಿದ್ದಾರೆ.

2ನೇ ಪ್ರಕರಣ: ಗುಜರಾತ್ ಸಚಿವನ ಪುತ್ರ ಬಂಧನ

ದಾಹೋದ್, ಗುಜರಾತ್ (ಪಿಟಿಐ): ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ (ನರೇಗಾ) ಅವ್ಯವಹಾರ ನಡೆಸಿದ್ದ ಆರೋಪದಡಿ ಬಂಧಿತರಾಗಿದ್ದ ಗುಜರಾತ್ ಕೃಷಿ ರಾಜ್ಯ ಸಚಿವ ಬಚ್ಚುಭಾಯಿ ಖಾಬಡ್ ಅವರ ಮಗನಿಗೆ ಜಾಮೀನು ಸಿಕ್ಕ ಎರಡು ದಿನದ ಬಳಿಕ ಮತ್ತೊಂದು ಪ್ರಕರಣದಲ್ಲಿ ಭಾನುವಾರ ಬಂಧಿಸಲಾಗಿದೆ.

ಕಳೆದ ಏಪ್ರಿಲ್‌ನಲ್ಲಿ ದಾಖಲಾಗಿದ್ದ ಎಫ್‌ಐಆರ್‌ಗೆ ಸಂಬಂಧಿಸಿದಂತೆ, ಸಚಿವರ ಮಕ್ಕಳಾದ ಬಲವಂತ್ ಮತ್ತು ಕಿರಣ್ ಅವರನ್ನು ಬಂಧಿಸಲಾಗಿತ್ತು. ಮೇ 29ರಂದು ಇಬ್ಬರಿಗೂ ನ್ಯಾಯಾಲಯವು ಜಾಮೀನು ನೀಡಿತ್ತು.

‘ಮತ್ತೊಂದು ಪ್ರಕರಣದಲ್ಲಿ ಕಿರಣ್ ಅವರನ್ನು ಅದೇ ದಿನ ಬಂಧಿಸಲಾಗಿತ್ತು. ದಾಹೋದ್ ‘ಬಿ’ ವಲಯದ ಪೊಲೀಸರು ಹೊಸತಾಗಿ ದಾಖಲಿಸಿದ್ದ ಎಫ್‌ಐಆರ್‌ಗೆ ಸಂಬಂಧಿಸಿದಂತೆ, ಬಲವಂತ್ ಅವರನ್ನು ಬಂಧಿಸಲಾಯಿತು’ ಎಂದು ಡಿಎಸ್‌ಪಿ ಜಗದೀಶ್ ಸಿಂಗ್ ಭಂಡಾರಿ ತಿಳಿಸಿದರು.

ಮಾರುಕಟ್ಟೆಗೆ ನಂದಿನಿ ಕೇಕ್, ಮಫಿನ್ಸ್

ಒಂದನೇ ಪುಟದಿಂದ...

ಸ್ಲೈಸ್ ಕೇಕ್‌ನಲ್ಲಿ ಫ್ರೂಟಿ, ವೆನಿಲ್ಲಾ, ಪೈನಾಪಲ್ ಹಾಗೂ ಚಾಕೊ ಆರೆಂಜ್ ಎಂಬ ನಾಲ್ಕು ವಿಭಿನ್ನ ರುಚಿಗಳ ಕೇಕ್‌ಗಳನ್ನು ಬಿಡುಗಡೆ ಮಾಡಲಾಯಿತು.

ಇವು 30 ಗ್ರಾಂ. ಮತ್ತು 50 ಗ್ರಾಂ. ತೂಕದ ಪ್ಯಾಕೆಟ್‌ಗಳಲ್ಲಿ ಲಭ್ಯವಿವೆ. ಜೊತೆಗೆ ಸ್ಪಾಂಜಿ ವೆನಿಲ್ಲಾ (25 ಗ್ರಾಂ.) ಎಂಬ ವಿಶಿಷ್ಟ ರುಚಿಯ ಕೇಕ್ ಅನ್ನೂ ಪರಿಚಯಿಸಲಾಗಿದೆ.

ಮಫಿನ್ಸ್ (ಕಪ್ ಕೇಕ್): ಇದರಲ್ಲಿ ವೆನಿಲ್ಲಾ, ಚಾಕೊಲೇಟ್, ಪೈನಾಪಲ್, ಸ್ಟ್ರಾಬೆರಿ ಮತ್ತು ಮಾವಾ ಎಂಬ ಐದು ವಿಶಿಷ್ಟ ರುಚಿಗಳ ಕಪ್ ಕೇಕ್‌ಗಳನ್ನು ಬಿಡುಗಡೆ ಮಾಡಲಾಯಿತು. ಎಲ್ಲವೂ 150 ಗ್ರಾಂ. ತೂಕದ ಪೊಟ್ಟಣಗಳಲ್ಲಿ ಲಭ್ಯ.

ಎಂಟು ವಿಧದ ಕೇಕ್: ವಿವಿಧ ಸ್ವಾದ ಮತ್ತು ಹಣ್ಣುಗಳನ್ನು ಬಳಸಿಕೊಂಡು ಪ್ಲಮ್, ಫ್ರೂಟ್, ವೆನಿಲ್ಲಾ, ಚಾಕೊಲೇಟ್, ಚಾಕೊವೆನಿಲ್ಲಾ, ವಾಲ್‌ನಟ್ ಬನಾನ, ಕೊಬ್ಬರಿ ಬೆಲ್ಲ ಹಾಗೂ ಚಾಕೊಲೇಟ್ ಬೆಲ್ಲದ ಕೇಕ್‌ಗಳನ್ನು ಬಿಡುಗಡೆ ಮಾಡಲಾಯಿತು. ಎಲ್ಲವೂ 200 ಗ್ರಾಂ. ಪೊಟ್ಟಣಗಳಲ್ಲಿ ಲಭ್ಯವಿವೆ.

ಬಿಡುಗಡೆಯಾಗಿರುವ ನೂತನ ಉತ್ಪನ್ನಗಳು ಭಾನುವಾರದಿಂದಲೇ ರಾಜ್ಯದ ಎಲ್ಲ ನಂದಿನಿ ಮಳಿಗೆಗಳಲ್ಲಿ ಸಿಗಲಿವೆ ಎಂದು ಕೆಎಂಎಫ್ ಅಧಿಕಾರಿಗಳು ತಿಳಿಸಿದ್ದಾರೆ.



ವಿಶ್ವ ಹಾಲು ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ನಂದಿನಿ ಬ್ರ್ಯಾಂಡ್‌ನ 18 ನೂತನ ಉತ್ಪನ್ನಗಳನ್ನು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ಬಿಡುಗಡೆ ಮಾಡಿದರು. ‘ಒಗ್ಗರಣೆ ಡಬ್ಬಿ’ ಖ್ಯಾತಿಯ ಮುರಳಿ, ಸುಚಿತ್ರಾ ಮುರಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಪನೀರ್ ಖಾದ್ಯ ಪಾಕ ಸ್ಪರ್ಧೆ ವಿಜೇತರು

ವಿಶ್ವ ಹಾಲು ದಿನಾಚರಣೆ ಅಂಗವಾಗಿ ಸಾರ್ವಜನಿಕರಿಗಾಗಿ ಕೆಎಂಎಫ್ ಆಯೋಜಿಸಿದ್ದ ಪನೀರ್ ಖಾದ್ಯ ಸ್ಪರ್ಧೆಯಲ್ಲಿ ಬೆಂಗಳೂರಿನ ಮಹಾಲಕ್ಷ್ಮಿ ಪ್ರಥಮ ಬಹುಮಾನ(₹50 ಸಾವಿರ ನಗದು), ಮಂಗಳೂರಿನ ವಿಶಿಕಾ ಕೇಶವ್ ಎರಡನೇ ಬಹುಮಾನ (₹30 ಸಾವಿರ ನಗದು) ಹಾಗೂ ಬೆಂಗಳೂರಿನ 13 ವರ್ಷದ ಬಿ.ವಿನೋದಿನಿ ಮೂರನೇ ಬಹುಮಾನ (₹20 ಸಾವಿರ) ಪಡೆದರು. ಸ್ಪರ್ಧೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ 30 ಮಂದಿ ಭಾಗವಹಿಸಿದ್ದರು.

ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ. ಶಿವಸ್ವಾಮಿ ವಿಜೇತರಿಗೆ ಬಹುಮಾನದ ಚೆಕ್‌ಗಳನ್ನು ವಿತರಿಸಿದರು. ‘ಒಗ್ಗರಣೆ ಡಬ್ಬಿ’ ಖಾತಿಯ ಮುರಳಿ ಅವರು ತೀರ್ಪುಗಾರರಾಗಿ ಭಾಗವಹಿಸಿದ್ದರು.

ಶಾಸಕ ಅಬ್ಬಾಸ್ ಅನ್ಸಾರಿ ಅನರ್ಹ

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ಅನರ್ಹಗೊಂಡ ಶಾಸಕರ ಪಟ್ಟಿಗೆ ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ (ಎಸ್‌ಬಿಎಸ್‌ಪಿ) ಮವೂ ಕ್ಷೇತ್ರದ ಶಾಸಕ ಅಬ್ಬಾಸ್ ಅನ್ಸಾರಿ ಅವರು ಸೇರ್ಪಡೆಯಾಗಿದ್ದಾರೆ.

ದ್ವೇಷ ಭಾಷಣ ಪ್ರಕರಣದಲ್ಲಿ ಎರಡು ವರ್ಷ ಜೈಲು ಶಿಕ್ಷೆಗೆ ಗುರಿಯಾದ ಕಾರಣ ಭೂಗತ ಪಾತಕಿ, ರಾಜಕಾರಣಿ ಮುಖ್ತಾರ್ ಅನ್ಸಾರಿ ಅವರ ಪುತ್ರ ಅಬ್ಬಾಸ್ ಅವರನ್ನು ಉತ್ತರ ಪ್ರದೇಶ ವಿಧಾನಸಭೆಯ ಸದಸ್ಯ ಸ್ಥಾನದಿಂದ ಅನರ್ಹಗೊಳಿಸಲಾಗಿದೆ.

ಬಾಂಗ್ಲಾದೇಶ: ಹಸೀನಾ ವಿರುದ್ಧ ಸಾಮೂಹಿಕ ಹತ್ಯೆ ಆರೋಪ



ಢಾಕಾ (ಪಿಟಿಐ): ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಇತರ ಇಬ್ಬರ ವಿರುದ್ಧ ಸಾಮೂಹಿಕ ಹತ್ಯೆ ಸೇರಿದಂತೆ ಹಲವು ಆರೋಪಗಳ ಮೇಲೆ ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧ ನ್ಯಾಯ ಮಂಡಳಿಯು (ಐಸಿಟಿ) ಭಾನುವಾರ ದೋಷಾರೋಪಣೆ ಹೊರಿಸಿದೆ.

ಕಳೆದ ವರ್ಷ ವಿದ್ಯಾರ್ಥಿಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯನ್ನು ಹಿಂಸಾತ್ಮಕವಾಗಿ ಹತ್ತಿಕ್ಕಲು ಯತ್ನಿಸಿದ ಪ್ರಮುಖ ಆರೋಪ ಅವರ ಮೇಲಿದೆ. ಈ ಪ್ರತಿಭಟನೆ ಬೆನ್ನಲ್ಲೇ ಹಸೀನಾ ನೇತೃತ್ವದ ಸರ್ಕಾರವನ್ನು ಪದಚ್ಯುತಗೊಳಿಸಲಾಯಿತು. ಅದಾದ 10 ತಿಂಗಳ ಬಳಿಕ, ಹಸೀನಾ ಅವರ ಗೈರಿನಲ್ಲಿ ಈ ವಿಚಾರಣೆ ಆರಂಭವಾಗಿದೆ.

ಮೂವರು ನ್ಯಾಯಮೂರ್ತಿಗಳ ಐಸಿಟಿ ಪೀಠವು ವಿಚಾರಣೆ ನಡೆಸಿತು. ಹಸೀನಾ ಅವರ ಸರ್ಕಾರವು ಪ್ರತಿಭಟನೆಯನ್ನು ಅತ್ಯಂತ ಕ್ರೂರವಾಗಿ ಹತ್ತಿಕ್ಕಲು ಪ್ರಯತ್ನಿಸಿತ್ತು ಎಂದು ಪ್ರಾಸಿಕ್ಯೂಷನ್ ಮಾಡಿದ ಆರೋಪವನ್ನು ಪೀಠ ಪರಿಗಣಿಸುವುದಾಗಿ ತಿಳಿಸಿತು.

ಹಸೀನಾ ವಿರುದ್ಧ ವಾರಂಟ್: ಹಸೀನಾ ಮತ್ತು ಆಗಿನ ಗೃಹ ಸಚಿವ ಅಸದುಜ್ಜಮಾನ್ ಖಾನ್ ಕಮಲ್ ವಿರುದ್ಧ ಪೀಠವು ಹೊಸದಾಗಿ ಬಂಧನದ ವಾರಂಟ್ ಹೊರಡಿಸಿತು. ಮೂರನೇ ಆರೋಪಿ, ಆಗಿನ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಚೌಧರಿ ಅಬ್ದುಲ್ಲಾ ಅಲ್– ಮಾಮುನ್ ಈಗಾಗಲೇ ಬಂಧನದಲ್ಲಿದ್ದಾರೆ.

ಬಾಂಗ್ಲಾದೇಶದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ನ್ಯಾಯಮಂಡಳಿ ವಿಚಾರಣೆಯನ್ನು ಸರ್ಕಾರಿ ವಾಹಿನಿಯಲ್ಲಿ ನೇರ ಪ್ರಸಾರ ಮಾಡಲಾಯಿತು.

ಕಳೆದ ವರ್ಷ ಜುಲೈ 15ರಿಂದ ಆಗಸ್ಟ್ 15ರವರೆಗೆ ನಡೆದ ಹಿಂಸಾಚಾರದಲ್ಲಿ 1,400 ಜನರು ಮೃತಪಟ್ಟಿದ್ದರು ಎಂದು ವಿಶ್ವಸಂಸ್ಥೆಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ವ್ಯವಸ್ಥಿತ ದಾಳಿ– ಪ್ರಾಸಿಕ್ಯೂಷನ್ ಆರೋಪ: ‘ಪ್ರತಿಭಟನೆಯನ್ನು ವ್ಯವಸ್ಥಿತವಾಗಿ ಹತ್ತಿಕ್ಕಲು ಹಸೀನಾ ಅವರು ಎಲ್ಲ ಮಾರ್ಗಗಳನ್ನು ಬಳಸಿದ್ದರು. ಈ ಮೂಲಕ ಮಾನವೀಯತೆಯ ವಿರುದ್ಧ ಅವರು ಅಪರಾಧಗಳನ್ನು ಎಸಗಿದ್ದಾರೆ’ ಎಂದು ಪ್ರಾಸಿಕ್ಯೂಷನ್ ತಂಡದ ಮುಖ್ಯಸ್ಥ ಮೊಹಮ್ಮದ್ ತಾಜುಲ್ ಇಸ್ಲಾಂ ವಾದಿಸಿದರು.

ಸಾಮೂಹಿಕ ಹತ್ಯೆಯನ್ನು ತಡೆಯುವಲ್ಲಿ ವೈಫಲ್ಯ, ಪ್ರಚೋದನೆ, ಸಹಭಾಗಿತ್ವ, ಪಿತೂರಿ, ಅನುಕೂಲ ಕಲ್ಪಿಸುವುದು ಸೇರಿದಂತೆ ವಿವಿಧ ಆರೋಪಗಳನ್ನು ಹಸೀನಾ ಮತ್ತು ಇತರ ಇಬ್ಬರ ವಿರುದ್ಧ ಇಸ್ಲಾಂ ಮಾಡಿದರು.

‘ನಮ್ಮದು ಪ್ರಜಾಪ್ರಭುತ್ವ ದೇಶ. ಇಲ್ಲಿ ಮಾನವೀಯತೆ ವಿರುದ್ಧ ಅಪರಾಧಗಳು ನಡೆಯಬಾರದು. ಆದರೆ ಹಸೀನಾ ಅವರ ಆದೇಶದ ಮೇರೆಗೆ ವ್ಯವಸ್ಥಿತವಾಗಿ ಹತ್ಯೆಗಳು, ಕೊಲೆಯತ್ನಗಳು ನಡೆದಿವೆ’ ಎಂದು ಅವರು ಹೇಳಿದರು.

ಜಮಾತ್–ಎ–ಇಸ್ಲಾಮಿಗೆ ಅನುಮತಿ

ಶೇಖ್ ಹಸೀನಾ ಅವರ ಅವಧಿಯಲ್ಲಿ ನಿಷೇಧಕ್ಕೆ ಒಳಗಾಗಿದ್ದ ಬಾಂಗ್ಲಾದೇಶದ ಅತ್ಯಂತ ದೊಡ್ಡ ಇಸ್ಲಾಮಿಸ್ಟ್ ಪಕ್ಷವಾದ ‘ಜಮಾತ್–ಎ–ಇಸ್ಲಾಮಿ’ಯದ ನೋಂದಣಿಯನ್ನು ಪುನರ್‌ಸ್ಥಾಪಿಸಿ ಅಲ್ಲಿನ ಸುಪ್ರೀಂ ಕೋರ್ಟ್ ಭಾನುವಾರ ತೀರ್ಪು ನೀಡಿದೆ. ಅಲ್ಲದೆ ಚುನಾವಣೆಯಲ್ಲಿ ಭಾಗವಹಿಸಲು ಪಕ್ಷಕ್ಕೆ ಅನುಮತಿಯನ್ನೂ ನೀಡಿದೆ.

ಅಣ್ವಸ್ತ್ರ ಹೊತ್ತೊಯ್ಯಬಲ್ಲ ಬಾಂಬರ್‌ಗಳೇ ಗುರಿ

ರಷ್ಯಾ ವಾಯುನೆಲೆ ಮೇಲೆ ಉಕ್ರೇನ್ ದಾಳಿ

ಮಾಸ್ಕೊ (ರಾಯಿಟರ್ಸ್/ಎಪಿ): ರಷ್ಯಾದ ಸೈಬೀರಿಯಾದಲ್ಲಿನ ಸೇನಾನೆಲೆ ಮೇಲೆ ಉಕ್ರೇನ್ ಪಡೆಗಳು ಭಾನುವಾರ ಭಾರಿ ದಾಳಿ ನಡೆಸಿವೆ.

ಈ ದಾಳಿಯಲ್ಲಿ ರಷ್ಯಾದ 40ಕ್ಕೂ ಅಧಿಕ ಯುದ್ಧವಿಮಾನಗಳು ನಾಶವಾಗಿವೆ ಎಂದು ಮೂಲಗಳು ಹೇಳಿವೆ.

‘ಉಕ್ರೇನ್ ಗಡಿಯಿಂದ ಬಹಳ ದೂರದಲ್ಲಿರುವ ಈ ವಾಯುನೆಲೆಗಳನ್ನು ಗುರಿಯಾಗಿಸಿ ನಡೆಸಿದ ಕಾರ್ಯಾಚರಣೆಯನ್ನು ಕಾರ್ಯಗತಗೊಳಿಸಲು ಒಂದರಿಂದ ಒಂದೂವರೆ ವರ್ಷದಿಂದ ಸಿದ್ಧತೆ ನಡೆದಿತ್ತು. ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೇ ಸ್ವತಃ ಈ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸಿದ್ದರು’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ರಷ್ಯಾ ಕೂಡ ಉಕ್ರೇನ್ ಮೇಲೆ ಕ್ಷಿಪಣಿ ಹಾಗೂ ಡ್ರೋನ್ ದಾಳಿ ನಡೆಸಿದೆ.

ಕದನ ವಿರಾಮ ಕುರಿತು ಟರ್ಕಿಯ ಇಸ್ತಾಂಬುಲ್‌ನಲ್ಲಿ ನಿಗದಿಯಾಗಿರುವ ಸಭೆಗೂ ಒಂದು ದಿನ ಮೊದಲು ಈ ಬೆಳವಣಿಗೆಗಳು ನಡೆದಿವೆ.

ಅಣ್ವಸ್ತ್ರಗಳನ್ನು ಹೊತ್ತು, ದೂರದ ಗುರಿಗಳನ್ನು ತಲುಪುವ ಸಾಮರ್ಥ್ಯ ವಿರುವ ಬಾಂಬರ್‌ಗಳು ಈ ನೆಲೆಯಲ್ಲಿದ್ದವು. ಉಕ್ರೇನ್ ನಡೆಸಿದ ದಾಳಿಯಲ್ಲಿ ಈ ಯುದ್ಧವಿಮಾನಗಳು ಹೊತ್ತಿ ಉರಿಯುತ್ತಿರುವ ದೃಶ್ಯಗಳಿರುವ ವಿಡಿಯೊ ಹಾಗೂ ಚಿತ್ರಗಳನ್ನು ಸಾಮಾಜಿಕ ಮಾಧ್ಯಮ ಗಳಲ್ಲಿ ಹಂಚಿಕೊಳ್ಳಲಾಗಿದೆ. ಉಕ್ರೇನ್ ಗಡಿಯಿಂದ 4,300 ಕಿ.ಮೀ.ಗೂ ಅಧಿಕ ದೂರದ ಬೆಲಾಯಾ ವಾಯುನೆಲೆ ಗುರಿಯಾಗಿಸಿ ಇದೇ ಮೊದಲ ಬಾರಿಗೆ ಭಾರಿ ದಾಳಿ ನಡೆದಿದೆ ಎಂದು ರಷ್ಯಾ ಪರ ಬ್ಲಾಗರ್‌ಗಳು ಹೇಳಿಕೊಂಡಿದ್ದಾರೆ.

ಈ ವಿಡಿಯೊ ಹಾಗೂ ಚಿತ್ರಗಳನ್ನು ದೃಢಪಡಿಸಲು ಸಾಧ್ಯವಾಗಿಲ್ಲ ಎಂದು ರಾಯಿಟರ್ಸ್ ಹೇಳಿದೆ. ‘ಉಕ್ರೇನ್ ಆಂತರಿಕ ಭದ್ರತೆ ಹೊಣೆ ಹೊತ್ತಿರುವ ಎಸ್‌ಬಿಯು, ರಷ್ಯಾದ 40ಕ್ಕೂ ಅಧಿಕ ಯುದ್ಧ ವಿಮಾನಗಳನ್ನು ಗುರಿಯಾಗಿಸಿ ದಾಳಿ ನಡೆಸಿದೆ’ ಎಂದು ಉಕ್ರೇನ್ ಗುಪ್ತಚರ ಸಂಸ್ಥೆ ಅಧಿಕಾರಿಯೊಬ್ಬರು ಹೇಳಿದ್ದಾಗಿ ರಾಯಿಟರ್ಸ್ ವರದಿ ಮಾಡಿದೆ.

> ಯುಸೊಲ್‌ಸ್ಕಿ ಜಿಲ್ಲೆಯ ಸ್ರೆಡ್ನಿ ಗ್ರಾಮದ ಬಳಿಯ ವಾಯುನೆಲೆ ಮೇಲೆ ಡ್ರೋನ್ ದಾಳಿ ನಡೆದಿದೆ. ಸೈಬೀರಿಯಾದಲ್ಲಿ ನಡೆದ ಇಂತಹ ಮೊದಲ ದಾಳಿ ಇದಾಗಿದೆ
>
> **ಇಗೊರ್ ಕೊಬ್ಜೇವ್**, ಇರ್ಕುಟ್ಸ್ಕ್ ಪ್ರಾಂತ್ಯದ ಗವರ್ನರ್

ಹಾನಿ ಒಪ್ಪಿಕೊಂಡ ರಷ್ಯಾ: ಉಕ್ರೇನ್‌ನ ಡ್ರೋನ್‌ಗಳು ತಮ್ಮ ಐದು ವಾಯುನೆಲೆಗಳ ಮೇಲೆ ದಾಳಿ ಮಾಡಿರುವುದನ್ನು ರಷ್ಯಾ ರಕ್ಷಣಾ ಇಲಾಖೆ ಖಚಿತಪಡಿಸಿದೆ. ಹಾನಿಯಾಗಿರುವ ವಿಮಾನಗಳ ನಿರ್ದಿಷ್ಟ ಸಂಖ್ಯೆ ತಿಳಿಯಬೇಕಿದೆ ಎಂದು ಹೇಳಿದೆ.

ರಷ್ಯಾದ 40 ಯುದ್ಧ ವಿಮಾನಗಳನ್ನು ನಾಶ ಮಾಡಿರುವುದಾಗಿ ಉಕ್ರೇನ್ ಹೇಳಿಕೊಂಡಿತ್ತು.

ಎಫ್‌ಪಿವಿ ಡ್ರೋನ್‌ಗಳನ್ನು ಬಳಸಿ ಕೀವ್ ನಗರದ ಭಾಗದಿಂದ ವಾಯುನೆಲೆಗಳ ಮೇಲೆ ಉಗ್ರರು ದಾಳಿ ನಡೆಸಿದ್ದಾರೆ. ಕೆಲವು ವಿಮಾನಗಳು ಹೊತ್ತಿ ಉರಿದಿವೆ. ಸಾವು ನೋವಿನ ಬಗ್ಗೆ ವರದಿಯಾಗಿಲ್ಲ. ಕೆಲವರನ್ನು ಬಂಧಿಸಲಾಗಿದೆ ಎಂದು ರಷ್ಯಾ ಸೇನೆ ತಿಳಿಸಿದೆ.



ಕನ್ವರ್ ಲಾಲ್ ಅವತಾರದಲ್ಲಿ ದರ್ಶನ್

ದರ್ಶನ್ ನಟನೆಯ 'ಡೆವಿಲ್' ಸಿನಿಮಾದ ಚಿತ್ರೀಕರಣ ಮುಗಿದಿದ್ದು, ತಂಡ ಹೊಸ ಪೋಸ್ಟರ್ ಬಿಡುಗಡೆ ಮಾಡಿದೆ. ಅದರಲ್ಲಿ ದರ್ಶನ್ ಕನ್ವರ್ ಲಾಲ್ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಅಂಬರೀಶ್ ಅವರ 'ಅಂತ' ಚಿತ್ರದ ಬಲು ಜನಪ್ರಿಯ ಪಾತ್ರವಿದು.

'ಒಂದೇ ದಿನ ನಾಯಕ, ಖಳನಾಯಕ'



ಶ್ರೀನಗರ ಕಿಟ್ಟಿ, ರಚಿತಾ ರಾಮ್

ವಿನಾಯಕ ಕೆ.ಎಸ್

ಶ್ರೀನಗರ ಕಿಟ್ಟಿ ನಾಯಕನಾಗಿ ನಟಿಸಿರುವ 'ಸಂಜು ವೆಡ್ಸ್ ಗೀತಾ-2' ಜೂ.6ರಂದು ಮರುಬಿಡುಗಡೆಯಾಗುತ್ತಿದೆ. ಅದೇ ದಿನ ಅವರು ಖಳನಾಗಿ ನಟಿಸಿರುವ 'ಮಾದೇವ' ಚಿತ್ರ ಕೂಡ ತೆರೆಗೆ ಬರುತ್ತಿದೆ. ಎರಡು ಚಿತ್ರಗಳಲ್ಲಿನ ತಮ್ಮ ಪಾತ್ರ ಹಾಗೂ ಸಿನಿಪಯಣದ ಕುರಿತು ಅವರು ಮಾತನಾಡಿದ್ದಾರೆ...



ಈ ವರ್ಷದ ಪ್ರಾರಂಭದಲ್ಲಿ ಶ್ರೀನಗರ ಕಿಟ್ಟಿ, ರಚಿತಾ ರಾಮ್ ಜೋಡಿಯಾಗಿ ನಟಿಸಿರುವ 'ಸಂಜು ವೆಡ್ಸ್ ಗೀತಾ-2' ಚಿತ್ರ ತೆರೆಕಂಡಿತ್ತು. ಆದರೆ ಚಿತ್ರ ನಿರೀಕ್ಷಿತ ಯಶಸ್ಸು ಕಾಣಲಿಲ್ಲ. ಕಾನೂನು ತೊಡಕಿನಿಂದ ಚಿತ್ರದ ಹಕ್ಕುಗಳ ಮಾರಾಟಕ್ಕೂ ತೊಂದರೆಯಾಗಿತ್ತು. ಹೀಗಾಗಿ ಇದೀಗ ಒಂದಷ್ಟು ಬದಲಾವಣೆಗಳೊಂದಿಗೆ ಚಿತ್ರ ಮತ್ತೆ ತೆರೆಗೆ ಬರುತ್ತಿದೆ.

'ಹಿಂದೆಯೂ ಕೆಲ ಸಿನಿಮಾಗಳು ಒಮ್ಮೆ ಬಿಡುಗಡೆಗೊಂಡು ಜನರ ಅಭಿಪ್ರಾಯ ಪಡೆದು ಮತ್ತೆ ಮರು ಬಿಡುಗಡೆಗೊಂಡಿದ್ದಿದೆ. 2025ರ ಜನವರಿಯಲ್ಲಿ ಅನಿವಾರ್ಯವಾಗಿ ಚಿತ್ರ ಬಿಡುಗಡೆ ಮಾಡುವಂತೆ ಆಯಿತು. ನಮ್ಮ ಚಿತ್ರದ ಸುಮಾರು 20 ನಿಮಿಷಗಳ ದೃಶ್ಯಗಳು ಕಾನೂನು ಸಮರದಿಂದಾಗಿ ಗ್ರಾಫಿಕ್ಸ್ ಸ್ಟುಡಿಯೋದಲ್ಲಿತ್ತು. ಈಗ ಆ ದೃಶ್ಯಗಳನ್ನು ಮರಳಿ ಪಡೆದು ಸಿನಿಮಾವನ್ನು ಒಂದಷ್ಟು ಬದಲಿಸಿದ್ದೇವೆ. ನನ್ನ ಪಾತ್ರದಲ್ಲಿ ಹೆಚ್ಚು ಬದಲಾವಣೆ ಆಗಿಲ್ಲ. ರಾಗಿಣಿ, ರಂಗಾಯಣ ರಘು ಮುಂತಾದವರ ಪಾತ್ರಗಳಲ್ಲಿ ಒಂದಷ್ಟು ಬದಲಾವಣೆಯಾಗಿದೆ' ಎಂದು ಮಾತು ಪ್ರಾರಂಭಿಸಿದರು ಕಿಟ್ಟಿ.

'ಈ ವಾರ ನನ್ನದೇ ಎರಡು ಸಿನಿಮಾಗಳು ತೆರೆಗೆ ಬರುತ್ತಿವೆ. ಒಂದರಲ್ಲಿ ನಾಯಕ, ಮತ್ತೊಂದರಲ್ಲಿ ಖಳನಾಯಕ. ಬಹುಶಃ ಈ ರೀತಿಯಾಗಿ ಓರ್ವ ನಟ ಜನರ ಎದುರಿಗೆ ಬರುವುದು ಬಹಳ ಅಪರೂಪ. ವಿನೋದ್ ಪ್ರಭಾಕರ್ ಅವರ 'ಮಾದೇವ' ಚಿತ್ರದಲ್ಲಿ ಖಳನಾಯಕನ ಪಾತ್ರ ಮಾಡಿರುವೆ. 'ಸಮುದ್ರ' ನನ್ನ ಪಾತ್ರದ ಹೆಸರು. ತುಂಬ ರಗಡ್ ಪಾತ್ರ. ದೊಡ್ಡ ತಾರಾಬಳಗ ಹೊಂದಿರುವ ಉತ್ತಮ ಚಿತ್ರ' ಎಂದು ಅವರು ವಿವರಿಸಿದರು.

ಪವಿತ್ರ ಇಂಟರ್‌ನ್ಯಾಷನಲ್ ಮೂವೀಮೇಕರ್ಸ್ ಅಡಿಯಲ್ಲಿ ಛಲವಾದಿ ಕುಮಾರ್ ನಿರ್ಮಿಸಿರುವ 'ಸಂಜು ವೆಡ್ಸ್ ಗೀತಾ–2' ಚಿತ್ರಕ್ಕೆ ನಾಗಶೇಖರ್ ನಿರ್ದೇಶನವಿದೆ. ಕಿಟ್ಟಿ, ರಮ್ಯಾ ಜೋಡಿಯ 'ಸಂಜು ವೆಡ್ಸ್ ಗೀತಾ' ಹಿಟ್ ಆಗಿತ್ತು. ಅದೇ ಶೀರ್ಷಿಕೆಯನ್ನು ಉಳಿಸಿಕೊಂಡು ಬೇರೆಯದೇ ಕಥೆಯೊಂದಿಗೆ ಈ ಚಿತ್ರ ಸಿದ್ಧಗೊಂಡಿದೆ. ಸತ್ಯ ಹೆಗಡೆ ಛಾಯಾಚಿತ್ರಗ್ರಹಣ, ಶ್ರೀಧರ್ ವಿ. ಸಂಭ್ರಮ್ ಸಂಗೀತ ಈ ಚಿತ್ರಕ್ಕಿದೆ. ನಟ ಚೇತನ್ ಚಂದ್ರ, ರಾಗಿಣಿ ದ್ವಿವೇದಿ ವಿಶೇಷ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ. ರಂಗಾಯಣ ರಘು, ಸಾಧು ಕೋಕಿಲ, ತಬಲಾನಾಣಿ, ಗಿಚ್ಚಿಗಿಲಿಗಿಲಿ ವಿನೋದ್, ಖಳನಟ ಸಂಪತ್‌ಕುಮಾರ್ ಸೇರಿದಂತೆ ಸಾಕಷ್ಟು ಕಲಾವಿದರು ತಾರಾಗಣದಲ್ಲಿದ್ದಾರೆ.

'ಲೂಸ್ ಮಾದ ಯೋಗಿ ಅಭಿನಯದ 50ನೇ ಚಿತ್ರ 'ರೋಜಿ'. ಅದರಲ್ಲಿಯೂ ಪ್ರಮುಖ ಖಳನಾಯಕನಾಗಿ ನಟಿಸುತ್ತಿರುವೆ. ಮೊದಲ ಹಂತದ ಚಿತ್ರೀಕರಣ ಮುಗಿದಿದೆ. ವಿದೇಶದಲ್ಲಿ 40 ದಿನಗಳ ಚಿತ್ರೀಕರಣ ಬಾಕಿಯಿದೆ. ಆದಿತ್ಯ ಅಭಿನಯದ 'ಟೆರರ್' ಚಿತ್ರದಲ್ಲಿ ನಟಿಸಿದ್ದೇನೆ. ಚಿತ್ರೀಕರಣ ಮುಗಿದು ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದೆ. ಇನ್ನೆರಡು ಚಿತ್ರಗಳು ಕಥೆ ಕೇಳಬೇಕಿದೆ. 'ಸಂಜು ವೆಡ್ಸ್...'ಬಿಡುಗಡೆ ಕೆಲಸದಲ್ಲಿ ಮಗ್ನನಾಗಿದ್ದೆ. ಇದು ಮುಗಿದ ಬಳಿಕ ಆ ಕಥೆಗಳನ್ನು ಕೇಳುವೆ' ಎಂದು ತಮ್ಮ ಮುಂದಿನ ಯೋಜನೆಗಳನ್ನು ಬಿಚ್ಚಿಟ್ಟರು.

'ಬುಲೆಟ್' ಏರಿದ ಧರ್ಮ ಕೀರ್ತಿರಾಜ್



ಧರ್ಮ ಕೀರ್ತಿರಾಜ್

ಧರ್ಮ ಕೀರ್ತಿರಾಜ್ ನಾಯಕನಾಗಿ ನಟಿಸಿರುವ 'ಬುಲೆಟ್' ಚಿತ್ರದ ಟೀಸರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಸತ್ಯಜಿತ್ ಶಬ್ಬೀರ್ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ತೆಲುಗು, ತಮಿಳು, ಮಲೆಯಾಳ ಹಾಗೂ ಹಿಂದಿ ಭಾಷೆಗಳಲ್ಲಿ ಚಿತ್ರ ಸಿದ್ಧಗೊಂಡಿದೆ.

'ನಾನು ಭಾರತಿರಾಜ ಅವರ ನಿರ್ದೇಶನದ 'ಪದಿನಾರು ವಯದಿನಿಲೆ' ಚಿತ್ರದಲ್ಲಿ ಅಭಿನಯಿಸುವ ಮೂಲಕ ನಟನಾಗಿ ಚಿತ್ರರಂಗ ಪ್ರವೇಶಿಸಿದೆ. ಸಂಗೀತ ನಿರ್ದೇಶಕರಾದ ಇಳಯರಾಜ ಅವರು ಶಬ್ಬೀರ್ ಎಂದಿದ್ದ ನನ್ನ ಹೆಸರಿನ ಮುಂದೆ ಸತ್ಯಜಿತ್ ಎಂದು ಸೇರಿಸಿದರು. ಅಂದಿನಿಂದ ನನ್ನ ಹೆಸರು ಸತ್ಯಜಿತ್ ಶಬ್ಬೀರ್. ಈವರೆಗೂ ತೆಲುಗು, ತಮಿಳು, ಮಲಯಾಳ ಹಾಗೂ ಹಿಂದಿ ಭಾಷೆಗಳ 75 ಚಿತ್ರಗಳಲ್ಲಿ ನಟಿಸಿದ್ದೇನೆ. ಮೂಲತಃ ಕರ್ನಾಟಕದವನಾಗಿರುವ ನಾನು ಆನಂತರ ಚೆನ್ನೈ ಹಾಗೂ ಮುಂಬೈನಲ್ಲಿ ನೆಲೆಸಿದ್ದೆ. ಮೊದಲ ಚಿತ್ರವನ್ನು ಕನ್ನಡದಲ್ಲೇ ನಿರ್ಮಿಸಿ, ನಿರ್ದೇಶಿಸಬೇಕೆಂಬ ಆಸೆಯಿತ್ತು. ಅದು ಈಗ ಈಡೇರಿದೆ. ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಿದು. ಜೂನ್ 20ರಂದು ತೆರೆಗೆ ಬರಲಿದೆ' ಎಂದರು ನಿರ್ದೇಶಕರು.

ಶ್ರೀಯಾ ಶುಕ್ಲ ನಾಯಕಿ. ಹಿರಿಯ ನಟಿ ಭವ್ಯ, ಶೋಭರಾಜ್, ಶಿವ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ರಾಜ್ ಭಾಸ್ಕರ್ ಸಂಗೀತ ನಿರ್ದೇಶನ, ಪಿ.ವಿ.ಆರ್ ಸ್ವಾಮಿ ಛಾಯಾಚಿತ್ರಗ್ರಹಣ ಹಾಗೂ ಗುರುಪ್ರಸಾದ್ ಸಂಕಲನ ಈ ಚಿತ್ರಕ್ಕಿದೆ.

ತೆರೆಗೆ ಬರಲು ಸಜ್ಜಾದ 'X&Y'



'ರಾಮಾ ರಾಮಾ ರೇ' ಖ್ಯಾತಿಯ ಡಿ.ಸತ್ಯಪ್ರಕಾಶ್ ನಿರ್ಮಿಸಿ, ನಿರ್ದೇಶಿಸಿರುವ 'X&Y' ಚಿತ್ರ ತೆರೆಗೆ ಬರಲು ಸಜ್ಜಾಗಿದೆ.

'ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್ ಮುಗಿದು ಡಿಟಿಎಸ್ ಕೆಲಸ ನಡೆಯುತ್ತಿದೆ. ಫ್ಯಾಂಟಸಿ, ಸೋಷಿಯಲ್ ಡ್ರಾಮಾ ಹೊಂದಿರುವ ಕಥೆಯೇ ಈ ಚಿತ್ರದ ವಿಶೇಷತೆ. ಇಲ್ಲಿವರೆಗೆ ಪುನರ್ಜನ್ಮ, ಸತ್ತ ಮೇಲೆ ದೆವ್ವವಾಗುವ ಕಥೆಗಳನ್ನು ನೋಡಿದ್ದೇವೆ. ಆದರೆ ಹುಟ್ಟೇ ಇಲ್ಲದ ಆತ್ಮದ ಕುರಿತಾಗಿ ಫ್ಯಾಂಟಸಿ ಕಥೆಯನ್ನು ನೋಡಿಲ್ಲ. ಅಂಥ ಕಥೆ ಈ ಚಿತ್ರದಲ್ಲಿದೆ. ಚಿತ್ರವನ್ನು ವೀಕ್ಷಿಸಿದ ಪ್ರಾದೇಶಿಕ ಸೆನ್ಸಾರ್ ಮಂಡಳಿ ಯು/ಎ ಪ್ರಮಾಣಪತ್ರವನ್ನು ನೀಡಿದೆ. ಜೂನ್ ತಿಂಗಲ್ಲೇ ಚಿತ್ರ ಬಿಡುಗಡೆ ಆಲೋಚನೆಯಿದೆ' ಎಂದರು ಸತ್ಯಪ್ರಕಾಶ್.

'ಮ್ಯಾನ್ ಆಫ್ ದ ಮ್ಯಾಚ್' ಚಿತ್ರದ ನಟ ಅಥರ್ವ ಪ್ರಕಾಶ್, 'ದೂರದರ್ಶನ' ಸಿನಿಮಾ ನಾಯಕಿ ಅಯನಾ ಹಾಗೂ ಬೃಂದಾ ಆಚಾರ್ಯ ಮುಖ್ಯ ಪಾತ್ರಗಳಲ್ಲಿ ನಟಿಸಿದ್ದಾರೆ. ದೊಡ್ಡಣ್ಣ, ವೀಣಾ ಸುಂದರ್, ಸುಂದರ್ ಮೊದಲಾದವರು ತಾರಾಗಣದಲ್ಲಿದ್ದಾರೆ.

ಬೆಂಗಳೂರು ಮತ್ತು ಮಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಸತ್ಯ ಪಿಕ್ಚರ್ಸ್ ಬ್ಯಾನರ್ ನಿರ್ಮಾಣದ ಈ ಚಿತ್ರಕ್ಕೆ ಲವಿತ್ ಛಾಯಾಚಿತ್ರಗ್ರಹಣ, ಕೌಶಿಕ್ ಹರ್ಷ ಸಂಗೀತ, ಬಿ.ಎಸ್.ಕೆಂಪರಾಜು ಸಂಕಲನವಿದೆ. ಚಿತ್ರದಲ್ಲಿ ಆರು ಹಾಡುಗಳಿದ್ದು ರಾಜೇಶ್ ಕೃಷ್ಣನ್, ಹೇಮಂತ್ ಮೊದಲಾದವರು ಹಾಡಿದ್ದಾರೆ.

ಉಕ್ಕಿ ಹರಿಯುತ್ತಿರುವ 10 ನದಿಗಳು • ರಸ್ತೆ, ರೈಲು, ದೋಣಿ ಸಾರಿಗೆ ವ್ಯತ್ಯಯ

ಭಾರಿ ಮಳೆ: ಈಶಾನ್ಯ ರಾಜ್ಯಗಳು ತತ್ತರ



ತ್ರಿಪುರಾದ ಅಗರ್ತಲಾದಲ್ಲಿ ಪ್ರವಾಹ ಪೀಡಿತ ಪ್ರದೇಶದಿಂದ ಜನರನ್ನು ರಬ್ಬರ್ ಬೋಟ್‌ಗಳ ಮೂಲಕ ರಕ್ಷಿಸಲಾಯಿತು. ಪಿಟಿಐ ಚಿತ್ರ



ಅಸ್ಸಾಂನ ನಗಾಂವ್ ಜಿಲ್ಲೆಯ ಪ್ರವಾಹ ಪೀಡಿತ ಕಂಪುರ ಗ್ರಾಮದ ಜನರು ಸುರಕ್ಷಿತ ಪ್ರದೇಶದತ್ತ ತೆರಳಿದರು —ಎಎಫ್‌ಪಿ ಚಿತ್ರ

ಗುವಾಹಟಿ/ ನವದೆಹಲಿ (ಪಿಟಿಐ/ಎಎಫ್‌ಪಿ): ಈಶಾನ್ಯ ರಾಜ್ಯಗಳಾದ ಅಸ್ಸಾಂ, ಅರುಣಾಚಲ ಪ್ರದೇಶ, ಸಿಕ್ಕಿಂ, ತ್ರಿಪುರಾ ಮತ್ತು ಮಣಿಪುರದಲ್ಲಿ ಭಾರಿ ಮಳೆ ಮತ್ತು ಪ್ರವಾಹದ ಪರಿಸ್ಥಿತಿ ಮುಂದುವರಿದಿದ್ದು, ಜನಜೀವನ ತತ್ತರಿಸಿದೆ. ಮಳೆ ಸಂಬಂಧಿ ಅವಘಡಗಳಿಂದ ಕಳೆದ ಎರಡು ದಿನಗಳಲ್ಲಿ ಮೃತಪಟ್ಟವರ ಸಂಖ್ಯೆ 30ಕ್ಕೆ ಏರಿದೆ.

ಅಸ್ಸಾಂನಲ್ಲಿ ಬ್ರಹ್ಮಪುತ್ರ ಮತ್ತು ಬರಾಕ್ ಸೇರಿದಂತೆ ಪ್ರಮುಖ 10 ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, 15 ಜಿಲ್ಲೆಗಳಲ್ಲಿ 78 ಸಾವಿರಕ್ಕೂ ಹೆಚ್ಚು ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರವಾಹ ಮತ್ತು ಭೂಕುಸಿತದ ಪರಿಣಾಮ ರಸ್ತೆ, ರೈಲು ಮತ್ತು ದೋಣಿ ಸಂಚಾರದಲ್ಲಿ ವ್ಯತ್ಯಯಗಳು ಉಂಟಾಗಿವೆ.

ನದಿಗಳು ಉಕ್ಕಿ ಹರಿಯುತ್ತಿರುವುದರಿಂದ ಕೇಂದ್ರ ಜಲ ಆಯೋಗವು (ಸಿಡಬ್ಲ್ಯುಸಿ) ರಾಜ್ಯದಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚನೆ ನೀಡಿದೆ.

ಸಾವು- ನೋವು: ಮಳೆ ಮತ್ತು ಮಳೆ ಸಂಬಂಧಿ ಅವಘಡಗಳಿಂದ ಅಸ್ಸಾಂನಲ್ಲಿ ಇಲ್ಲಿಯವರೆಗೆ ಎಂಟು ಜನರು ಮೃತಪಟ್ಟಿದ್ದಾರೆ.

ಭೂಕುಸಿತದಿಂದ ಐವರು ಮೃತಪಟ್ಟಿದ್ದರೆ, ಪ್ರವಾಹಕ್ಕೆ ಸಿಲುಕಿ ಮೂವರು ಅಸುನೀಗಿದ್ದಾರೆ ಎಂದು ಅಸ್ಸಾಂ ರಾಜ್ಯದ ವಿಪತ್ತು ನಿಯಂತ್ರಣಾ ಪ್ರಾಧಿಕಾರ ತಿಳಿಸಿದೆ.

ಅರುಣಾಚಲ ಪ್ರದೇಶದಲ್ಲಿ ಎರಡು ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆ ಮತ್ತು ಭೂಕುಸಿತದಿಂದ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಸಿಕ್ಕಿಂ ರಾಜ್ಯದಲ್ಲಿ ವಿವಿಧೆಡೆ ಭೂಕುಸಿತ ಸಂಭವಿಸಿದ್ದು, ಹಲವೆಡೆ ರಸ್ತೆಗಳು ಬಂದ್ ಆಗಿವೆ. ಇದರ ಪರಿಣಾಮ 1,500ಕ್ಕೂ ಹೆಚ್ಚು ಪ್ರವಾಸಿಗರು ಸಿಲುಕಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಣಿಪುರದಲ್ಲಿ 883 ಮನೆಗಳಿಗೆ ಹಾನಿ: ಮಣಿಪುರದಲ್ಲಿ ಭಾರಿ ಮಳೆ, ಪ್ರವಾಹ ಮತ್ತು ಭೂ ಕುಸಿತದಿಂದ 883 ಮನೆಗಳಿಗೆ ಹಾನಿಯಾಗಿವೆ. ಅಲ್ಲದೆ 3,802 ಜನರು ತೊಂದರೆಗೆ ಸಿಲುಕಿದ್ದಾರೆ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ಸಂಚಾರ ವ್ಯತ್ಯಯ: ಅಸ್ಸಾಂನ ಬರಾಯಿಗ್ರಾಮ್– ದುಲ್ಲಾಬ್‌ಚೆರಾ ವಿಭಾಗದಲ್ಲಿ ಹಳಿಗಳ ಮೇಲೆ ನೀರು ಹರಿಯುತ್ತಿದೆ. ಇದರಿಂದ ದುಲ್ಲಾಬ್‌ಚೆರಾ–ಸಿಲ್ಚಾರ್ ನಡುವಿನ ಎರಡು ಪ್ರಯಾಣಿಕ ರೈಲುಗಳು ಮತ್ತು ಬದರ್‌ಪುರ್– ದುಲ್ಲಾಬ್‌ಚೆರಾ–ಬದರ್‌ಪುರ್ ಪ್ರಯಾಣಿಕ ರೈಲುಗಳ ಸಂಚಾರವನ್ನು ಎರಡು ದಿನಗಳವರೆಗೆ ರದ್ದುಗೊಳಿಸಲಾಗಿದೆ. ಅಲ್ಲದೆ ಇನ್ನೂ ಕೆಲ ಮಾರ್ಗಗಳ ರೈಲು ಸಂಚಾರವನ್ನು ಮಂಗಳವಾರದವರೆಗೆ ರದ್ದುಗೊಳಿಸಲಾಗಿದೆ ಎಂದು ಈಶಾನ್ಯ ಗಡಿನಾಡು ರೈಲ್ವೆ (ಎನ್‌ಎಫ್‌ಆರ್) ವಕ್ತಾರರು ತಿಳಿಸಿದ್ದಾರೆ.

ಕಾಮರೂಪ ಜಿಲ್ಲೆಯ ಚಾಯಗಾಂವ್ ಪ್ರದೇಶದಲ್ಲಿನ ರಾಷ್ಟ್ರೀಯ ಹೆದ್ದಾರಿ 17ರ ಒಂದು ಭಾಗ ಮುಳುಗಡೆಯಾಗಿದೆ. ಪರ್ಯಾಯ ಮಾರ್ಗದಲ್ಲಿ ಸಂಚಾರ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಬ್ರಹ್ಮಪುತ್ರ ನದಿ ನೀರಿನ ಮಟ್ಟ ಏರಿಕೆ ಆಗುತ್ತಿರುವುದರಿಂದ ಜೋರ್ಹಟ್ ಮತ್ತು ಮಜುಲಿ ನಡುವಿನ ದೋಣಿ ಸೇವೆ ರದ್ದುಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

14 ಜನರ ರಕ್ಷಿಸಿದ ವಾಯುಪಡೆ

ತಿನ್‌ಸುಕಿಯಾ (ಅಸ್ಸಾಂ): ಅಸ್ಸಾಂ– ಅರುಣಾಚಲ ಪ್ರದೇಶ ಗಡಿಯಲ್ಲಿ ಭಾರಿ ಮಳೆಯಿಂದ ಉಕ್ಕಿ ಹರಿಯುತ್ತಿರುವ ಬೊಮ್ಜಿರ್ ನದಿಯಲ್ಲಿ ಸಿಲುಕಿದ್ದ 14 ಮಂದಿಯನ್ನು ಭಾರತೀಯ ವಾಯುಪಡೆ (ಐಎಎಫ್) ಭಾನುವಾರ ರಕ್ಷಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನದಿಯಲ್ಲಿ ಸಿಲುಕಿದ್ದ ಅಸ್ಸಾಂನ 13 ಮತ್ತು ಅರುಣಾಚಲ ಪ್ರದೇಶದ ಒಬ್ಬರನ್ನು ವಾಯುಪಡೆಯು ಹೆಲಿಕಾಪ್ಟರ್ ನೆರವಿನಿಂದ ರಕ್ಷಿಸಿ, ಸುರಕ್ಷಿತವಾಗಿ ಮನೆಗೆ ಕಳುಹಿಸಿದೆ ಎಂದು ಅವರು ಹೇಳಿದ್ದಾರೆ.

ಎಲ್ಲ ನೆರವು ಸಿಗಲಿದೆ: ಅಮಿತ್ ಶಾ

ನವದೆಹಲಿ (ಪಿಟಿಐ): ಭಾರಿ ಮಳೆ, ಪ್ರವಾಹ ಮತ್ತು ಭೂಕುಸಿತದಿಂದ ತತ್ತರಿಸಿರುವ ಅಸ್ಸಾಂ, ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಮಣಿಪುರದ ರಾಜ್ಯಪಾಲರ ಜತೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ಮಾತುಕತೆ ನಡೆಸಿ ಪರಿಸ್ಥಿತಿಯ ಅವಲೋಕನ ನಡೆಸಿದ್ದಾರೆ.

'ಪರಿಸ್ಥಿತಿ ನಿಭಾಯಿಸಲು ಕೇಂದ್ರ ಸರ್ಕಾರ ಎಲ್ಲ ರೀತಿಯ ನೆರವನ್ನು ನೀಡಲಿದೆ. ಮೋದಿ ನೇತೃತ್ವದ ಸರ್ಕಾರವು ಈಶಾನ್ಯ ರಾಜ್ಯಗಳ ಜನರ ಬೆಂಬಲಕ್ಕೆ ಬಂಡೆಯಂತೆ ನಿಲ್ಲಲಿದೆ' ಎಂದು ಅಮಿತ್ ಶಾ ಅವರು ಹೇಳಿದ್ದಾರೆ.

ಕೇರಳ ಆಕ್ಷೇಪ

ತಿರುವನಂತಪುರಂ (ಪಿಟಿಐ): 'ಮುಖ್ಯಮಂತ್ರಿ ಪರಿಹಾರ ನಿಧಿಗೆ ವಿದೇಶಿ ನೆರವು ಪಡೆಯಲು ಮಹಾರಾಷ್ಟ್ರಕ್ಕೆ ಅನುಮತಿ ನೀಡಿ, ಕೇರಳಕ್ಕೆ ನಿರಾಕರಿಸುವ ಮೂಲಕ ಕೇಂದ್ರ ಸರ್ಕಾರ ಅಸಮಾನತೆ ತೋರಿದೆ. ಇದು ಒಕ್ಕೂಟ ವ್ಯವಸ್ಥೆಯ ನಿಯಮಗಳ ಸ್ಪಷ್ಟ ಉಲ್ಲಂಘನೆ' ಎಂದು ಕೇರಳ ಸರ್ಕಾರ ಆರೋಪಿಸಿದೆ.

'2018ರ ಪ್ರವಾಹದ ಸಂದರ್ಭದಲ್ಲಿ ಕೇರಳ ಸರ್ಕಾರ ವಿದೇಶಿ ನೆರವು ಪಡೆಯಲು ಕೇಂದ್ರ ಅನುಮತಿ ನೀಡಿರಲಿಲ್ಲ' ಎಂದು ರಾಜ್ಯ ಹಣಕಾಸು ಸಚಿವ ಬಾಲಗೋಪಾಲ್ ದೂರಿದ್ದಾರೆ.

'ಇಂಡಿಯಾ'ದ ಒಡಕು ಬಹಿರಂಗ

19ರಂದು ಐದು ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿವಿಧ ರಾಜ್ಯಗಳ ಐದು ವಿಧಾನಸಭಾ ಕ್ಷೇತ್ರಗಳಿಗೆ ಜೂನ್ 19ರಂದು ನಡೆಯಲಿರುವ ಉಪಚುನಾವಣೆಯು ವಿಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದಲ್ಲಿನ ಒಡಕನ್ನು ಮತ್ತೊಮ್ಮೆ ಬಹಿರಂಗಪಡಿಸಿದೆ.

ಚುನಾವಣೆಗೆ ಸ್ಪರ್ಧಿಸುವುದಕ್ಕೆ ಸಂಬಂಧಿಸಿ ಮೈತ್ರಿಕೂಟದ ಪ್ರಮುಖ ಪಕ್ಷಗಳು ಯಾವುದೇ ಸಾಮಾನ್ಯ ಅಂಶಗಳನ್ನು ಹೊಂದಿಲ್ಲ. ಮತ್ತೊಂದೆಡೆ ಅಂಗಪಕ್ಷಗಳು ಒಮ್ಮತದ ಅಭ್ಯರ್ಥಿಗಳನ್ನು ಕಣಕ್ಕಿಳಿಸುವ ಬದಲು, ಪರಸ್ಪರರ ವಿರುದ್ಧವೇ ಸೆಣಸಲು ಮುಂದಾಗಿರುವುದೇ ಇದಕ್ಕೆ ಕಾರಣ.

ಗುಜರಾತ್‌ನ ವಿಸಾವಾಡಾ ಮತ್ತು ಕಡಿ, ಪಶ್ಚಿಮ ಬಂಗಾಳದ ಕಾಳಿಗಂಜ್, ಪಂಜಾಬ್‌ನ ಲುಧಿಯಾನ್ (ಪಶ್ಚಿಮ) ಹಾಗೂ ಕೇರಳದ ನಿಲಂಬೂರ್ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಲಿದೆ. ಕಾಂಗ್ರೆಸ್ ಪಕ್ಷ ಈ ಎಲ್ಲ ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಿದೆ.

'ಇಂಡಿಯಾ'ದ ಅಂಗಪಕ್ಷಗಳ ಪೈಕಿ, ಆಮ್ ಆದ್ಮಿ ಪಕ್ಷವು (ಎಎಪಿ) ಗುಜರಾತ್ ಹಾಗೂ ಪಂಜಾಬ್‌ನಲ್ಲಿ ಸ್ಪರ್ಧಿಸುತ್ತಿದ್ದರೆ, ಪಶ್ಚಿಮ ಬಂಗಾಳದ ಕಾಳಿಗಂಜ್‌ನಲ್ಲಿ ಟಿಎಂಸಿ ಹಾಗೂ ನಿಲಂಬೂರ್ ಕ್ಷೇತ್ರದಿಂದ ಸಿಪಿಎಂ ಸ್ಪರ್ಧಿಸುತ್ತಿವೆ.

ಪಶ್ಚಿಮ ಬಂಗಾಳದಲ್ಲಿ, ಕಳೆದ ಒಂದು ದಶಕದಿಂದ ಸಿಪಿಎಂ ಪಕ್ಷದ ವಿರುದ್ಧ ಸ್ಪರ್ಧೆ ಮಾಡುತ್ತಿದ್ದ ಕಾಂಗ್ರೆಸ್, ಈ ಉಪಚುನಾವಣೆಯಲ್ಲಿ ಟಿಎಂಸಿ ವಿರುದ್ಧ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತಿದೆ. ಈ ಉಪಚುನಾವಣೆಯಲ್ಲಿ, ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಹಾಗೂ ಟಿಎಂಸಿ ನಡುವೆ ಹಲವು ಸುತ್ತಿನ ಮಾತುಕತೆಗಳು ನಡೆದಿದ್ದರೂ, ಅವು ಫಲ ನೀಡಿಲ್ಲ.

ಕಳೆದ ನವೆಂಬರ್‌ನಲ್ಲಿ ಪಶ್ಚಿಮ ಬಂಗಾಳದ 6 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಸಿಪಿಎಂ ಪಕ್ಷಗಳೆರಡು ಪರಸ್ಪರರ ವಿರುದ್ಧ ಸೆಣಸಿದ್ದವು. ಆದರೆ, ಟಿಎಂಸಿ ವಿರುದ್ಧ ಜಯ ಸಾಧಿಸಲು ವಿಫಲವಾಗಿದ್ದವು. ಗಮನಾರ್ಹ ಬೆಳವಣಿಗೆಯಲ್ಲಿ, ಈ ಬಾರಿ ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸೇರಲು ಟಿಎಂಸಿ ಪ್ರಯತ್ನಿಸುತ್ತಿದೆ. ಆದರೆ, ಇದಕ್ಕೆ ಕಾಂಗ್ರೆಸ್ ಹೈಕಮಾಂಡ್ ಇನ್ನೂ ಹಸಿರು ನಿಶಾನೆ ತೋರಿಲ್ಲ.

ಕಾಂಗ್ರೆಸ್ ಹಾಗೂ ಎಎಪಿ ನಡುವಿನ ಸಂಬಂಧದಲ್ಲಿಯೂ ಬಿರುಕು ಕಾಣಿಸಿಕೊಂಡಿದೆ. ಗುಜರಾತ್‌ನಲ್ಲಿ ಎರಡು ಪಕ್ಷಗಳು ಪ್ರತ್ಯೇಕವಾಗಿಯೇ ಸ್ಪರ್ಧಿಸುತ್ತಿವೆ. ವಿಸಾವಾಡಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೋಪಾಲ್ ಇಟಾಲಿಯಾ ಪರ ಎಎಪಿ, ಶನಿವಾರ ರೋಡ್‌ಶೋ ನಡೆಸಿದೆ. ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ಪಕ್ಷದ ಶಾಸಕ ಬಿಜೆಪಿ ಸೇರ್ಪಡೆಯಾಗಿರುವ ಕಾರಣ, ಇಲ್ಲಿ ಉಪಚುನಾವಣೆ ನಡೆಯುತ್ತಿದೆ.

'ಭಿನ್ನಮತ: ಮಹತ್ವ ಬೇಡ'

'ಇಂಡಿಯಾ' ಮೈತ್ರಿಕೂಟ ಅಂಗಪಕ್ಷಗಳು ಪರಸ್ಪರರ ವಿರುದ್ಧ ಸ್ಪರ್ಧಿಸುತ್ತಿರುವ ಈ ಬೆಳವಣಿಗೆ ಬಗ್ಗೆ ಹೆಚ್ಚು ಮಹತ್ವ ನೀಡುವ ಅಗತ್ಯ ಇಲ್ಲ. ಕಳೆದ ವರ್ಷದ ಉಪಚುನಾವಣೆಗಳ ವೇಳೆಯೂ ಹೀಗೆಯೇ ಆಗಿತ್ತು. ಭವಿಷ್ಯದಲ್ಲಿಯೂ ಇದು ಮುಂದುವರಿಯುತ್ತದೆ' ಎಂದು ವಿರೋಧ ಪಕ್ಷಗಳ ಪಾಳಯದ ಮೂಲಗಳು ಹೇಳುತ್ತವೆ.

'ವಿರೋಧ ಪಕ್ಷಗಳು ಸಂಸತ್‌ನಲ್ಲಿ ಯಾವ ರೀತಿ ಪರಸ್ಪರ ಸಹಕಾರ ನೀಡುತ್ತವೆ ಎಂಬುದಷ್ಟೆ ಮುಖ್ಯ. ವಿಪಕ್ಷಗಳು ಅಲ್ಲಿ ಒಗ್ಗಟ್ಟಿನಿಂದಿವೆ' ಎಂದು ವಿರೋಧ ಪಕ್ಷದ ಹಿರಿಯ ಮುಖಂಡರೊಬ್ಬರು ಹೇಳುತ್ತಾರೆ.

'ಆಪರೇಷನ್ ಸಿಂಧೂರ' ಕುರಿತ ಸಿಡಿಎಸ್ ಹೇಳಿಕೆ

ವಿಶೇಷ ಅಧಿವೇಶನಕ್ಕೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ದೇಶದ ಯುದ್ಧ ವಿಮಾನಗಳ ನಷ್ಟದ ಕುರಿತು ರಕ್ಷಣಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಅನಿಲ್ ಚೌಹಾಣ್ ಹೇಳಿಕೆಯ ಬೆನ್ನಲ್ಲೇ ಪ್ರತಿಕ್ರಿಯಿಸಿರುವ ಕಾಂಗ್ರೆಸ್, ರಕ್ಷಣಾ ಮತ್ತು ವಿದೇಶಾಂಗ ನೀತಿಗಳ ಕಾರ್ಯತಂತ್ರದ ಕುರಿತು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯುವಂತೆ ಆಗ್ರಹಿಸಿದೆ.

'ಸಿಡಿಎಸ್ ಅನಿಲ್ ಚೌಹಾಣ್ ಅವರು ಸಿಂಗಪುರದಲ್ಲಿ ಕೆಲವು ಪ್ರಮುಖ ಹೇಳಿಕೆಗಳನ್ನು ನೀಡಿದ್ದಾರೆ. ಮೊದಲೇ ನಡೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಪ್ರಧಾನಿ ಅಥವಾ ರಕ್ಷಣಾ ಸಚಿವರು ಈ ಸಂಗತಿಗಳನ್ನು ವಿರೋಧ ಪಕ್ಷಗಳ ನಾಯಕರಿಗೆ ತಿಳಿಸಿದ್ದರೆ ಚೆನ್ನಾಗಿತ್ತು' ಎಂದು ಎಐಸಿಸಿಯ ಸಂವಹನ ವಿಭಾಗದ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಹೇಳಿದರು.

'ಆಪರೇಷನ್ ಸಿಂಧೂರ ಕಾರ್ಯಾಚರಣೆಯ ನಂತರದಲ್ಲಿ ವಿದೇಶಾಂಗ ನೀತಿಯ ಕಾರ್ಯತಂತ್ರ ಮತ್ತು ಆರ್ಥಿಕ ವಿಚಾರಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕೆಂಬ ಬೇಡಿಕೆಗೆ ಅನಿಲ್ ಚೌಹಾಣ್ ಅವರ ಹೇಳಿಕೆಗಳು ಬಲ ತುಂಬಿವೆ' ಎಂದು ಅವರು ತಿಳಿಸಿದರು.

'ಪಾಕಿಸ್ತಾನದ ಜತೆಗೆ ಈಚೆಗೆ ನಡೆದ ಮಿಲಿಟರಿ ಸಂಘರ್ಷದ ಆರಂಭದಲ್ಲಿ ಭಾರತ ಕೆಲವು ಯುದ್ಧ ವಿಮಾನಗಳನ್ನು ಕಳೆದುಕೊಂಡಿದೆ. ಬಳಿಕ ನಾವು ತಂತ್ರಗಾರಿಕೆಯನ್ನು ಬದಲಿಸಿಕೊಂಡೆವು' ಎಂದು ಚೌಹಾಣ್ ಸಿಂಗಪುರದಲ್ಲಿ ಶನಿವಾರ ಹೇಳಿದ್ದರು.

'ಸರ್ವಪಕ್ಷಗಳ ಸಭೆ ಮತ್ತು ವಿಶೇಷ ಅಧಿವೇಶನವನ್ನು ಕರೆಯುವಂತೆ ನಾವು ಆಗ್ರಹಿಸುತ್ತಲೇ ಇದ್ದೇವೆ. ಕಾರ್ಗಿಲ್ ಯುದ್ಧದ ಬಳಿಕ ನಡೆಸಿದ ಮಾದರಿಯಲ್ಲೇ ವಿಶೇಷ ಅಧಿವೇಶನ ಕರೆದು ಈ ಬಗ್ಗೆ ಚರ್ಚಿಸಬೇಕು' ಎಂದು ಜೈರಾಂ ರಮೇಶ್ ಆಗ್ರಹಿಸಿದರು.


'ಕಾರ್ಗಿಲ್ ಯುದ್ಧ ಅಂತ್ಯವಾದ ಬಳಿಕ ಈಗಿನ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ತಂದೆಯ ಅಧ್ಯಕ್ಷತೆಯಲ್ಲಿ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಪರಿಶೀಲನಾ ಸಮಿತಿಯೊಂದನ್ನು ರಚಿಸಿದ್ದರು. ಸಮಿತಿಯ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಿ ಚರ್ಚಿಸಲಾಗಿತ್ತು. ಈಗ ಅಂತಹ ಸಮಿತಿ ರಚಿಸಲಾಗುವುದೇ' ಎಂದು ಪ್ರಶ್ನಿಸಿದರು.

'ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಈ ವಿಷಯಗಳನ್ನು ಸಂಸತ್ತಿನ ವಿಶೇಷ ಅಧಿವೇಶನದಲ್ಲಿ ಚರ್ಚಿಸಬೇಕು' ಎಂದು ಎಐಸಿಸಿ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಆಗ್ರಹಿಸಿದರು.

'ಅಮೆರಿಕ ಯುದ್ಧ ವಿರಾಮ ಪ್ರಕಟಿಸುತ್ತಿದ್ದಂತೆಯೇ ನಾಯಕರು ಆಪರೇಷನ್ ಸಿಂಧೂರ ಕುರಿತು ಚರ್ಚಿಸಲು ವಿದೇಶಗಳಿಗೆ ತೆರಳಿದ್ದಾರೆ. ಪ್ರಶ್ನೆಗಳಿಗೆ ಯಾರು ಉತ್ತರಿಸುತ್ತಾರೆ? ಉತ್ತರ ಸರ್ಕಾರದಿಂದ ಬರಬೇಕು, ಸೇನಾಪಡೆಗಳಿಂದ ಅಲ್ಲ' ಎಂದರು.

ಪುಣೆ ಮೂಲದ ಇನ್‌ಫ್ಲುಯೆನ್ಸರ್ ಶರ್ಮಿಷ್ಠಾ ಬಂಧನ ಪ್ರಕರಣ

ಆಯ್ದ ಪ್ರಕರಣಗಳಲ್ಲಿ ಮಾತ್ರ ಕ್ರಮ: ಬಿಜೆಪಿ



ಅಮಿತ್ ಮಾಳವೀಯಾ

ನವದೆಹಲಿ(ಪಿಟಿಐ): ಪುಣೆ ಮೂಲದ ಇನ್‌ಸ್ಟಾಗ್ರಾಮ್ ಇನ್‌ಫ್ಲುಯೆನ್ಸರ್ ಶರ್ಮಿಷ್ಠಾ ಪನೋಲಿ ಅವರನ್ನು ಬಂಧಿಸಿರುವ ಪಶ್ಚಿಮ ಬಂಗಾಳ ಸರ್ಕಾರದ ಕ್ರಮವನ್ನು ಖಂಡಿಸಿರುವ ಬಿಜೆಪಿ, 'ತನ್ನ ಮತಬ್ಯಾಂಕ್ ಓಲೈಕೆಗಾಗಿ ಟಿಎಂಸಿ ನೇತೃತ್ವದ ಸರ್ಕಾರ ಹಿಂದೂ ಯುವತಿಯನ್ನು ಗುರಿಯಾಗಿಸಿ ಕ್ರಮ ಕೈಗೊಂಡಿದೆ' ಎಂದು ಭಾನುವಾರ ಟೀಕಿಸಿದೆ.

'ಪಶ್ಚಿಮ ಬಂಗಾಳದ ಸರ್ಕಾರವು ತನ್ನ ಓಲೈಕೆ ರಾಜಕೀಯ ಭಾಗವಾಗಿ ಆಯ್ದ ಪ್ರಕರಣಗಳಿಗೆ ಸಂಬಂಧಿಸಿ ಮಾತ್ರ ಕ್ರಮ ಕೈಗೊಳ್ಳುತ್ತಿದೆ' ಎಂದು ಬಿಜೆಪಿಯ ಪಶ್ಚಿಮ ಬಂಗಾಳದ ಸಹ ಉಸ್ತುವಾರಿಯಾಗಿರುವ ಅಮಿತ್ ಮಾಳವೀಯಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'22 ವರ್ಷದ ಶರ್ಮಿಷ್ಠಾ ಪನೋಲಿ ತನ್ನ ಸಾಮಾಜಿಕ ಮಾಧ್ಯಮ ಖಾತೆಯಿಂದ ವಿಡಿಯೊಗಳನ್ನು ಅಳಿಸಿ ಹಾಕಿದ್ದಾರೆ. ಮೇ 15ರಂದು ಬಹಿರಂಗವಾಗಿ ಕ್ಷಮೆಯನ್ನು ಕೇಳಿದ್ದರೂ ಆಕೆಯನ್ನು ಬಂಧಿಸಿ, 14 ದಿನ ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ' ಎಂದು ಮಾಳವೀಯಾ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಆಪರೇಷನ್ ಸಿಂಧೂರ' ಕುರಿತು ಬಾಲಿವುಡ್ ನಟ-ನಟಿಯರು ಮೌನವಹಿಸಿದ್ದರು ಎಂದು ಟೀಕಿಸಿದ್ದ ಶರ್ಮಿಷ್ಠಾ, ಈ ಕುರಿತ ವಿಡಿಯೊ ಅಪ್‌ಲೋಡ್ ಮಾಡಿದ್ದರು. ಅವರ ಹೇಳಿಕೆಗಳು ಕೋಮು ಭಾವನೆ ಕೆರಳಿಸುವಂತಿವೆ ಎಂಬ ಆರೋಪದಡಿ ಪಶ್ಚಿಮ ಬಂಗಾಳ ಪೊಲೀಸರು ಮೇ 30ರಂದು ಗುರುಗ್ರಾಮದಲ್ಲಿ ಶರ್ಮಿಷ್ಠಾ ಅವರನ್ನು ಬಂಧಿಸಿದ್ದರು. ಕೋಲ್ಕತ್ತದ ನ್ಯಾಯಾಲಯವೊಂದು ಅವರನ್ನು ಜೂನ್ 13ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

'ನ್ಯಾಯಯುತ ಕ್ರಮವಿರಲಿ'



ಪವನ ಕಲ್ಯಾಣ್

ಅಮರಾವತಿ: ಕೋಮು ಸೌಹಾರ್ದಕ್ಕೆ ಧಕ್ಕೆ ತರುವ ವಿಡಿಯೊ ಹಂಚಿಕೊಂಡ ಆರೋಪದಡಿ ಬಂಧಿಸಲಾಗಿರುವ ಪುಣೆಯ ಮೂಲದ ಶರ್ಮಿಷ್ಠಾ ಪನೋಲಿ ಪ್ರಕರಣದಲ್ಲಿ 'ನ್ಯಾಯಯುತ'ವಾಗಿ ನಡೆದುಕೊಳ್ಳುವಂತೆ ಪಶ್ಚಿಮ ಬಂಗಾಳ ಪೊಲೀಸರಿಗೆ ಆಂಧ್ರಪ್ರದೇಶ ಡಿಸಿಎಂ ಪವನ ಕಲ್ಯಾಣ್ ಮನವಿ ಮಾಡಿದ್ದಾರೆ.

'ಧರ್ಮನಿಂದನೆಯನ್ನು ಎಲ್ಲರೂ ಖಂಡಿಸಬೇಕು. ಆದರೆ, ಜಾತ್ಯತೀತತೆಯನ್ನು ಗುರಾಣಿಯಂತೆ ಬಳಸಬಾರದು. ಜಾತ್ಯತೀತತೆ ಎಂಬುದು ಕೆಲವರಿಗೆ ಗುರಾಣಿಯಂತೆ ಹಾಗೂ ಇತರರಿಗೆ ಖಡ್ಗದಂತೆ ಆಗಬಾರದು. ಎಲ್ಲರಿಗೂ ಒಂದೇ ನ್ಯಾಯ ಇರಬೇಕು. ಪಶ್ಚಿಮ ಬಂಗಾಳ ಪೊಲೀಸರೇ, ಇಡೀ ದೇಶವೇ ಗಮನಿಸುತ್ತಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಎಲ್ಲರಿಗೂ ಒಂದೇ ನ್ಯಾಯ ಇರಬೇಕು. ಅದು ರಾಜಕೀಯ ಅನುಕೂಲಕ್ಕೆ ತಕ್ಕಂತೆ ಇರಬಾರದು. ಈ ಪ್ರಕರಣವನ್ನು ಇಡೀ ದೇಶವೇ ಗಮನಿಸುತ್ತಿದೆ' ಎಂದು ಪೋಸ್ಟ್ ಮಾಡಿದ್ದಾರೆ.

ಕಲ್ಯಾಣ ಮಂಟಪದಲ್ಲಿ ವಿವಾಹ: ದಲಿತರ ಮೇಲೆ ಹಲ್ಲೆ

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ಕಲ್ಯಾಣ ಮಂಟಪದಲ್ಲಿ ದಲಿತ ಕುಟುಂಬದ ವಿವಾಹ ಕಾರ್ಯಕ್ರಮ ಆಯೋಜಿಸಿದ್ದಕ್ಕೆ ಆಕ್ರೋಶಗೊಂಡ ಗುಂಪೊಂದು, ಕಲ್ಯಾಣ ಮಂಟಪಕ್ಕೆ ನುಗ್ಗಿ ದಲಿತ ಕುಟುಂಬದ ಸದಸ್ಯರನ್ನು ದೊಣ್ಣೆ ಮತ್ತು ರಾಡ್‌ಗಳಿಂದ ಮನ ಬಂದಂತೆ ಥಳಿಸಿರುವ ಘಟನೆ ಉತ್ತರ ಪ್ರದೇಶದ ರಸಢಾ ಪಟ್ಟಣದಲ್ಲಿ ನಡೆದಿದೆ.

ಈ ಘಟನೆ ಶುಕ್ರವಾರ ನಡೆದಿದ್ದು, ಇಬ್ಬರಿಗೆ ಗಂಭೀರ ಗಾಯಗಳಾಗಿವೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

'ದಲಿತ ಸಮುದಾಯಕ್ಕೆ ಸೇರಿದವರಾದ ನೀವು, ಹೇಗೆ ಕಲ್ಯಾಣ ಮಂಟಪದಲ್ಲಿ ವಿವಾಹ ಕಾರ್ಯಕ್ರಮ ನಡೆಸುತ್ತಿದ್ದೀರಿ ಎಂದು ಪ್ರಶ್ನಿಸಿ ನಮ್ಮನ್ನು ಥಳಿಸಿದರು' ಎಂದು ದಲಿತ ಕುಟುಂಬದವರು ದೂರು ದಾಖಲಿಸಿದ್ದಾರೆ. ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ.'ಕಲ್ಯಾಣ ಮಂಟಪದಲ್ಲಿ ವಿವಾಹವು ಆಯೋಜನೆಗೊಂಡಿತ್ತು. ಬೆಳಿಗ್ಗೆ 10.30ರ ಸುಮಾರಿಗೆ 20 ಜನರ ಗುಂಪು ಏಕಾಏಕಿ ದಾಳಿ ಮಾಡಿ, ಹಿಗ್ಗಾಮುಗ್ಗಾ ಥಳಿಸಿತು' ಎಂದು ಸಂತ್ರಸ್ತರೊಬ್ಬರ ಸಹೋದರ ರಾಘವೇಂದ್ರ ಗೌತಮ್ ದೂರು ನೀಡಿದ್ದಾರೆ.

ದೂರಿನ ಮೇರೆಗೆ ಭಾರತೀಯ ನ್ಯಾಯ ಸಂಹಿತೆ ಮತ್ತು ಎಸ್.ಸಿ, ಎಸ್.ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.



ಫೈನಲ್‌ಗೆ ಲಗ್ಗೆಯಿಟ್ಟ ಶ್ರೇಯಸ್ ಪಡೆ

ಮುಂಬೈ ಇಂಡಿಯನ್ಸ್‌ಗೆ ನಿರಾಸೆ; ಫೈನಲ್‌ನಲ್ಲಿ ಆರ್‌ಸಿಬಿಗೆ ಪಂಜಾಬ್ ಕಿಂಗ್ಸ್ ಮುಖಾಮುಖಿ

ಅಹಮದಾಬಾದ್ (ಪಿಟಿಐ): ನಾಯಕನಿಗೆ ತಕ್ಕ ಆಟವಾಡಿದ ಶ್ರೇಯಸ್ ಅಯ್ಯರ್ (ಅಜೇಯ 87; 41ಎಸೆತ, 4X5, 6X8) ಬ್ಯಾಟಿಂಗ್‌ನಿಂದ ಪಂಜಾಬ್ ಕಿಂಗ್ಸ್ ತಂಡವು ಐಪಿಎಲ್ ಟೂರ್ನಿಯ ಫೈನಲ್‌ಗೆ ಲಗ್ಗೆ ಇಟ್ಟಿತು.

ಭಾನುವಾರ ರಾತ್ರಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಎರಡನೇ ಕ್ವಾಲಿಫಯರ್‌ನಲ್ಲಿ ಕಿಂಗ್ಸ್ ತಂಡವು ಮುಂಬೈ ಇಂಡಿಯನ್ಸ್ ಎದುರು 5 ವಿಕೆಟ್‌ಗಳಿಂದ ಗೆದ್ದಿತು. ಮಂಗಳವಾರ ಇದೇ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್‌ನಲ್ಲಿ ಪಂಜಾಬ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ. ಮೊದಲ ಕ್ವಾಲಿಫಯರ್‌ನಲ್ಲಿ ಪಂಜಾಬ್ ತಂಡವು ಆರ್‌ಸಿಬಿ ಎದುರು ಸೋತಿತ್ತು. ಕಳೆದ 18 ವರ್ಷಗಳಿಂದ ಐಪಿಎಲ್‌ನಲ್ಲಿರುವ ಉಭಯ ತಂಡಗಳು ಇದುವರೆಗೂ ಒಂದು ಬಾರಿಯೂ ಪ್ರಶಸ್ತಿ ಜಯಿಸಿಲ್ಲ. ಆದ್ದರಿಂದ ಈ ಬಾರಿ ಟೂರ್ನಿಗೆ ಹೊಸ ಚಾಂಪಿಯನ್ ಲಭಿಸುವುದು ಖಚಿತವಾಗಿದೆ.

ಟಾಸ್ ಗೆದ್ದ ಪಂಜಾಬ್ ಕಿಂಗ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮಳೆಯಿಂದಾಗಿ ಎರಡು ತಾಸು ವಿಳಂಬವಾಗಿ ಪಂದ್ಯ ಆರಂಭವಾಯಿತು. ಮುಂಬೈ ಇಂಡಿಯನ್ಸ್ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 203 ರನ್ ಗಳಿಸಿತು. ಅದಕ್ಕುತ್ತರವಾಗಿ ಪಂಜಾಬ್ ತಂಡವು 19 ಓವರ್‌ಗಳಲ್ಲಿ 5 ವಿಕೆಟ್‌ಗೆ 207 ರನ್ ಗಳಿಸಿ ಜಯ ಸಾಧಿಸಿತು.

ವರ್ಮಾ (44; 29ಎ, 4X2, 6X2) ಮತ್ತು ಸೂರ್ಯ (44; 26ಎ, 4X4, 6X3) ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 72 ರನ್‌ಗಳನ್ನು ಪೇರಿಸಿದರು. ಇದರಿಂದಾಗಿ ತಂಡವು ಸವಾಲಿನ ಮೊತ್ತ ಪೇರಿಸಿತು. ಜಾನಿ ಬೆಸ್ಟೊ (38; 24ಎ,4X3, 6X1) ಮತ್ತು ನಮನ್ ಧೀರ್ (37; 18ಎ, 4X7) ಅವರೂ ತಂಡಕ್ಕೆ ಉತ್ತಮ ಕಾಣಿಕೆ ನೀಡಿದರು.



ಪಂಜಾಬ್ ಕಿಂಗ್ಸ್ ತಂಡದ ನಾಯಕ ಶ್ರೇಯಸ್ ಅಯ್ಯರ್ ಮತ್ತು ನೇಹಲ್ ವಧೇರಾ ಜೊತೆಯಾಟ –ಎಎಫ್‌ಪಿ ಚಿತ್ರ

ಎಲಿಮಿನೇಟರ್ ಪಂದ್ಯದಲ್ಲಿ ಅಬ್ಬರಿಸಿದ್ದ ರೋಹಿತ್ ಶರ್ಮಾ ಇಲ್ಲಿ ಕೇವಲ 8 ರನ್ ಗಳಿಸಿದರು. ಸ್ಟೊಯಿನಿಸ್ ಎಸೆತದಲ್ಲಿ ವೈಶಾಖ ವಿಜಯಕುಮಾರ್ ಪಡೆದ ಕ್ಯಾಚ್‌ಗೆ ಅವರು ನಿರ್ಗಮಿಸಿದರು. ಕ್ರೀಸ್‌ನಲ್ಲಿದ್ದ ಜಾನಿ ಬೆಸ್ಟೊ ಜೊತೆಗೂಡಿದ ವರ್ಮಾ ಎರಡನೇ ವಿಕೆಟ್ ಜೊತೆಯಾಟದಲ್ಲಿ 51 ರನ್ ಸೇರಿಸಿದ ಇನಿಂಗ್ಸ್‌ಗೆ ಚೇತರಿಕೆ ನೀಡಿದರು. ಜಾನಿ ವಿಕೆಟ್ ಗಳಿಸಿದ ವೇಗಿ ವೈಶಾಖ ಅವರು ಜೊತೆಯಾಟ ಮುರಿದರು.

ಕ್ರೀಸ್‌ಗೆ ಬಂದ ಸೂರ್ಯ ಆರಂಭದಲ್ಲಿ ತುಸು ನಿಧಾನವಾಗಿ ಆಡಿದರು. ವರ್ಮಾ ಮಾತ್ರ ಬೌಂಡರಿ, ಸಿಕ್ಸರ್ ಹೊಡೆಯುತ್ತಲೇ ಇದ್ದರು. ನಿಧಾನವಾಗಿ ತಮ್ಮ ನೈಜ ಆಟಕ್ಕೆ ಕುದುರಿಕೊಂಡ ಸೂರ್ಯ ರನ್ ಗಳಿಕೆಯ ವೇಗ ಹೆಚ್ಚಿಸಿದರು.

ಗಾಯದಿಂದ ಚೇತರಿಸಿಕೊಂಡು ಮರಳಿದ ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರು 14ನೇ ಓವರ್‌ನಲ್ಲಿ ಸೂರ್ಯ ಅವರ ವಿಕೆಟ್ ಗಳಿಸಿದರು. ಜೊತೆಯಾಟ ಮುರಿಯಿತು. ನಂತರದ ಓವರ್‌ನ ಮೊದಲ ಎಸೆತದಲ್ಲಿಯೇ ತಿಲಕ್ ವರ್ಮಾ ಅವರ ವಿಕೆಟ್ ಕೈಲ್ ಜೆಮಿಸನ್ ಪಾಲಾಯಿತು. ಆಗಿನ್ನೂ ತಂಡದ ಮೊತ್ತವು 150 ಕೂಡ ಆಗಿರಲಿಲ್ಲ.

ಟೂರ್ನಿಯ ಕೆಲವು ಪಂದ್ಯಗಳಲ್ಲಿ ಅಂತಿಮ ಹಂತದ ಓವರ್‌ಗಳಲ್ಲಿ ಮಿಂಚಿದ್ದ ನಮನ್ ಧೀರ್ ಕೂಡ ಉತ್ತಮವಾಗಿ ಆಡಿದರು.

ಮಳೆಯಿಂದ ಪಂದ್ಯ ವಿಳಂಬ: ಭಾನುವಾರ ರಾತ್ರಿ ಸುರಿದ ಮಳೆಯಿಂದಾಗಿ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಐಪಿಎಲ್ ಎರಡನೇ ಕ್ವಾಲಿಫಯರ್ ಪಂದ್ಯವು ಸುಮಾರು 2 ತಾಸು ವಿಳಂಬವಾಗಿ ಆರಂಭವಾಯಿತು.

ರಾತ್ರಿ 8.05ರ ಸುಮಾರಿಗೆ ಮಳೆ ನಿಂತ ಮೇಲೆ ಅಂಪೈರ್‌ಗಳು ಪಿಚ್ ಮತ್ತು ಮೈದಾನ ಪರಿಶೀಲಿಸಿದರು. ಆದರೆ 15 ನಿಮಿಷ ಕಳೆದ ನಂತರ ಮತ್ತೆ ಮಳೆ ಬಂದಿತು. ಆದರೆ ಜೋರಾಗಿರಲಿಲ್ಲ.

ಮಳೆ ಸ್ಥಗಿತವಾದ ನಂತರ 9,10ರ ಸುಮಾರಿಗೆ ಅಂಪೈರ್‌ಗಳು ಪಿಚ್ ಪರಿಶೀಲನೆ ಮಾಡಿದರು. 9.40ಕ್ಕೆ ಆಟ ಆರಂಭಿಸಲು ಸೂಚಿಸಿದರು. ಯಾವುದೇ ಓವರ್ ಕಡಿತ ಮಾಡಲಿಲ್ಲ.

ಸಂಕ್ಷಿಪ್ತ ಸ್ಕೋರ್: ಮುಂಬೈ ಇಂಡಿಯನ್ಸ್: 20 ಓವರ್‌ಗಳಲ್ಲಿ 6ಕ್ಕೆ 203 (ಜಾನಿ ಬೆಸ್ಟೊ38, ತಿಲಕ್ ವರ್ಮಾ 44, ಸೂರ್ಯಕುಮಾರ್ ಯಾದವ್ 44, ನಮನ್ ಧೀರ್ 37; ಅಜ್ಮತ್‌ವುಲ್ಲಾ ಒಮರ್‌ಜೈ 43ಕ್ಕೆ 2). ಪಂಜಾಬ್ ಕಿಂಗ್ಸ್: 19 ಓವರ್‌ಗಳಲ್ಲಿ 5ಕ್ಕೆ 207 (ಪ್ರಿಯಾಂಶ್ ಆರ್ಯ 20, ಜೋಶ್ ಇಂಗ್ಲಿಸ್ 38, ಶ್ರೇಯಸ್ ಅಯ್ಯರ್ ಔಟಾಗದೇ 87, ನೇಹಲ್ ವಧೇರಾ 48). ಫಲಿತಾಂಶ: ಪಂಜಾಬ್ ಕಿಂಗ್ಸ್ ತಂಡಕ್ಕೆ 7 ವಿಕೆಟ್ ಜಯ

ಅಹಮದಾಬಾದಿಗೆ ಹೊರಟ ಬೆಂಗಳೂರು ತಂಡದ ಫ್ಯಾನ್ಸ್

ಆರ್‌ಸಿಬಿ ಅಭಿಮಾನಿಗಳ ಹುಮ್ಮಸ್ಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನಾಲ್ಕನೇ ಬಾರಿ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಫೈನಲ್ ಪ್ರವೇಶಿಸಿದೆ. ಕಳೆದ ಮೂರು ಬಾರಿಯೂ ತಂಡವು ರನ್ನರ್ಸ್ ಅಪ್ ಆಗಿತ್ತು. 18 ವರ್ಷಗಳಿಂದ ತಂಡವು ಒಂದು ಸಲವೂ ಚಾಂಪಿಯನ್ ಆಗಿಲ್ಲ. ಆದರೆ ಈ ಬಾರಿ 'ಕಪ್ ಆರ್‌ಸಿಬಿಯದ್ದೇ' ಎಂಬ ವಿಶ್ವಾಸದಲ್ಲಿ ತಂಡದ ಅಭಿಮಾನಿಗಳಿದ್ದಾರೆ.

ತಂಡವು ಫೈನಲ್‌ನಲ್ಲಿ ಜಯಿಸಲಿ ಎಂದು ತಮಗೆ ತಿಳಿದ ಬಗೆಯಲ್ಲಿ ಪ್ರಾರ್ಥನೆ, ಹರಕೆ ಇತ್ಯಾದಿ ಮಾಡುತ್ತಿದ್ದಾರೆ. ಬೆಂಗಳೂರಷ್ಟೇ ಅಲ್ಲ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯೂ ಆರ್‌ಸಿಬಿ ಜ್ವರ ಹೆಚ್ಚುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಅಭಿಮಾನಿಗಳ ವಿಡಿಯೊಗಳು ಗಮನ ಸೆಳೆಯುತ್ತಿವೆ.

ಬೆಂಗಳೂರಿನಲ್ಲಿ ಆಟೋ ಚಾಲಕರಾಗಿರುವ ಪರಶು ರಾಮ್ ಶೆಟ್ಟಿ ಅವರು ಆರ್‌ಸಿಬಿಯ ಅಪ್ಪಟ ಅಭಿಮಾನಿ. ಆರ್‌ಸಿಬಿ ತಂಡದ ಜೆರ್ಸಿ ಧರಿಸಿ ಬಂದವರಿಗೆ ತಮ್ಮ ಆಟೋದಲ್ಲಿ ಉಚಿತವಾಗಿ ಪ್ರಯಾಣಿಸಲು ಅವಕಾಶ ಮಾಡಿಕೊಡುತ್ತಿದ್ದಾರೆ. ಅವರ ಸ್ನೇಹಿತ ಅಜ್ಮಲ್ ಹುಸೇನ್ ಕೂಡ ಇದೇ ರೀತಿಯ ಅಭಿಯಾನ ನಡೆಸಿದ್ದಾರೆ.

'ನಾನು ಹಲವು ವರ್ಷಗಳಿಂದ ಆರ್‌ಸಿಬಿ ಅಭಿಮಾನಿ. ಈ ವರ್ಷವು ನಮಗೆ ಶುಭದಾಯಕವಾಗಿದೆ. ಆರ್‌ಸಿಬಿ ಉನ್ನತ ಫಾರ್ಮ್‌ನಲ್ಲಿದೆ. ಈ ಸಲ ಕಪ್ ನಮ್ದೇ. ನನಗೆ ಮೂವರು ಮಕ್ಕಳಿದ್ದಾರೆ. ಅವರೂ ಕೂಡ ತಂಡದ ಗೆಲುವಿನ ಭರವಸೆಯಲ್ಲಿದ್ದಾರೆ' ಎಂದು ಪರಶುರಾಮ್ ಇನ್ಸ್ಟಾಗ್ರಾಮ್ ವಿಡಿಯೊದಲ್ಲಿ ಹೇಳಿದ್ದಾರೆ. ತಮ್ಮ ಆಟೋದಲ್ಲಿ ಫ್ರೀ ರೈಡ್ ಬಗ್ಗೆ ಪ್ಲೇಕಾರ್ಡ್ ಕೂಡ ಹಿಡಿದಿದ್ದಾರೆ.

ನೇಪಾಳದಲ್ಲಿ ಸಮಗ್ರ ಅಧಿಕಾರಿ ಎಂಬುವವರು ಆರ್‌ಸಿಬಿ ಫ್ಯಾನ್ ಕ್ಲಬ್ ಸ್ಥಾಪಿಸಿದ್ದಾರೆ. ಈ ಕ್ಲಬ್‌ನ ಕೆಲವು ಸದಸ್ಯರು ಒಂದುಗೂಡಿ ಅಹಮದಾಬಾದಿಗೆ ಫೈನಲ್ ವೀಕ್ಷಿಸಲು ತೆರಳುತ್ತಿದ್ದಾರೆ.

'ಫೈನಲ್ ಪಂದ್ಯ ವೀಕ್ಷಿಸಲು ನನಗೆ ಹೋಗಲಾಗುತ್ತಿಲ್ಲ. ನಮ್ಮ ಕೆಲವು ಸದಸ್ಯರು ಹೋಗುತ್ತಿದ್ದಾರೆ. ಉಳಿದಂತೆ ನೇಪಾಳದಲ್ಲಿ ಪಂದ್ಯವನ್ನು ವೀಕ್ಷಿಸಲು ಸ್ಕ್ರೀನಿಂಗ್ ವ್ಯವಸ್ಥೆ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯ ವೀಕ್ಷಣೆಗೆ ನಾವು ಹೋಗಿದ್ದೆವು. ಅದೊಂದು ಅದ್ಭುತ ಅನುಭವ. ಅಲ್ಲಿಯ ಆರ್‌ಸಿಬಿ ಫ್ಯಾನ್ ಆರ್ಮಿ ಮತ್ತು ನಮ್ಮ ಟೀಮ್ ಆರ್‌ಸಿಬಿ ಕ್ಲಬ್‌ಗಳು ನಮಗೆ ಬಹಳಷ್ಟು ಸಹಾಯ ಮಾಡಿದವು. ಅದೊಂದು ಸುಂದರ ಅನುಭವ' ಎಂದು ಸಮಗ್ರ ಅಧಿಕಾರಿ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದಾರೆ.

ದೆಹಲಿಯಲ್ಲಿರುವ ಸೂಪರ್ ಫ್ಯಾನ್ ಅಭಿಮನ್ಯು



ಆರ್‌ಸಿಬಿ ಅಭಿಮಾನಿಗಳ ಸಂಭ್ರಮ

ರಾವ್ ಅವರು ಆರ್‌ಸಿಬಿ ತಂಡವು ಲೀಗ್ ಹಂತದಲ್ಲಿ ಚೆನ್ನೈ ವಿರುದ್ಧ ಗೆದ್ದಾಗ ಸುಮಾರು ಒಂದು ಸಾವಿರ ಜನರಿಗೆ ಊಟ ಹಾಕಿಸಿದ್ದರು. 'ನಾವು 500 ಜನರಿಗೆ ಊಟ ಕೊಡಿಸುವ ಯೋಜನೆ ಮಾಡಿದ್ದೆವು. ಆದರೆ ಅದು ಹಬ್ಬವಾಗಿ ಪರಿವರ್ತನೆಯಾಯಿತು. ಜನರು ಹೆಚ್ಚು ಸೇರಿದ್ದರು. ಆರ್‌ಸಿಬಿ ಫೈನಲ್ ಗೆದ್ದರೆ, ಇದರ ದುಪ್ಪಟ್ಟು ಸಂಖ್ಯೆಯ ಜನರಿಗೆ ಊಟದ ವ್ಯವಸ್ಥೆ ಮಾಡುತ್ತೇವೆ' ಎಂದು ರಾವ್ ಹೇಳಿದ್ದಾರೆ.

2009ರಲ್ಲಿ ಆರ್‌ಸಿಬಿ ಫ್ಯಾನ್ ಆರ್ಮಿ ಆರಂಭಿಸಿದ ಅಲೆನ್ ಅಭಿಷೇಕ್, 'ನಮ್ಮ ಹಲವು ಸದಸ್ಯರು ಅಹಮದಾಬಾದಿಗೆ ಹೋಗುತ್ತಿದ್ದಾರೆ. ಆದರೆ ನಾನು ಬೆಂಗಳೂರಿನಲ್ಲಿ ಇರುತ್ತೇನೆ. ಅವರು ಇಲ್ಲಿ ವಿಶೇಷವಾದ ವಾತಾವರಣ ಇರುತ್ತದೆ. ಬಾವುಟ, ಬ್ಯಾನರ್‌ಗಳು ಸಿದ್ಧವಾಗಿವೆ. ಆ ದಿನ ರಾತ್ರಿ ಇಡೀ ನಗರ ಸುತ್ತುಹಾಕುವ ಯೋಜನೆ ಇದೆ' ಎಂದಿದ್ದಾರೆ.

ಈ ವರ್ಷ ಆರ್‌ಸಿಬಿ ತಂಡವು ತನ್ನ ಆಟಗಾರರು ಪ್ರಯಾಣಿಸುವ ಬಸ್ ಮೇಲೆ ಸೂಪರ್‌ಫ್ಯಾನ್ ಸುಗುಮಾರ್ ಅವರ ಚಿತ್ರವನ್ನು ಮುದ್ರಿಸಿತ್ತು. ಆ ಮೂಲಕ ಅಭಿಮಾನಿಗಳ ಬಳಗಕ್ಕೆ ಧನ್ಯವಾದ ತಿಳಿಸಿತ್ತು.

'ನಮ್ಮ ತಂಡದಲ್ಲಿ 25 ಸದಸ್ಯರಿದ್ದೇವೆ. ಅದರಲ್ಲಿ 20 ಮಂದಿ ಸೋಮವಾರ ಅಹಮದಾಬಾದಿಗೆ ತೆರಳುತ್ತಿದ್ದಾರೆ. ನಾವಷ್ಟೇ ಅಲ್ಲ. ನಮ್ಮ ರಾಜ್ಯದ ಹಲವು ಕ್ಲಬ್‌ಗಳು, ಕೇರಳ, ತಮಿಳುನಾಡು ಮತ್ತಿತರ ರಾಜ್ಯಗಳಿಂದಲೂ ಅಹಮದಾಬಾದ್‌ಗೆ ಫೈನಲ್ ಪಂದ್ಯ ವೀಕ್ಷಿಸಲು ಹೋಗುತ್ತಿದ್ದಾರೆ' ಎಂದು ನಮ್ಮ ಟೀಮ್ ಆರ್‌ಸಿಬಿ ಕ್ಲಬ್‌ನ ಪ್ರೀತಮ್ 'ಪ್ರಜಾವಾಣಿ'ಗೆ ತಿಳಿಸಿದರು.

ಮಾಜಿ ಕ್ರಿಕೆಟಿಗ ಸಬಾ ಕರೀಂ ಸಲಹೆ

'ಗಿಲ್ ಬ್ಯಾಟಿಂಗ್ ಲಯ ಉಳಿಸಿಕೊಳ್ಳಲಿ'

ನವದೆಹಲಿ (ಪಿಟಿಐ): ಮುಂದಿನ ತಿಂಗಳು ಇಂಗ್ಲೆಂಡ್ ಪ್ರವಾಸ ಮಾಡಲಿರುವ ಭಾರತ ತಂಡದ ನಾಯಕ ಶುಭಮನ್ ಗಿಲ್ ಅವರು ಬ್ಯಾಟಿಂಗ್‌ನಲ್ಲಿ ಉತ್ತಮ ಸಾಧನೆ ಮಾಡಬೇಕು. ಆ ಮೂಲಕ ಅವರಿಗೆ ನಾಯಕತ್ವವನ್ನು ನಿಭಾಯಿಸುವ ಆತ್ಮವಿಶ್ವಾಸ ಬೆಳೆಯುತ್ತದೆ ಎಂದು ಮಾಜಿ ಕ್ರಿಕೆಟಿಗ ಸಬಾ ಕರೀಂ ಅಭಿಪ್ರಾಯಪಟ್ಟಿದ್ದಾರೆ.

ಈಚೆಗೆ ರೋಹಿತ್ ಶರ್ಮಾ ಅವರು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದರು. ಅವರ ನಂತರ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ಕೆಲವು ತಿಂಗಳುಗಳ ಹಿಂದೆ ಅನುಭವಿ ಸ್ಪಿನ್ನರ್ ಆರ್. ಅಶ್ವಿನ್ ಅವರೂ ನಿವೃತ್ತರಾಗಿದ್ದರು. ಈ ಮೂವರು ದಿಗ್ಗಜರ ನಿವೃತ್ತಿಯ ನಂತರ ಭಾರತ ಟೆಸ್ಟ್ ಕ್ರಿಕೆಟ್ ತಂಡದ ಹೊಸಯುಗ ಆರಂಭವಾಗಲಿದೆ. ಅದೂ ವಿದೇಶಿ ನೆಲದಲ್ಲಿ ಟೆಸ್ಟ್ ಸರಣಿ ಆಡುವ



ಸಬಾ ಕರೀಂ

ಮೂಲಕ ಗಿಲ್ ಅವರ ನಾಯಕತ್ವದಲ್ಲಿ ತಂಡವು ಕಣಕ್ಕಿಳಿಯಲಿದೆ.

'ಗಿಲ್ ಅವರ ಪಾಲಿಗೆ ಇದು ಸತ್ವ ಪರೀಕ್ಷೆಯಾಗಿದೆ. ಅವರು ಇದಕ್ಕೆ ಸಂಪೂರ್ಣವಾಗಿ ಸಿದ್ಧರಾಗಿದ್ದಾರೆ ಮತ್ತು ಸವಾಲನ್ನು ಸಮರ್ಥವಾಗಿ ಎದುರಿಸಲಿದ್ದಾರೆ' ಎಂದು ಕರೀಂ ಅವರು ವಿಶ್ವಾಸ ವ್ಯಕ್ತಪಡಿಸಿದರು. ಅವರು ಭಾನುವಾರ ಫಿಟ್ ಇಂಡಿಯಾದ ಸೈಕ್ಲಿಂಗ್ ಅಭಿಯಾನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಪಿಟಿಐ ವಿಡಿಯೊಗೆ ಹೇಳಿಕೆ ನೀಡಿದರು.

'ಗಿಲ್ ಅವರಿಗೆ ಆಟಗಾರನಾಗಿ ತಮ್ಮ ಸಾಮರ್ಥ್ಯ ಸಾಬೀತು ಮಾಡಲು ಉತ್ತಮ ಅವಕಾಶವಾಗಿದೆ. ಅವರು ಬ್ಯಾಟಿಂಗ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಬೇಕು. ಬ್ಯಾಟಿಂಗ್‌ನಲ್ಲಿ ಅವರು ಯಶಸ್ವಿಯಾದರೆ, ಅದರ ಉತ್ತಮ ಪರಿಣಾಮವು ನಾಯಕತ್ವದ ಮೇಲೂ ಆಗಲಿದೆ' ಎಂದರು.

'ಯುವ ಆಟಗಾರರು ಇರುವ ಈ ತಂಡವು ಉತ್ತಮ ಫಲಿತಾಂಶವನ್ನು ನೀಡುವ ನಿರೀಕ್ಷೆ ಇದೆ' ಎಂದರು.

ಭಾರತ ಎ ತಂಡದಲ್ಲಿ ಆಡುತ್ತಿರುವ ಕರುಣ್ ನಾಯರ್ ಅವರು ಇಂಗ್ಲೆಂಡ್ ಲಯನ್ಸ್ ವಿರುದ್ಧ ದ್ವಿಶತಕ ಹೊಡೆದಿರುವುದನ್ನು ಶ್ಲಾಘಿಸಿದ ಕರೀಂ, 'ಅವರಿಗ ಅನುಭವಿ ಆಟಗಾರನಾಗಿದ್ದಾರೆ. ಉತ್ತಮವಾಗಿ ಆಡಿರುವ ಅವರು ಎಲ್ಲ ಮಾದರಿಯ ಕ್ರಿಕೆಟ್‌ನಲ್ಲಿಯೂ ಉತ್ತಮ ಕಾಣಿಕೆ ನೀಡಬಲ್ಲರು. ಸಾಯಿ ಸುದರ್ಶನ್ ಕೂಡ ಉತ್ತಮ ಆಟಗಾರ. ಅವರೂ ಎಲ್ಲ ಮಾದರಿಗಳಲ್ಲಿಯೂ ಆಡುವ ಸಮರ್ಥ ಆಟಗಾರನಾಗಿದ್ದಾರೆ' ಎಂದರು.



ಪಿಎಸ್‌ಜಿಗೆ ಕಿರೀಟ

ಪ್ಯಾರಿಸ್ ಸೇಂಟ್- ಜರ್ಮೈನ್ ಎಫ್.ಸಿ (ಪಿಎಸ್‌ಜಿ) ತಂಡವು ಶನಿವಾರ ಜರ್ಮನಿಯ ಮ್ಯೂನಿಕ್‌ನಲ್ಲಿ ನಡೆದ ಯುಇಎಫ್‌ಎ ಚಾಂಪಿಯನ್ಸ್ ಲೀಗ್ ಫುಟ್‌ಬಾಲ್ ಟೂರ್ನಿಯ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಫೈನಲ್ ಹಣಾಹಣಿಯಲ್ಲಿ ಪಿಎಸ್‌ಜಿ ತಂಡವು 5–0 ಗೋಲುಗಳಿಂದ ಇಂಟರ್ ಮಿಲಾನ್ ತಂಡವನ್ನು ಸೋಲಿಸಿತು ಎಪಿ/ಪಿಟಿಐ ಚಿತ್ರ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಕ್ವಾರ್ಟರ್ ಫೈನಲ್‌ಗೆ ಅಲ್ಕರಾಜ್, ಸಬಲೆಂಕಾ

ಜಾಸ್ಮಿನ್ ಪಾವೊಲಿನಿಗೆ ಎಲಿನಾ ಆಘಾತ

ಪ್ಯಾರಿಸ್ (ಎಎಫ್‌ಪಿ): ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಸತತ ನಾಲ್ಕನೇ ಪ್ರಶಸ್ತಿ ಜಯದ ಛಲದಲ್ಲಿರುವ ಇಗಾ ಶ್ವಾಂಟೆಕ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾನುವಾರ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಹಾಲಿ ರನ್ನರ್ ಅಪ್ ಜಾಸ್ಮಿನ್ ಪಾವೊಲಿನಿ ಅವರ ಅಭಿಯಾನ ನಾಲ್ಕನೇ ಸುತ್ತಿನಲ್ಲಿ ಕೊನೆಗೊಂಡಿತು.

ಮಹಿಳೆಯರ ಸಿಂಗಲ್ಸ್‌ನ ನಾಲ್ಕನೇ ಸುತ್ತಿನಲ್ಲಿ ಐದನೇ ಶ್ರೇಯಾಂಕದ ಶ್ವಾಂಟೆಕ್ 1-6, 6-3, 7-5ರಿಂದ 12ನೇ ಶ್ರೇಯಾಂಕದ ಎಲೆನಾ ರಿಬಾಕಿನಾ (ಕಜಕಸ್ತಾನ) ಅವರನ್ನು ಮಣಿಸಿದರು. ಅವರು ಮುಂದಿನ ಸುತ್ತಿನಲ್ಲಿ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಅವರನ್ನು ಎದುರಿಸಲಿದ್ದಾರೆ.

13ನೇ ಶ್ರೇಯಾಂಕದ ಎಲಿನಾ 4-6, 7-6 (8/6), 6-1ರ ಮೂರು ಸೆಟ್‌ಗಳ ರೋಚಕ ಹೋರಾಟದಲ್ಲಿ ನಾಲ್ಕನೇ ಶ್ರೇಯಾಂಕದ ಜಾಸ್ಮಿನ್ (ಇಟಲಿ) ಅವರಿಗೆ ಆಘಾತ ನೀಡಿದರು. ಕಳೆದ ವರ್ಷ ಫೈನಲ್‌ನಲ್ಲಿ ಶ್ವಾಂಟೆಕ್ ಅವರಿಗೆ ಮಣಿದಿದ್ದರು.

ಒಲಿಂಪಿಕ್ ಚಾಂಪಿಯನ್ ಝೆಂಗ್ ಕ್ವಿನ್ವೆನ್ ಅವರೂ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು. ಎಂಟನೇ ಶ್ರೇಯಾಂಕದ ಝೆಂಗ್ 7-6 (7/5), 1-6, 6-3ರಿಂದ 19ನೇ ಶ್ರೇಯಾಂಕದ ರಷ್ಯಾದ ಲಿಯುಡ್ಮಿಲಾ ಸ್ಯಾಮ್ಸೊನೊವಾ ಅವರನ್ನು ಸೋಲಿಸಿದರು. ಅವರ ಮುಂದಿನ ಎದುರಾಳಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ. ಬೆಲಾರಸ್ ಸಬಲೆಂಕಾ 7-5, 6-3ರಿಂದ ಅಮೆರಿಕದ ಅಮಂಡಾ ಅನಿಸಿಮೊವಾ ವಿರುದ್ಧ ಗೆಲುವು ಸಾಧಿಸಿದರು.



ಇಟಲಿಯ ಜಾಸ್ಮಿನ್ ಪಾವೊಲಿನಿ ಅವರಿಗೆ ಆಘಾತ ನೀಡಿದ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಎಎಫ್‌ಪಿ ಚಿತ್ರ

ಅಲ್ಕರಾಜ್‌ಗೆ ಗೆಲುವು: ಹಾಲಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಪುರುಷರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದರು. ಎರಡನೇ ಶ್ರೇಯಾಂಕದ ಅಲ್ಕರಾಜ್ 7-6 (10/8), 6-3, 4-6, 6-4ರಿಂದ ಅಮೆರಿಕದ ಬೆನ್ ಶೆಲ್ಟನ್ ಅವರನ್ನು ಸೋಲಿಸಿದರು. ಅವರು ಮುಂದಿನ ಸುತ್ತಿನಲ್ಲಿ 12ನೇ ಶ್ರೇಯಾಂಕದ ಟಾಮಿ ಪಾಲ್ ಅವರನ್ನು ಎದುರಿಸಲಿದ್ದಾರೆ. ಅಮೆರಿಕದ ಪಾಲ್ 6-3, 6-3, 6-3ರಿಂದ ಆಸ್ಟ್ರೇಲಿಯಾದ ಅಲೆಕ್ಸಿ ಪೊಪಿರಿನ್ ಅವರನ್ನು ಸೋಲಿಸಿದರು. ಇದರೊಂದಿಗೆ 22 ವರ್ಷಗಳ ಬಳಿಕ ಫ್ರೆಂಚ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ಮೊದಲ ಅಮೆರಿಕದ ಆಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾದರು. 2003ರಲ್ಲಿ ಅಮೆರಿಕದ ಆ್ಯಂಡ್ರೆ ಅಗಾಸಿ ಕೊನೆಯ ಬಾರಿ ಇಲ್ಲಿ ಎಂಟರ ಘಟ್ಟ ತಲುಪಿದ್ದರು.

ಭಾರತದ ಅಭಿಯಾನಕ್ಕೆ ತೆರೆ

ಪ್ಯಾರಿಸ್ (ಪಿಟಿಐ): ಅನುಭವಿ ಡಬಲ್ಸ್ ಆಟಗಾರರಾದ ರೋಹನ್ ಬೋಪಣ್ಣ ಮತ್ತು ಯೂಕಿ ಭಾಂಬ್ರಿ ಅವರು ತಮ್ಮ ತಮ್ಮ ಜೊತೆಗಾರರೊಂದಿಗೆ ಭಾನುವಾರ ಮೂರನೇ ಸುತ್ತಿನಲ್ಲಿ ಹೊರಬಿದ್ದರು. ಇದರೊಂದಿಗೆ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಭಾರತೀಯರ ಅಭಿಯಾನಕ್ಕೆ ತೆರೆಬಿತ್ತು.



ರೋಹನ್ ಬೋಪಣ್ಣ

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರ, ಕರ್ನಾಟಕದ ಬೋಪಣ್ಣ ಮತ್ತು ಅವರ ಝೆಕ್ ರಿಪಬ್ಲಿಕ್‌ನ ಜೊತೆಗಾರ ಆ್ಯಡಂ ಪಾವ್ಲಾಸೆಕ್ ಅವರು ಪುರುಷರ ಡಬಲ್ಸ್‌ನ ಪಂದ್ಯದಲ್ಲಿ 2-6, 6-7(5) ರಿಂದ ಎರಡನೇ ಶ್ರೇಯಾಂಕದ ಹ್ಯಾರಿ ಹೆಲಿಯೊವಾರಾ ಮತ್ತು ಹೆನ್ರಿ ಪ್ಯಾಟನ್ (ಫಿನ್ಲ್ಯಾಂಡ್–ಬ್ರಿಟನ್) ಜೋಡಿಗೆ ಮಣಿದರು.

ಭಾಂಬ್ರಿ ಮತ್ತು ಅಮೆರಿಕದ ರಾಬರ್ಟ್ ಗಾಲೊವೆ ಜೋಡಿಯು 4-6, 4-6ರಿಂದ ಒಂಬತ್ತನೇ ಶ್ರೇಯಾಂಕದ ಅಮೆರಿಕದ ಕ್ರಿಶ್ಚಿಯನ್ ಹ್ಯಾರಿಸನ್ ಮತ್ತು ಇವಾನ್ ಕಿಂಗ್ (ಅಮೆರಿಕ) ಅವರಿಗೆ ಶರಣಾಯಿತು.

ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ರಿತ್ವಿಕ್ ಬೊಲ್ಲಿಪಳ್ಳಿ ಈ ಮೊದಲೇ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ಮಾನಸ್‌ಗೆ ಸೋಲು: ಭಾರತದ ಉದಯೋನ್ಮುಖ ಆಟಗಾರ ಮಾನಸ್ ಧಾಮ್ನೆ ಅವರು ಜೂನಿಯರ್ ವಿಭಾಗದಲ್ಲಿ ಬಾಲಕರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲೇ ನಿರಾಸೆ ಅನುಭವಿಸಿದರು. 17 ವರ್ಷ ವಯಸ್ಸಿನ ಈ ಆಟಗಾರ 5-7, 3-6ರ ನೇರ ಸೆಟ್‌ಗಳಿಂದ ಅಮೆರಿದಕ ರೋನಿತ್ ಕರ್ಕಿಗೆ ಮಣಿದರು.

ಥಾಯ್ಲೆಂಡ್ ಓಪನ್ ಬಾಕ್ಸಿಂಗ್: ಭಾರತಕ್ಕೆ 8 ಪದಕ

ಬ್ಯಾಂಕಾಕ್ (ಪಿಟಿಐ): ಭಾರತದ ಬಾಕ್ಸರ್‌ಗಳು ಥಾಯ್ಲೆಂಡ್ ಓಪನ್ ಬಾಕ್ಸಿಂಗ್ ಟೂರ್ನಿಯಲ್ಲಿ ಎಂಟು ಪದಕಗಳೊಂದಿಗೆ ಅಭಿಯಾನ ಕೊನೆಗೊಳಿಸಿದರು. ದೀಪಕ್ ಮತ್ತು ನಮನ್ ತನ್ವರ್ ಅವರು ಭಾನುವಾರ ತಮ್ಮ ವಿಭಾಗಗಳಲ್ಲಿ ಚಿನ್ನದ ಪದಕಗಳನ್ನು ಗೆದ್ದರು.

ಪುರುಷರ 75 ಕೆ.ಜಿ ವಿಭಾಗದ ಫೈನಲ್‌ನಲ್ಲಿ ದೀಪಕ್ 5–0 ಅಂತರದಿಂದ ಉಜ್ಬೇಕಿಸ್ತಾನದ ಅಬ್ದುರಖಿಮೋವ್ ಜಾವೋಖಿರ್ ಅವರನ್ನು ಸೋಲಿಸಿ ಚಿನ್ನ ಗೆದ್ದರೆ, 90 ಕೆ.ಜಿ ಫೈನಲ್‌ನಲ್ಲಿ ನಮನ್ 4–1 ಅಂತರದಿಂದ ಚೀನಾದ ಹಾನ್ ಕ್ಸುಯೆಜೆನ್ ಅವರನ್ನು ಮಣಿಸಿ ಸ್ವರ್ಣಕ್ಕೆ ಕೊರಳೊಡ್ಡಿದರು.

ಮಹಿಳೆಯರ 80 ಕೆ.ಜಿ ಮೇಲ್ಪಟ್ಟ ವಿಭಾಗದ ಫೈನಲ್‌ನಲ್ಲಿ ಕಿರಣ್ 2–3ರಿಂದ ಕಜಕಿಸ್ತಾನದ ಯೆಲ್ಡಾನಾ ತಲಿಪೋವಾ ಅವರಿಗೆ ಸೋತು ಬೆಳ್ಳಿ ತಮ್ಮದಾಗಿಸಿಕೊಂಡರು. ತಮನ್ನಾ (51 ಕೆ.ಜಿ), ಪ್ರಿಯಾ (57 ಕೆ.ಜಿ), ಸಂಜು (60 ಕೆ.ಜಿ), ಸನೆಹ್ (70 ಕೆ.ಜಿ) ಮತ್ತು ಲಾಲ್ಫಕ್ಮಾವಿ ರಾಲ್ಟೆ (80 ಕೆಜಿ) ಕಂಚಿನ ಪದಕ ಗೆದ್ದರು.

ಹಾಕಿ: ಭಾರತಕ್ಕೆ ಮಣಿದ ಉರುಗ್ವೆ

ನವದೆಹಲಿ (ಪಿಟಿಐ): ಭಾರತ ಜೂನಿಯರ್ ಮಹಿಳಾ ತಂಡವು ಅರ್ಜೆಂಟೀನಾದ ರೊಸಾರಿಯೊದಲ್ಲಿ ನಡೆಯುತ್ತಿರುವ ಚತುಷ್ಕೋನ ಜೂನಿಯರ್ ಮಹಿಳಾ ಹಾಕಿ ಟೂರ್ನಿಯಲ್ಲಿ ಉರುಗ್ವೆ ತಂಡದ ವಿರುದ್ಧ ಶೂಟೌಟ್‌ನಲ್ಲಿ ಗೆಲುವು ಸಾಧಿಸಿತು.

ಶನಿವಾರ ನಡೆದ ಪಂದ್ಯದಲ್ಲಿ ನಿಗದಿತ ಅವಧಿಯ ಮುಕ್ತಾಯದ ವೇಳೆಗೆ ಉಭಯ ತಂಡಗಳು 2–2ರ ಸಮಬಲ ಸಾಧಿಸಿದವು. ಭಾರತ ತಂಡದ ಉಪನಾಯಕಿ ಹೀನಾ 10ನೇ ನಿಮಿಷದಲ್ಲಿ ಹಾಗೂ ಲಾಲರಿನ್‌ಪುಯಿ 24ನೇ ನಿಮಿಷದಲ್ಲಿ ಗೋಲುಗಳಿಸಿ ಮುನ್ನಡೆ ತಂದುಕೊಟ್ಟರು. ಉರುಗ್ವೆ ಪರ ಇನಾ ಡಿ ಪೊಸಾಡ (54ನೇ ನಿಮಿಷ) ಹಾಗೂ ಮಿಲಾಗ್ರೊಸ್ ಸೀಗಲ್ (57ನೇ ನಿಮಿಷ) ಗೋಲು ಗಳಿಸಿದರು.

ಚೆಸ್: ನಕಮುರಾಗೆ ಇರಿಗೇಶಿ ಆಘಾತ

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಅರ್ಜುನ್ ಇರಿಗೇಶಿ ಅವರು ನಾರ್ವೆ ಚೆಸ್ ಟೂರ್ನಿಯಲ್ಲಿ ವಿಶ್ವದ ಎರಡನೇ ಕ್ರಮಾಂಕದ ಹಿಕಾರು ನಕಮುರಾ ಅವರಿಗೆ ಆಘಾತ ನೀಡಿದರು. ಮತ್ತೊಂದೆಡೆ ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಮತ್ತೊಂದು ಸೋಲಿನೊಂದಿಗೆ ಜಂಟಿ ಐದನೇ ಸ್ಥಾನಕ್ಕೆ ಕುಸಿದರು.

ಇರಿಗೇಶಿ (6) ವಿರುದ್ಧ ನಕಮುರಾ (6.5) ಅವರಿಗೆ ಗೆಲ್ಲುವ ಉತ್ತಮ ಅವಕಾಶವಿತ್ತಾದರೂ ದೀರ್ಘ ಆಟದ ನಂತರ ಪಂದ್ಯ ಡ್ರಾ ಆಯಿತು. ಫಲಿತಾಂಶ ನಿರ್ಧರಿಸಲು ನಡೆಯುವ ಕಾಲಮಿತಿಯ 'ಆರ್ಮ್‌ಗೆಡನ್'ನಲ್ಲಿ ಭಾರತದ ಜಿಎಂ ಗೆಲುವಿನ ನಗೆ ಬೀರಿದರು.

ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಶನಿವಾರವೂ ಮಿಂಚಿದರು. ಅಮೆರಿಕದ ಮತ್ತೊಬ್ಬ ಗ್ರ್ಯಾಂಡ್ ಮಾಸ್ಟರ್ ಫ್ಯಾಬಿಯಾನೊ ಕರುವಾನ (8) ಅವರನ್ನು 'ಆರ್ಮ್‌ಗೆಡನ್'ನಲ್ಲಿ ಮಣಿಸಿ ಕಾರ್ಲ್‌ಸನ್ 9.5 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದರು.

ಚೀನಾದ ಗ್ರ್ಯಾಂಡ್‌ಮಾಸ್ಟರ್ ವೀ ಯಿ ವಿರುದ್ಧ ಗುಕೇಶ್ ದೀರ್ಘ ಆಟದ ಪಂದ್ಯದಲ್ಲಿ ಡ್ರಾ ಸಾಧಿಸಿ, 'ಆರ್ಮ್‌ಗೆಡನ್'ನಲ್ಲಿ ಸೋಲೊಪ್ಪಿಕೊಂಡರು. ಉಭಯ ಆಟಗಾರರು ತಲಾ 5.5 ಅಂಕ ಗಳಿಸಿದ್ದಾರೆ.



ಅರ್ಜುನ್ ಇರಿಗೇಶಿ

ಮುನ್ನಡೆಯಲ್ಲಿ ಹಂಪಿ: ಮಹಿಳೆಯರ ವಿಭಾಗದಲ್ಲಿ ಗೆಲುವಿನ ಓಟ ಮುಂದುವರಿಸಿದರುವ ಭಾರತದ ಗ್ರ್ಯಾಂಡ್‌ಮಾಸ್ಟರ್ ಕೋನೇರು ಹಂಪಿ (8.5) ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಅವರು ಚೀನಾದ ಲಿ ಟಿಂಗ್ಜಿ (5) ಅವರನ್ನು ಮಣಿಸಿದರು. ಉಕ್ರೇನ್‌ನ ಅನ್ನಾ ಮುಝಿಚುಕ್ (8) ಎರಡನೇ ಸ್ಥಾನದಲ್ಲಿದ್ದಾರೆ.



ರಿಂಕು ಸಿಂಗ್



ಪ್ರಿಯಾ

ಜೂನ್ 8ಕ್ಕೆ ಸಂಸದೆ ಜೊತೆ ರಿಂಕು ಸಿಂಗ್ ನಿಶ್ಚಿತಾರ್ಥ

ಜೌನ್‌ಪುರ (ಉತ್ತರ ಪ್ರದೇಶ) (ಪಿಟಿಐ): ಕ್ರಿಕೆಟಿಗ ರಿಂಕು ಸಿಂಗ್ ಅವರು ಸಮಾಜವಾದಿ ಪಕ್ಷದ ಸಂಸದೆ ಪ್ರಿಯಾ ಸರೋಜ್ ಅವರೊಂದಿಗೆ ಇದೇ 8ರಂದು ನಿಶ್ಚಿತಾರ್ಥ ಮಾಡಿಕೊಳ್ಳಲಿದ್ದಾರೆ.

ಈ ಬಗ್ಗೆ ಪ್ರಿಯಾ ಅವರ ತಂದೆ, ಎಸ್‌ಪಿಯ ಹಿರಿಯ ನಾಯಕ ತೂಫಾನಿ ಸರೋಜ್ ಭಾನುವಾರ ಮಾಹಿತಿ ಹಂಚಿಕೊಂಡಿದ್ದಾರೆ.

27 ವರ್ಷದ ರಿಂಕು ಸಿಂಗ್ ಅವರು ಭಾರತ ತಂಡದಲ್ಲಿ 2 ಏಕದಿನ ಪಂದ್ಯ ಹಾಗೂ 33 ಟಿ20 ಪಂದ್ಯಗಳಲ್ಲಿ ಆಡಿದ್ದಾರೆ. ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಪ್ರಮುಖ ಆಟಗಾರರಾಗಿಯೂ ಗುರುತಿಸಿಕೊಂಡಿದ್ದಾರೆ. ಪ್ರಿಯಾ (26) ಅವರು ಜೌನ್‌ಪುರದ ಮಚಲೀಶಹರ್ ಕ್ಷೇತ್ರದ ಸಂಸದೆಯಾಗಿದ್ದಾರೆ.

ರಾಜ್ಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಓರಿಯನ್ಸ್‌ಗೆ ಮಣಿದ ಸಹಕಾರನಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಘವ್ ಅವರ ಆಟದ ಬಲದಿಂದ ಓರಿಯನ್ಸ್ ಎಸ್.ಸಿ ತಂಡವು ಡಿ.ಎನ್. ರಾಜಣ್ಣ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗ ದಲ್ಲಿ 68–59ರಿಂದ ಸಹಕಾರನಗರ ಬಿ.ಸಿ ತಂಡವನ್ನು ಸೋಲಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಭಾನುವಾರ ನಡೆದ ಲೀಗ್‌ನ ಪಂದ್ಯದಲ್ಲಿ ವಿರಾಮದ ವೇಳೆಗೆ 28–44ರಿಂದ ಹಿನ್ನಡೆಯಲ್ಲಿದ್ದ ಓರಿಯನ್ಸ್ ತಂಡವು ನಂತರ ಚೇತರಿಸಿಕೊಂಡು ಗೆಲುವು ಸಾಧಿಸಿತು. ಓರಿಯನ್ಸ್ ಪರ ರಾಘವ್ 29 ಮತ್ತು ನಮೀಶ್ 16 ಅಂಕ ಗಳಿಸಿದರು. ಸಹಕಾರನಗರ ಪರ ದಿವ್ಯಾಂಶು 21, ಮನೋಜ್ಞ 10 ಅಂಕ ಕಲೆಹಾಕಿದರು.

ಫಲಿತಾಂಶ: ಬಾಲಕರು: ಬೆಂಗಳೂರು ವ್ಯಾನ್ಗಾರ್ಡ್ಸ್ 76-44ರಿಂದ ಪಟ್ಟಾಭಿರಾಮ್ ಬಿ.ಸಿ ವಿರುದ್ಧ; ಪಿಪಿಸಿ 79–50ರಿಂದ ಸಿನ್ಸಿನಾಟಿಕ್ಸ್ ಬಿ.ಸಿ ವಿರುದ್ಧ; ಎಂ.ಎನ್.ಕೆ. ರಾವ್ ಪಾರ್ಕ್ ಬಿ.ಸಿ 71–13ರಿಂಧ ನೆಟ್ಟಕಲ್ಲಪ್ಪ ಬಿ.ಸಿ ವಿರುದ್ಧ; ಡಿವೈಇಎಸ್ ಬೆಂಗಳೂರು 82–22ರಿಂದ ದೇವಾಂಗ ಯೂನಿಯನ್ ವಿರುದ್ಧ; ಪಟ್ಟಾಭಿರಾಮ್ ಬಿ.ಸಿ 71–58ರಿಂದ ಧಾರವಾಡ ಜಿಲ್ಲಾ ಎ ವಿರುದ್ಧ; ಐಬಿಬಿಸಿ 59–36ರಿಂದ ಮೌಂಟ್ಸ್ ಕ್ಲಬ್ ವಿರುದ್ಧ ಜಯ ಸಾಧಿಸಿತು. ಓರಿಯನ್ಸ್ ಎಸ್‌ಸಿ 68–59ರಿಂದ ಸಹಕಾರನಗರ ಬಿ.ಸಿ ವಿರುದ್ಧ; ಬಿಸಿವೈಎ 54–33ರಿಂದ ವಿವೇಕ್ಸ್ ಎಸ್.ಸಿ ವಿರುದ್ಧ; ವೈಎಂಎಂಎ 52–26ರಿಂದ ಸಹಕಾರನಗರ ಬಿ.ಸಿ ವಿರುದ್ಧ; ಎಂಸಿಎಚ್‌ಎಸ್ 51–17ರಿಂದ ಮೌಂಟ್ಸ್ ಕ್ಲಬ್ ವಿರುದ್ಧ; ರಾಜ್‌ಮಹಲ್ ಬಿ.ಸಿ 67–51ರಿಂದ ಹೆಬ್ಬಾಳ ಬಿ.ಸಿ ವಿರುದ್ಧ ಗೆಲುವು ಸಾಧಿಸಿತು.

ಬಾಲಕಿಯರು: ಮೌಂಟ್ಸ್ ಕ್ಲಬ್ 63–40ರಿಂದ ದೇವಾಂಗ ಯೂನಿಯನ್ ಎದುರು; ಯಂಗ್ ಓರಿಯನ್ಸ್ ಎಸ್.ಸಿ 40–23ರಿಂದ ಲಕ್ಷ್ಮನ್ ಬಿ.ಸಿ ಎದುರು; ಮೈಸೂರು ಜಿಲ್ಲೆ ಎ ತಂಡವು ಪಟ್ಟಾಭಿರಾಮ್ ಬಿ.ಸಿ ಎದುರು; ಎಸ್.ಬ್ಲೂಸ್ 36–6ರಿಂದ ಪಿಪಿಸಿ ಎದುರು; ಭಾರತ್ ಎಸ್.ಯು 32–29ರಿಂದ ವಿಮಾನಪುರ ಎಸ್.ಸಿ ಎದುರು; ಎಂಎನ್‌ಕೆ ರಾವ್ ಪಾರ್ಕ್ ಬಿ.ಸಿ 43–15ರಿಂದ ವೈಎಂಎಂಎ ಎದುರು; ರಾಜ್‌ಮಹಲ್ ಬಿ.ಸಿ 64–20ರಿಂದ ಓರಿಯನ್ಸ್ ಎಸ್.ಸಿ ಎದುರು; ಬೆಂಗಳೂರು ಸ್ಪೋರ್ಟಿಂಗ್ 33–23ರಿಂದ ವಿಮಾನಪುರ ಎಸ್.ಸಿ ಎದುರು ಜಯ ಗಳಿಸಿತು.



ನೆಟ್ಟಕಲ್ಲಪ್ಪ ಬಿ.ಸಿ ತಂಡದ ಹಿತಿನ್ (ಎಡ) ಮತ್ತು ಎಂ.ಎನ್.ಕೆ. ರಾವ್ ಪಾರ್ಕ್ ಬಿ.ಸಿ ತಂಡದ ಯಶಸ್ (ಬಲ) ಅವರು ಚೆಂಡಿಗಾಗಿ ಸೆಣಸಾಟ ನಡೆಸಿದರು

ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಇನಿಂಗ್ಸ್ ಮುನ್ನಡೆಯತ್ತ ಇಂಗ್ಲೆಂಡ್ ಲಯನ್ಸ್

ಕ್ಯಾಂಟರ್‌ಬರಿ, ಇಂಗ್ಲೆಂಡ್ (ಪಿಟಿಐ): ವೇಗಿ ಮುಕೇಶ್ ಕುಮಾರ್ (75ಕ್ಕೆ 3) ಅವರ ಪರಿಣಾಮಕಾರಿ ದಾಳಿಯ ಹೊರತಾಗಿಯೂ ಭಾರತ 'ಎ' ತಂಡದ ವಿರುದ್ಧ 'ಟೆಸ್ಟ್' ಪಂದ್ಯದಲ್ಲಿ ಇಂಗ್ಲೆಂಡ್ ಲಯನ್ಸ್ ತಂಡವು ಇನಿಂಗ್ಸ್ ಮುನ್ನಡೆಯತ್ತ ಸಾಗಿದೆ.

ಭಾರತ ಎ ತಂಡ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 557 ರನ್‌ಗಳಿಗೆ ಉತ್ತರವಾಗಿ ಲಯನ್ಸ್ ತಂಡವು ಭಾನುವಾರದ ದಿನದಾಟದ ಅಂತ್ಯಕ್ಕೆ 7 ವಿಕೆಟ್‌ಗಳಿಗೆ 527 ರನ್ ಕಲೆಹಾಕಿದೆ. ಇನಿಂಗ್ಸ್ ಮುನ್ನಡೆಗೆ 30 ರನ್ ಬೇಕಿದೆ. ಸೋಮವಾರ ಪಂದ್ಯಕ್ಕೆ ಕೊನೆಯ ದಿನವಾಗಿದೆ.

ಎರಡನೇ ದಿನದಾಟಕ್ಕೆ 2ಕ್ಕೆ 237 ರನ್ ಗಳಿಸಿದ್ದ ಲಯನ್ಸ್ ತಂಡವು ಮೂರನೇ ದಿನವೂ ಬ್ಯಾಟಿಂಗ್‌ನಲ್ಲಿ ಹಿಡಿತ ಸಾಧಿಸಿತು. ಟಾಮ್ ಹೈನ್ಸ್ (171;279ಎ), ಮ್ಯಾಕ್ಸ್ ಹೋಲ್ಡನ್ (101;101ಎ) ಮತ್ತು ಡಾನ್ ಮೌಸ್ಲಿ (113;157ಎ) ಶತಕ ಗಳಿಸಿ ತಂಡಕ್ಕೆ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಭಾರತ ಎ: 125.1 ಓವರ್‌ಗಳಲ್ಲಿ 557. ಇಂಗ್ಲೆಂಡ್ ಲಯನ್ಸ್: 124 ಓವರ್‌ಗಳಲ್ಲಿ 7ಕ್ಕೆ 527 (ಟಾಮ್ ಹೈನ್ಸ್ 171, ಮ್ಯಾಕ್ಸ್ ಹೋಲ್ಡನ್ 101, ಡಾನ್ ಮೌಸ್ಲಿ 113; ಮುಕೇಶ್ ಕುಮಾರ್ 75ಕ್ಕೆ 3).